
ಪುಸ್ತಕ ಪ್ರಪಂಚ

ಸಂಪುಟ ೩೮ ೧೯೮೪ ಮೇ ಸಂಚಿಕೆ ೧೦



ವಿ ಷ ಯ ಸೂ ಚಿ

ಮುಖಚಿತ್ರ : ತ.ರಾ.ಸು

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ಮೇ ೧೯೮೪ ಸಂಚಿಕೆ ೧೦

ತ. ರಾ. ಸು.

'ತರಾಸು' ಎಂಬ ಮೂರು ಅಕ್ಷರಗಳಿಂದ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಸಿದ್ಧರಾಗಿದ್ದ ತಳುಕಿನ ರಾಮಸ್ವಾಮಯ್ಯ ಸುಬ್ಬರಾಯರು(೧೯೨೦-೧೯೮೪। ಕನ್ನಡನಾಡು–ನುಡಿಗಳ ಸೇವೆಯನ್ನು ಸುಮಾರು ನಾಲ್ಕು ದಶಕಗಳ ಕಾಲ ಮಾಡಿ 'ಧನ್ಯ'ರಾದವರು. ಭಾರತ ಸ್ವಾತಂತ್ರ್ಯ ಸಂಗ್ರಾಮ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳಲ್ಲೂ ಅವರು ಸಕ್ರಿಯವಾಗಿ ಭಾಗವಹಿಸಿದ್ದರು.

ತರಾಸು ಅವರು ಹುಟ್ಟಿದ್ದು 'ಸಾಹಿತ್ಯದ ವಂಶ'ದಲ್ಲಿ (ಜನನ: ೨೧-೪-೧೯೨೦). ಅವರ ತಾತ ತಳುಕಿನ ಸುಬ್ಬಣ್ಣನವರ 'ಆಶುಕವಿತಾ ರಚನೆ'ಗೆ ಹೆಸರಾಗಿದ್ದರು. ಅವರ ತಂದೆ ರಾಮಸ್ವಾಮಯ್ಯನವರಿಗೆ ಸಾಹಿತಿಗಳೊಂದಿಗೆ ಸ್ನೇಹ–ಸಂಪರ್ಕಗಳಿದ್ದವು. ಅವರ ದೊಡ್ಡಪ್ಪ ತಳುಕಿನ ವೆಂಕಣ್ಣಯ್ಯನವರು ಕನ್ನಡದ ಹಿರಿಯ ವಿದ್ವಾಂಸರಾಗಿದ್ದರು. ಆದ್ದರಿಂದ ಸಹಜವಾಗಿಯೇ ಸುಬ್ಬರಾಯರು ಚಿಕ್ಕಂದಿನಲ್ಲಿಯೇ ಸಾಹಿತ್ಯಕ್ಕೆ ಒಲಿದರು. ಜೊತೆಗೆ ದೇಶಾಭಿಮಾನವನ್ನೂ ಬೆಳೆಸಿಕೊಂಡರು. ಚಿತ್ರದುರ್ಗದಲ್ಲಿ ಶಾಲಾ ವ್ಯಾಸಂಗಕ್ಕೆ ತೊಡಗಿದ ಅವರು ಶಿವಮೊಗ್ಗ ಮತ್ತು ತುಮಕೂರಿನಲ್ಲಿ ಓದಿ ಆಗಿನ 'ಇಂಟರ್' ತರಗತಿಯವರೆಗೆ ಬಂದರು. ಆಗ್ಗೆ ದೇಶದ ತುಂಬ ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಮೊಳಗುತ್ತಿತ್ತು. ಅದರಿಂದ ಪ್ರಭಾವಿತರಾದ ಸುಬ್ಬರಾಯರು ಶಾಲಾ ವ್ಯಾಸಂಗವನ್ನು ಬಿಟ್ಟು ಗೆಳೆಯರೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಒಂಬತ್ತನೆಯ ವಯಸ್ಸಿನಲ್ಲಿಯೇ ಸಾರ್ವಜನಿಕ ಭಾಷಣ ಮಾಡಿದ ಅವರು, ಮುಂದೆ 'ರಾಷ್ಟ್ರಧ್ವಜ ಸತ್ಯಾಗ್ರಹ' ಮತ್ತು 'ಚಲೋಜಾವ್ ಚಳುವಳಿ'ಗಳಲ್ಲೂ ಭಾಗವಹಿಸಿ ಸೆರೆಮನೆ ವಾಸವನ್ನೂ ಅನುಭವಿಸಿದರು.

ಸೆರೆಮನೆ ವಾಸದಿಂದ ಬಿಡುಗಡೆ ಹೊಂದಿದ ತರಾಸು, ದೇಶಸೇವೆಯ ಇನ್ನೊಂದು ಮಾರ್ಗವಾಗಿದ್ದ ಪತ್ರಿಕಾ ಪ್ರಪಂಚವನ್ನು ಪ್ರವೇಶಿಸಿದರು. ಅಲ್ಲಿ ಅವರಿಗೆ ಮಾರ್ಗದರ್ಶಕರಾಗಿದ್ದವರು ಹೆಸರಾಂತ ಪತ್ರಿಕೋದ್ಯಮಿ ಸಿದ್ದವನಹಳ್ಳಿ ಕೃಷ್ಣಶರ್ಮರು. ಶರ್ಮರ ದೊಡ್ಡ ವ್ಯಕ್ತಿತ್ವದಿಂದ ಪ್ರಭಾವಿತರಾದ ತರಾಸು 'ವಿಶ್ವಕರ್ನಾಟಕ' ಪತ್ರಿಕೆಯಲ್ಲಿ ಕೆಲಸ ಮಾಡಿದರು. ಅನಂತರ 'ಪ್ರಜಾಮತ', 'ವಾಹಿನಿ' ಮತ್ತು 'ಪ್ರಜಾವಾಣಿ' ಪತ್ರಿಕೆಗಳಲ್ಲೂ ದುಡಿದರು.

ಕರ್ನಾಟಕದ ಹಿರಿಯ ರಾಜಕಾರಣಿ ಸಿದ್ದವನಹಳ್ಳಿ ನಿಜಲಿಂಗಪ್ಪ, ಹಿರಿಯ ವಿದ್ವಾಂಸರಾಗಿದ್ದ ಟಿ. ಎಸ್. ವೆಂಕಣ್ಣಯ್ಯ; ಹೆಸರಾಂತ ಸಂಶೋಧಕರಾಗಿದ್ದ ಹುಲ್ಲೂರು ಶ್ರೀನಿವಾಸ ಜೋಯಿಸ್ ಮತ್ತು 'ಕಾದಂಬರೀ ಸಾರ್ವಭೌಮ' ಅನಕೃ ಅವರುಗಳ ಪ್ರೋತ್ಸಾಹ ಮತ್ತು ಮಾರ್ಗದರ್ಶನದಿಂದ ತಮ್ಮ ಬದುಕು-ಬರೆಹಗಳನ್ನು ರೂಪಿಸಿಕೊಂಡ ತರಾಸು ಅವರು ದೊಡ್ಡ ಮಟ್ಟದಲ್ಲಿ ಸಾಹಿತ್ಯ ಚಟುವಟಿಕೆಗಳನ್ನು ನಡೆಸಿದರು. ಅನಕೃ ಅವರ ನೇತೃತ್ವದಲ್ಲಿ ಆರಂಭ ವಾದ 'ಪ್ರಗತಿಶೀಲ ಸಾಹಿತ್ಯ ಚಳುವಳಿ' ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಯಲ್ಲಿ ಒಂದು ಮುಖ್ಯವಾದ ಘಟ್ಟ. ಆ ಚಳುವಳಿಯ ಮುಂಚೂಣಿ ಬರೆಹ ಗಾರರಲ್ಲಿ ತರಾಸು ಒಬ್ಬರು.

ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ ಮುಂತಾದ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ನೂರಕ್ಕೂ ಮಿಕ್ಕ ಕೃತಿಗಳನ್ನು ತರಾಸು ಅವರು ಪ್ರಕಟಿಸಿ ದ್ದಾರೆ. ಪ್ರಕಟವಾದ ಅವರ ಮೊದಲನೆಯ ಕಾದಂಬರಿ 'ಮನೆಗೆ ಬಂದ ಮಹಾ ಲಕ್ಷ್ಮಿ' (೧೯೪೩) ಒಂದು ಸಾಮಾಜಿಕ ಕಾದಂಬರಿ. 'ಮುಂಜಾವಿನಿಂದ ಮುಂಜಾವು', 'ಗಾಳಿಮಾತು', 'ಜೀತದ ಜೀವ', 'ಬಿಡುಗಡೆಯ ಬೇಡಿ' 'ಚಂದನದ ಗೊಂಬೆ', 'ಚಂದವಳ್ಳಿಯ ತೋಟ', 'ಚಕ್ರತೀರ್ಥ', 'ಮಸಣದ ಹೂ', 'ಸರ್ಪಮತ್ಸರ', 'ಖೋಟಾ ನೋಟು' ಮತ್ತು 'ಗೃಹಲಕ್ಷ್ಮಿ' ಇವು ತರಾಸು ಅವರು ರಚಿಸಿರುವ ಇತರ ಸಾಮಾಜಿಕ ಕಾದಂಬರಿಗಳು. ಶ್ರೀಮಂತರ ಅಟ್ಟಹಾಸ, ಬಡವರ ಬಾಳಿನ ಗೋಳು, ಸ್ತ್ರೀಯರ ಶೋಷಣೆ, ವೇಶ್ಯಾ ಸಮಸ್ಯೆ, ಕುಟುಂಬ ಕಲ್ಯಾಣ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಕುರಿತು ತರಾಸು ಈ ಕಾದಂಬರಿಗಳಲ್ಲಿ ವಿವೇಚಿಸಿದ್ದಾರೆ. ಬರೆವಣಿಗೆಯ ತೀಕ್ಷ್ಣತೆ; ಹೃದ್ಯವಾದ ಗದ್ಯ ಮತ್ತು ಆತ್ಮೀಯತೆ-ಅಂತಃಕರಣಗಳು ತರಾಸು ಕಾದಂಬರಿ ಗಳ ಹೃದಯ ಗುಣಗಳು. ತರಾಸು ಅವರ 'ಚಕ್ರತೀರ್ಥ', 'ಗಾಳಿ ಮಾತು', 'ನಾಗರಹಾವು', 'ಚಂದವಳ್ಳಿಯ ತೋಟ', 'ಚಂದನದಗೊಂಬೆ', 'ಬೆಂಕಿಯ ಬಲೆ'

—ಈ ಕಾದಂಬರಿಗಳು ಚಲನಚಿತ್ರಗಳೂ ಆಗಿ ಜನಪ್ರಿಯವಾಗಿವೆ.

ಐತಿಹಾಸಿಕ ಕಾದಂಬರಿಗಳ ರಚನೆಯಲ್ಲಿ ತರಾಸು ಅದ್ವಿತೀಯರಾಗಿದ್ದರು; ಚರಿತ್ರೆಗೆ 'ಕಥೆ' ಕಟ್ಟುವ ಕಲೆಯನ್ನು ಅವರು ಬಹು ಚೆನ್ನಾಗಿ ರೂಢಿಸಿಕೊಂಡಿದ್ದರು. ಕರ್ನಾಟಕದ ಉಜ್ವಲವಾದ ಇತಿಹಾಸವನ್ನು ಅವರು ಶ್ರದ್ಧೆಯಿಂದ ಅಭ್ಯಾಸ ಮಾಡಿದ್ದರು. ಚಿತ್ರದುರ್ಗ ಚೆಟ್ಟಕ್ಕೆ ಸಂಬಂಧಿಸಿದ ಐತಿಹಾಸಿಕ ವಿವರಗಳನ್ನು ಆಧರಿಸಿಕೊಂಡು 'ಕಂಬನಿಯ ಕುಯಿಲು', 'ರಾಜ್ಯದಾಹ', 'ತಿರುಗುಬಾಣ', 'ರಕ್ತರಾತ್ರಿ', 'ವಿಜಯೋತ್ಸಾಹ' ಮುಂತಾದ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದರು. ಈ ಐತಿಹಾಸಿಕ ಕಾದಂಬರಿಗಳ ಮಾಲೆಯಲ್ಲಿ 'ಮಕುಟಮಣಿ'ಯಾಗಿರುವ 'ದುರ್ಗಾಸ್ತಮಾನ' (೧೯೮೨) ಒಂದು ಅನನ್ಯವಾದ ಕೃತಿ. ಚಿತ್ರದುರ್ಗವನ್ನು ಆಳಿದ ಪಾಳೆಯಗಾರರಲ್ಲಿ ಕೊನೆಯವನಾದ ಮದಕರಿ ನಾಯಕನ 'ವೀರಕಥೆ' ಈ ಕಾದಂಬರಿಯಲ್ಲಿ ಉಜ್ವಲವಾಗಿ ವರ್ಣಿತವಾಗಿದೆ. ಅರಮನೆಯಲ್ಲಿ ನಡೆಯುತ್ತಿದ್ದ ಪಿತೂರಿಗಳು, ಅಧಿಕಾರಿಗಳು ನಡೆಸುತ್ತಿದ್ದ ಕುತಂತ್ರಗಳು ಮತ್ತು ಆ ಕಾಲದ ಜನಜೀವನ-ಇವೆಲ್ಲಾ ಈ ಕಾದಂಬರಿಯಲ್ಲಿ ಜೀವಂತವಾಗಿ ಮೂಡಿವೆ. 'ನೃಪತುಂಗ', 'ಹಂಸಗೀತೆ', 'ಸಿಡಿಲ ಮೊಗ್ಗು' ತರಾಸು ಬರೆದಿರುವ ಇತರ ಐತಿಹಾಸಿಕ ಕಾದಂಬರಿಗಳು.

'ಕಥನಕಲೆ'ಯಲ್ಲೂ ತರಾಸು ಸಿದ್ಧಹಸ್ತರಾಗಿದ್ದರು. 'ರೂಪಸಿ', 'ಗಿರಿಮಲ್ಲಿಗೆಯ ನಂದನದಲ್ಲಿ' ಮತ್ತು 'ತೊಟ್ಟಿಲು ತೂಗಿತು' ಇವು ತರಾಸು ಪ್ರಕಟಿಸಿರುವ ಕಥಾ ಸಂಕಲನಗಳು. 'ಮೃತ್ಯು ಸಿಂಹಾಸನ', 'ಮಹಾಶ್ವೇತೆ', 'ಅನ್ನಾವತಾರ' ಎಂಬುವು ತರಾಸು ರಚಿಸಿರುವ ಮೂರು ನಾಟಕಗಳು. ತಮ್ಮ 'ಸಾಹಿತ್ಯಗುರು'ವಾಗಿದ್ದ ಅನಕೃ ಅವರನ್ನು ಕುರಿತು ಒಂದು ಜೀವನ ಚರಿತ್ರೆಯನ್ನು ಬರೆದಿದ್ದಾರೆ.

ತರಾಸು ಭಾಷಾಂತರ ಕ್ಷೇತ್ರದಲ್ಲೂ ಕೈಯಾಡಿಸಿದ್ದರು. 'ಬಾರ್ಬೋಸ, ಕಂಡ ವಿಜಯನಗರ' 'ಗಾಂಧೀಜಿ', 'ಮಾಡಂಬಾವರಿ' ಮತ್ತು 'ನಿಮ್ಮ ಆಹಾರ' ಎಂಬ ಕೃತಿಗಳನ್ನು ಅವರು ಇಂಗ್ಲಿಷಿನಿಂದ ಕನ್ನಡಕ್ಕೆ ತಂದಿದ್ದಾರೆ. 'ಕ್ರಿಯಾಶಕ್ತಿ ವಿದ್ಯಾರಣ್ಯ' ಎಂಬುದು ತರಾಸು ಪ್ರಕಟಿಸಿರುವ ಒಂದು ವಿಮರ್ಶಾ ಕೃತಿ. 'ದಳಪತಿ ಜವಾಹರ್' ಮತ್ತು 'ಶ್ರೀ ಜಗದ್ಗುರು' ಎಂಬುವು ಅವರು ಸಂಪಾದಿಸಿರುವ ಎರಡು ಕೃತಿಗಳು.

ತರಾಸು ಸಲ್ಲಿಸಿದ ಸಾಮಾಜಿಕ ಸೇವೆಯೂ ಗಣ್ಯವಾದುದು. 'ಕನ್ನಡ ಚಳುವಳಿ'ಯ ಮುಂಚೂಣಿ ನಾಯಕರಲ್ಲಿ ಒಬ್ಬರಾಗಿದ್ದ ಅವರು 'ಕನ್ನಡ

ಪಕ್ಷ'ದ ಅಧ್ಯಕ್ಷರೂ ಆಗಿದ್ದರು. ಮೈಸೂರು ಪುರಸಭೆಯ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದರು.

ತರಾಸು ಅವರ ಸಂಮೃದ್ಧವಾದ ಸಾಹಿತ್ಯ ಸೇವೆಗೆ ಬಗೆ ಬಗೆಯ ಬಹುಮಾನಗಳು ದೊರೆತವು. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಚಿನ್ನದ ಹಬ್ಬದ ವರ್ಷದಲ್ಲಿ (೧೯೭೦) ತರಾಸು ಅವರಿಗೆ 'ಶ್ರೇಷ್ಠ ಕಾದಂಬರಿಕಾರ' ಎಂಬ ಪ್ರಶಸ್ತಿ ನೀಡಿ ಗೌರವಿಸಿತು. ಚಿತ್ರದುರ್ಗದ ಮದಕರಿ ಬಳಗದವರು ೧೯೭೮ ರಲ್ಲಿ ತರಾಸು ಅವರನ್ನು ಸಾರ್ವಜನಿಕವಾಗಿ ಸನ್ಮಾನಿಸಿ ಗೌರವಿಸಿದರು. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಅವರ 'ದುರ್ಗಾಸ್ತಮಾನ' ಕೃತಿಗೆ ಬಹುಮಾನ ನೀಡಿತು. ೧೯೮೩ ರಲ್ಲಿ 'ತರಾಸು : ಬದುಕು–ಬರೆಹ' ಎಂಬ ಅಭಿನಂದನ ಗ್ರಂಥವನ್ನು ಅವರಿಗೆ ಅರ್ಪಿಸಲಾಯಿತು.

'ಕನ್ನಡದ ಸಿಡಿಲುಮೊಗ್ಗು' ಎಂಬ ಕೀರ್ತಿಗೆ ಭಾಜನರಾಗಿದ್ದ ತರಾಸು ತಮ್ಮ ಅರವತ್ತು ನಾಲ್ಕನೆಯ ವಯಸ್ಸಿನಲ್ಲಿ (೧೦–೪–೮೪) ಬೆಂಗಳೂರಿನಲ್ಲಿ ತೀರಿಹೋದರು.

ಎಸ್. ಚನ್ನಪ್ಪ



ವಿದ್ವಾಂಸರ ಪರಿಶ್ರಮವನ್ನು ವಿದ್ವಾಂಸನೇ ಬಲ್ಲ. ಬಂಜೆಗೆ ಪ್ರಸವ ವೇದನೆಯ ಅನುಭವ ಬಂದೀತೆ?

—ಜಗನ್ನಾಥ ಕವಿ

ಜಿಪುಣ ದೇಶದ ಒಡೆಯನಾಗಬಾರದು ; ಧಾರಾಳಿಗೆ ಬಡತನವಿರಬಾರದು.

—ಫಿರ್ದೊಸಿ

ಇಂದಿನ ವಿಶ್ವದ ಹಿರಿಯ ದಾರ್ಶನಿಕ
ಮಾಸ್ಟರ್ ಜೆ. ಕೃಷ್ಣಮೂರ್ತಿ

೮೭ ವರ್ಷದ ಜಿದ್ದೂ ಕೃಷ್ಣಮೂರ್ತಿ ಪ್ರಪಂಚದ ಲಕ್ಷಾಂತರ ಶ್ರದ್ಧಾವಂತರಾದ ಅನುಯಾಯಿಗಳ ದೃಷ್ಟಿಯಲ್ಲಿ ಒಬ್ಬ ಗುರು. ಆದರೆ ಈ ಗುರು ತನ್ನ ಶಿಷ್ಯರೊಂದಿಗೆ 'ದಯವಿಟ್ಟು ನನ್ನನ್ನು ಗುರು ಮಾಡಿಕೊಳ್ಳಬೇಡಿ' ಎನ್ನುತ್ತಿರುತ್ತಾರೆ. 'ಗುರು ಒಂದು ಆಧ್ಯಾತ್ಮಿಕ ಅಸ್ತಿತ್ವದ ಹೆಸರು ಹಾಗೂ ನಾನು ಎಲ್ಲ ರೀತಿಯ ಆಧ್ಯಾತ್ಮಿಕ ಮೇಲುಗೈಯನ್ನು ತಿರಸ್ಕಾರದಿಂದ ಕಾಣುತ್ತೇನೆ, ಏಕೆಂದರೆ ಇಂಥ ಮೇಲುಗೈ ತಿಳುವಳಿಕೆಯ ಶಕ್ತಿಯನ್ನು ಪೂರ್ತಿಯಾಗಿ ಕುಂಠಿತಗೊಳಿಸುತ್ತದೆ' ಎಂಬುದು ಕೃಷ್ಣಮೂರ್ತಿಯವರ ಅಭಿಪ್ರಾಯ.

ಇಂದಿಗೆ ಅನೇಕ ದಶಕಗಳ ಮೊದಲು ಭಾರತದಲ್ಲಿ ಹಿಂದೆಂದೂ ನಡೆದಿರದಿದ್ದ ಆಧ್ಯಾತ್ಮಿಕ ಪ್ರಯೋಗವೊಂದು ನಡೆಯಿತು. ಮೇಲ್ನೋಟಕ್ಕೆ ಪ್ರಯೋಗ ಸೋಲನ್ನಪ್ಪಿದಂತೆ ಕಂಡರೂ ಒಳಗೇ ಅದು ಆಶ್ಚರ್ಯವೆನಿಸುವಷ್ಟು ಯಶಸ್ವಿಯಾಗಿತ್ತು. ಈ ಪ್ರಯೋಗಕ್ಕೆ ಒಳಗಾಗಿದ್ದ ಹದಿವಯಸ್ಸಿನ ಹುಡುಗನ ಹೆಸರು ಜಿದ್ದೂ ಕೃಷ್ಣಮೂರ್ತಿ. ಸಂದೇಶಗಳನ್ನು ನೀಡಲು ಕಾತುರವಾಗಿರುವ ಆತ್ಮಗಳೊಡನೆ ಹತ್ತಿರದ ಸಂಪರ್ಕ ಬೆಳೆಸುವುದೇ ಪ್ರಯೋಗದ ಉದ್ದೇಶವಾಗಿತ್ತು. ಆತ್ಮಗಳು ಹುಡುಗನಿಗೆ ಸಂದೇಶವನ್ನು ಕೊಟ್ಟವೇ ಅಲ್ಲದೆ ಅವನ ಮೇಲೆ ಸಾಕಷ್ಟು ಪ್ರಭಾವ ಸಹ ಬೀರಿದವು.

ಈ ಪ್ರಭಾವದ ಗುಂಗಿನಲ್ಲೇ ಕೃಷ್ಣಮೂರ್ತಿ ತಮ್ಮ ಚೊಚ್ಚಲ ಪುಸ್ತಕಗಳನ್ನು ಬರೆದದ್ದು. ಈ ಪೈಕಿ 'ಎಟ್ ದ ಫೀಟ್ ಆಫ್ ದ ಮಾಸ್ಟರ್' ಅಥವಾ 'ಲೈವ್ಸ್ ಆಫ್ ಅಲ್ಕ್ಯೋನಿ' ಸಾಕಷ್ಟು ಪ್ರಸಿದ್ಧಿ ಪಡೆಯಿತು. ಆದರೆ ಈ ಪ್ರಭಾವ ಇಳಿದ ಮೇಲೆ ತಾವು ಅದರ ಲೇಖಕರೆಂದು ಕೃಷ್ಣಮೂರ್ತಿ ಒಪ್ಪಲಿಲ್ಲ. 'ಅದನ್ನು ನಾನು ನನ್ನ ಸ್ವಂತ ಅರಿವಿನಿಂದ ಬರೆಯಲಿಲ್ಲ' ಎಂಬುದೇ ಅವರ ನಿಲುವಾಗಿತ್ತು.

'ಎಟ್ ದ ಫೀಟ್....' ನಿಜಕ್ಕೂ ಒಂದು ಅದ್ಭುತ ಕೃತಿ. ಆದರೆ ಲೇಖಕರು ಹೇಳುವಂತೆ "ನಾನು ಅದನ್ನು ಬರೆಯಲಿಲ್ಲ, ಕೇವಲ ಮಾಧ್ಯಮ ಮಾತ್ರ

'ನವನೀತ' ನವಂಬರ್ ೧೯೮೨ರಲ್ಲಿ ಪ್ರಕಟವಾದ 'ಹಂಸ' ಅವರ 'ಸಮಕಾಲೀನ ವಿಶ್ವ ಕೇ ಮಹಾನ್ ಜ್ಯೋತಿರ್ಧರ್ ಮಾಸ್ಟರ್ ಜೆ. ಕೃಷ್ಣಮೂರ್ತಿ' ಲೇಖನದ ಕನ್ನಡ ಅನುವಾದ.

ವಾಗಿದ್ದೆ. ಅಜ್ಞಾತ ಆತ್ಮವೊಂದರ ಸಂದೇಶಗಳು ಅಲ್ಲಿ ಸಂಗ್ರಹವಾಗಲು ನಾನು ನಿಮಿತ್ತವಾಗಿದ್ದೆ ಅಷ್ಟೆ."

ಎಂಬತ್ತೇಳು ವರ್ಷ ವಯಸ್ಸಿನ ಜಿದ್ದೂ ಕೃಷ್ಣಮೂರ್ತಿ ಒಬ್ಬ ಧರ್ಮಗುರು ಎಂದು ಪ್ರಪಂಚದಲ್ಲೆಲ್ಲಾ ಹೆಸರು ಗಳಿಸಿದ್ದಾರೆ. ಅವರ ಹಿಂಬಾಲಕರು ಲಕ್ಷಾಂತರ ಸಂಖ್ಯೆಯಲ್ಲಿದ್ದಾರೆ. ಅವರ ಹೆಸರಿನಲ್ಲಿ ಮೂರು ಪ್ರತಿಷ್ಠಾನಗಳು ಕೆಲಸ ಮಾಡುತ್ತಿವೆ—ಒಂದು ಮದ್ರಾಸಿನ ಅದ್ಯಾರಿನಲ್ಲಿ, ಎರಡನೆಯದು ಇಂಗ್ಲೆಂಡಿನ ಬ್ರಾಕ್‌ವುಡ್ ಪಾರ್ಕಿನಲ್ಲಿ ಹಾಗೂ ಮೂರನೆಯದು ಅಮೆರಿಕೆಯ ಕ್ಯಾಲಿಫೋರ್ನಿಯದಲ್ಲಿ. ಅವರು ನೀಡುವ ಪ್ರವಚನಗಳ ವೇಳಾಪಟ್ಟಿ ಸಹ ಮೊದಲೇ ಗೊತ್ತುಪಡಿಸಿರುವಂತೆ ಇರುತ್ತದೆ. ಬೇಸಿಗೆ ಕಾಲದಲ್ಲಿ ಅವರು ಸ್ವಿಟ್ಸರ್ಲೆಂಡಿನಲ್ಲಿ ಪ್ರವಚನ ನಡೆಸುತ್ತಾರೆ, ಶರತ್ಕಾಲದಲ್ಲಿ ಅಮೆರಿಯಲ್ಲಿ ಅವರ ಭಾಷಣಗಳು ಏರ್ಪಟ್ಟಿರುತ್ತವೆ. ಭಾರತದಲ್ಲಿ ಅವರು ಪ್ರತಿವರ್ಷ ದೆಹಲಿ, ಮದ್ರಾಸ್, ಮುಂಬಯಿ ಹಾಗೂ ವಾರಾಣಸಿ ಗಳಲ್ಲಿ ಪ್ರವಚನ ಮಾಡುತ್ತಾರೆ. ದಿನದಿನಕ್ಕೂ ಅವರ ಶಿಷ್ಯರ ಹಾಗೂ ಹಿಂಬಾಲಕರ ಸಂಖ್ಯೆ ಏರುತ್ತಲೇ ಹೋಗುತ್ತಿದೆ. ಪ್ರಪಂಚದಲ್ಲಿ ಲಕ್ಷಾಂತರ ಮಂದಿ ಅವರನ್ನು 'ಗುರು', 'ಸಂದೇಶವಾಹಕ' ಹಾಗೂ 'ಮಿಷನರಿ' ಎಂದು ಕರೆಯುತ್ತಾರೆ. ಅವರ ಮಾತುಗಳನ್ನು ತುಂಬ ಶಾಂತಿಯಿಂದ ಪ್ರೀತಿಯಿಂದ ಆಲಿಸುತ್ತಾರೆ. ಆದರೆ ಈ ಗುರುಗಳು ತಮ್ಮ ಅನುಯಾಯಿಗಳೆಲ್ಲರಿಗೂ ಹೇಳುವುದೇನೆಂದರೆ 'ನನ್ನನ್ನು ದಯವಿಟ್ಟು ಗುರುವನ್ನಾಗಿ ಮಾಡಿಕೊಳ್ಳಬೇಡಿ. ಗುರು ಅಂದರೆ ಒಂದು ಆಧ್ಯಾತ್ಮಿಕ ಅಸ್ತಿತ್ವದ ನಿಯಂತ್ರಣ, ಆದರೆ ಎಲ್ಲ ರೀತಿಯ ಆಧ್ಯಾತ್ಮಿಕ ಅಸ್ತಿತ್ವದ ಮೇಲುಗೈ ಎಂದರೆ ನನಗೆ ಆಗುವುದಿಲ್ಲ. ಏಕೆಂದರೆ ಇಂಥ ಅಸ್ತಿತ್ವ ನಮ್ಮ ತಿಳಿವಳಿಕೆ ಶಕ್ತಿಯನ್ನೇ ಕುಂಠಿತಗೊಳಿಸಿಬಿಡುತ್ತದೆ."

'ಸಂದೇಶವಾಹಕ?' ಈ ಸಂದೇಶವಾಹಕನ ಬಳಿ ನಿಮಗೆ ಕೊಡಲು ಯಾವ ಸಂದೇಶವೂ ಇಲ್ಲ. ಇರುವ ಸಂದೇಶವೆಂದರೆ ಒಂದೇ ಒಂದು. ಅದೇ ಎಲ್ಲರೂ ಬಲ್ಲ ಪ್ರಾಚೀನ ಸಂದೇಶ 'ಆತ್ಮದೀಪೋ ಭವ' ಅಂದರೆ 'ನಿಮ್ಮನ್ನು ನೀವು ಅರಿಯಿರಿ; 'ಮಿಶನರಿ?' ಈತ ಎಂಥವನೆಂದರೆ 'ಮಿಶನ್' ಇಲ್ಲದ ಮಿಶನರಿ!

ಕೃಷ್ಣಮೂರ್ತಿ ಅನ್ನುತ್ತಾರೆ; "ನಾನು ಎಂದೂ ಪರಂಪರಾವಾದಿಯಾಗಿರಲಿಲ್ಲ. ಪರಂಪರೆಯಲ್ಲಿ ನನಗೆ ನಂಬಿಕೆಯಿಲ್ಲ. ಪರಂಪರೆಯಲ್ಲಿ, ಶಾಸ್ತ್ರಗಳಲ್ಲಿ ನಂಬಿಕೆ ಇಡುವವನು ಎಂದಿಗೂ ಸತ್ಯವನ್ನು ಅರಿಯುವುದು ಸಾಧ್ಯವಾಗುವುದಿಲ್ಲ. ಏಕೆಂದರೆ ಯಾವುದೇ ಹಾದಿಯಲ್ಲಿ ನಡೆದು ಸತ್ಯವನ್ನು ಕಂಡುಕೊಳ್ಳಲು ಸಾಧ್ಯ

ವಾಗುವುದಿಲ್ಲ. ಯಾವುದೇ ಸಂಸ್ಥೆ, ಯಾರೇ ಗುರು, ಯಾವುದೇ ಶಾಸ್ತ್ರ ನಿಮಗೆ ಸತ್ಯದ ಸಾಕ್ಷಾತ್ಕಾರ ಮಾಡಿಕೊಡಲು ಸಾಧ್ಯವಿಲ್ಲ. ಯಾವ ಗುರು ತಾನೆ ಈವರೆಗೆ ತನ್ನ ಶಿಷ್ಯನಿಗೆ ಸತ್ಯವನ್ನು ಕಂಡುಕೊಳ್ಳುವಲ್ಲಿ ನೆರವಾಗಿದ್ದಾನೆ? ಈವರೆಗೆ ಯಾವ ಗುರುವೂ ಯಾರ ಕಷ್ಟವನ್ನು ದೂರಮಾಡಲು ಸಾಧ್ಯವಾಗಿಲ್ಲ. ಅಲ್ಲದೆ ಆತ ತನ್ನ ಅಭಿಪ್ರಾಯವನ್ನು ಶಿಷ್ಯರ ಮೇಲೆ ಹೇರಿ ಅವರ ಪ್ರಜ್ಞೆಯನ್ನೇ ನಿಷ್ಕ್ರಿಯಗೊಳಿಸಿಬಿಡುತ್ತಾನೆ. ಜನ ಗೀತೆಯನ್ನು, ಬೈಬಲನ್ನು, ಉಪನಿಷತ್ತುಗಳನ್ನು ಓದುವುದರಿಂದ ತಮ್ಮನ್ನು ತಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆಯೆಂದೂ ಆತ್ಮಜ್ಞಾನ ಲಭ್ಯವಾಗುತ್ತದೆಂದೂ ಭಾವಿಸುತ್ತಾರೆ. ಆದರೆ ವಾಸ್ತವವಾಗಿ ಹೀಗಾಗುವುದಿಲ್ಲ. ಏಕೆಂದರೆ ಈ ಶಾಸ್ತ್ರಗಳನ್ನು ಸರಿಯಾದ ರೀತಿಯಲ್ಲಿ 'ಓದಿ ಅರ್ಥಮಾಡಿಕೊಳ್ಳುವ' ನಿರ್ಮಲ ದೃಷ್ಟಿ ಅವರಿಗೆ ದೊರೆತಿರುವುದಿಲ್ಲ. ಅಲ್ಲದೆ ಈ ನಿರ್ಮಲವಾದ ದೃಷ್ಟಿಯನ್ನು ಮನುಷ್ಯ ತಾನೇ ಸಂಪಾದಿಸಿಕೊಳ್ಳಬಲ್ಲನೆ ಹೊರತು ಬೇರೆ ಯಾರೂ ಅದನ್ನು ಅವನಿಗೆ ನೀಡಲಾರರು. ಕಳೆದ ಮೂರು ಸಾವಿರ ವರ್ಷಗಳಿಂದ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಸಾಧನೆಗಳ, ಕರ್ಮಕಾಂಡಗಳ ಮತ್ತು ಅನುಷ್ಠಾನಗಳ ಸರ್ಕಸ್ಸಿನಿಂದ ಮಾನವ ಕುಲಕ್ಕಾಗಲಿ ಅಥವಾ ಯಾವುದೇ ಸಾಧಕನಿಗಾಗಲಿ ಪ್ರಯೋಜನವಾಗಿಲ್ಲ. ಧರ್ಮದ ಎಲ್ಲ ಆಯಾಮಗಳನ್ನು ನಾವು ಬಲ್ಲೆವು—ಆದರೆ ಸತ್ಯ ಅಜ್ಞಾತ ಮತ್ತು ಅಜ್ಞೇಯ, ಪಕ್ಷಿಗಳು ಹಾರಿದಾಗ ಆಕಾಶದಲ್ಲಿ ಅವುಗಳ ಹೆಜ್ಜೆ ಗುರುತುಗಳೇನೂ ಮೂಡುವುದಿಲ್ಲ. ಸತ್ಯದ ಅನುಭವವೂ ಹೀಗೆಯೆ. ಅದು ಯಾವುದೇ ದಾರಿಯ ಗುರುತನ್ನು ಬಿಡಲಾರದು, ಸ್ವತಂತ್ರವಾದ, ನಿರಪೇಕ್ಷವಾದ, ಅಖಂಡವಾದ ಸತ್ಯವನ್ನು ಅರಿಯಲು ನಾವು ನಮ್ಮ ಮನಸ್ಸಿನ ಭಾವ, ವಿಚಾರ ಮತ್ತು ಕರ್ಮಗಳೆಂಬ ಜ್ಞಾತ ಹಾಗೂ ಖಂಡಖಂಡವಾಗಿರುವ ಎಲ್ಲೆಕಟ್ಟುಗಳನ್ನು ದಾಟಿಹೋಗಬೇಕಾಗುತ್ತದೆ. ಸತ್ಯ ಎಲ್ಲಿದೆಯೊ ಅಲ್ಲಿ ಯಾವುದೇ ವಿಚಾರ, ಭಾವ ಅಥವಾ ಕರ್ಮ ಇರಲು ಸಾಧ್ಯವಿಲ್ಲ. ಏಕೆಂದರೆ ಸತ್ಯಕ್ಕೆ ಯಾವುದೇ ಗುರುತಿಲ್ಲ, ಯಾವುದೇ ಹೆಸರು ರೂಪ ಮತ್ತು ಆಕೃತಿಗಳಿಲ್ಲ. ಆದರೆ ಗುರುಗಳು, ಶಾಸ್ತ್ರಗಳು ಮತ್ತು ಧಾರ್ಮಿಕ ಸಂಘಟನೆಗಳು ಸತ್ಯವನ್ನೇ ಆಧಾರ ಭೂಮಿಯನ್ನಾಗಿ ಮಾಡಿಕೊಂಡು ಅದರಮೇಲೆ ತಮ್ಮ ವಿಚಾರಗಳನ್ನು, ಭಾವನೆಗಳನ್ನು ಹಾಗೂ ಕರ್ಮಗಳನ್ನು ಬಗೆಯುತ್ತಾಬಂದಿದ್ದಾರೆ. ಸತ್ಯವನ್ನು ಅನೇಕ ಹೆಸರುಗಳಲ್ಲಿ, ಅನೇಕ ರೂಪಗಳಾಗಿ ತುಂಡರಿಸುತ್ತಾ ಬಂದಿದ್ದಾರೆ. ವಾಸ್ತವವಾಗಿ, ಸತ್ಯದ ಬಳಿ ಸಾರುವ ಯಾವುದೇ ಮಾರ್ಗ ಕಾಣಸಿಗುವುದಿಲ್ಲ. ಯಾರು ಎಲ್ಲಾ ಹಾದಿ

ಗಳನ್ನು ಕೈಬಿಟ್ಟು ಸ್ಥಿರವಾಗಿ ನಿಲ್ಲುತ್ತಾರೊ ಅಂಥವರು ಸತ್ಯದ ನೆಲೆಯನ್ನು ತಲುಪಲು ಸಾಧ್ಯವಾಗುತ್ತದೆ. ಎಲ್ಲಿ 'ಸ್ವ' ಉಂಟೋ, ಏಕೆಂದರೆ 'ಸ್ವ' ಎಂಬುದೇ ಸತ್ಯವಾಗಿದ್ದು, ಒಂದುವೇಳೆ ನೀವು 'ಸ್ವ' ನಲ್ಲೇ ಇರುವುದಾದರೆ, ಹಾದಿಯ ಅಗತ್ಯವಾದರೂ ಏನು ? ನೀವು ಇರುವೆಡೆಗೆ ನಿಮ್ಮನ್ನು ತಲುಪಿಸುವ ಯಾವುದೇ ಮಾರ್ಗ ಇಲ್ಲ ತಾನೆ !"

ಅಂತರ್ಯಾತ್ರೆಯ ಪ್ರಾರಂಭ

ಆಂಧ್ರಪ್ರದೇಶದ ಮದನಪಲ್ಲಿಯ ಒಂದು ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಜಿದ್ದು ಕೃಷ್ಣಮೂರ್ತಿ ತಮ್ಮ ತಂದೆತಾಯಿಗಳಿಗೆ ಎಂಟನೆಯ ಮಗು. ಚಿಕ್ಕಂದಿನಿಂದಲೂ ಅವರು ಸುಮ್ಮನೆ ಕುಳಿತಿರುವುದು ಹಾಗೂ ಮರಗಿಡಗಳ ಮತ್ತು ಇರುವೆಗಳ ಚಲನವಲನವನ್ನು ಸೂಕ್ಷ್ಮವಾಗಿ ಅಭ್ಯಾಸಮಾಡುವುದನ್ನು ಬೆಳೆಸಿಕೊಂಡಿದ್ದರು. ಯಾವುದೋ ಒಂದು ಅಜ್ಞಾತ ಶಕ್ತಿ ಇವುಗಳನ್ನೆಲ್ಲ ರಕ್ಷಿಸುತ್ತಿದೆ ಮತ್ತು ಹೀಗೆಯೆ ರಕ್ಷಿಸುತ್ತಾ ಇರುತ್ತದೆ ಎಂಬ ವಿಚಾರ ಅವರ ಮನಸ್ಸಿನಲ್ಲಿ ಉಂಟಾಗುತ್ತಿತ್ತು. ಅವರ ವಿಚಾರಸರಣಿ ರಹಸ್ಯವಾದಿ ಸೂಫೀ ಸುಂದರ ಆಲೋಚನೆಯಂತೆ ಇತ್ತು.

ಅವರ ತಂದೆ ಒಬ್ಬ ಥಿಯಾಸೋಫಿಸ್ಟ್ ಆಗಿದ್ದರು. ನೌಕರಿಯಿಂದ ನಿವೃತ್ತಿ ಪಡೆದಮೇಲೆ ಮದ್ರಾಸಿನ ಅದ್ಯಾರಿನಲ್ಲಿರುವ ಥಿಯಾಸೋಫಿಕಲ್ ಸೊಸೈಟಿಯ ಕಚೇರಿಯಲ್ಲಿ ಕೆಲಸ ಮಾಡಬೇಕೆಂಬುದು ಅವರ ಬಯಕೆಯಾಗಿತ್ತು. ಒಂದು ದಿನ ಈ ಸೊಸೈಟಿಯ ಒಬ್ಬ ಹಿರಿಯ ಕಾರ್ಯಕರ್ತರಾಗಿದ್ದ ಲೀಡ್ ಬೀಟರ್ ಆಟವಾಡುತ್ತಿದ್ದ ಬಾಲಕ ಕೃಷ್ಣಮೂರ್ತಿಯನ್ನು ನೋಡಿದರು. ಬೀಟರ್ ಅವರಿಗೆ ಅತೀಂದ್ರಿಯ ದೃಷ್ಟಿಯಿತ್ತು. ಹುಡುಗನ ಬೆಳಗುತ್ತಿದ್ದ ಮುಖಮಂಡಲ ಅವರ ಗಮನ ಸೆಳೆಯಿತು. ಸೊಸೈಟಿಯ ಬೇರೆ ಕಾರ್ಯಕರ್ತರಿಗೆ ಗೊತ್ತಿದ್ದಂತೆಯೆ ಅವರಿಗೂ ಬುದ್ಧ ಮೈತ್ರೇಯಿ ಅವತಾರವನ್ನು ಹೊಂದುವನೆಂದೂ, ಆ ಅವತಾರಕ್ಕಾಗಿ ಒಂದು ಸರಿಯಾದ ಮೈಯಿನ ಹುಡುಕುವಿಕೆ ನಡೆಯುತ್ತಿದೆ ಎಂದೂ ತಿಳಿದಿತ್ತು. ಅವರು ಕೃಷ್ಣಮೂರ್ತಿಯ ಬಗೆಗೆ ಸೊಸೈಟಿಯ ಅಧ್ಯಕ್ಷೆ ಶ್ರೀಮತಿ ಏನಿಬೆಸೆಂಟ್‌ರವರ ಜೊತೆಯಲ್ಲಿ ಚರ್ಚೆ ನಡೆಸಿದರು. ಕೃಷ್ಣಮೂರ್ತಿಯವರ ವ್ಯಕ್ತಿಪರ ಗೂಢವಾಗಿಯೂ ರಹಸ್ಯಮಯವಾಗಿಯೂ ಭರವಸೆ ಮೂಡಿಸುವಂತೆಯೂ ಇದೆಯೆಂದು ಇಬ್ಬರಿಗೂ ಮನದಟ್ಟಾದ ಅನಂತರ ಹೇಗಾದರೂ ಮೈತ್ರೇಯಿಯ ಆತ್ಮವನ್ನು ಅವರಲ್ಲಿ ಹೋಗಿಸಬೇಕೆಂಬ ಸಂಕಲ್ಪ

ಮಾಡಿದರು. ಕೃಷ್ಣಮೂರ್ತಿಯವರ ತಂದೆಯ ಜೊತೆಯಲ್ಲಿ ಮಾತನಾಡಿ ಕೃಷ್ಣಮೂರ್ತಿ ಮತ್ತು ಅವರ ಸೋದರ ನಿತ್ಯಾನನ್ನು ಈ ಪ್ರಯೋಗದ ಸಲುವಾಗಿ ತಮ್ಮ ಮೇಲ್ವಿಚಾರಣೆಯಲ್ಲೇ ಇರಿಸಿಕೊಂಡರು. ಅವರಿಬ್ಬರಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸುವ ಏರ್ಪಾಟೂ ಆಯಿತು.

ಸಾಧನೆ ಇನ್ನೂ ಮುಗಿದಿರಲಿಲ್ಲ, ಅಷ್ಟರಲ್ಲಿಯೆ ನಿತ್ಯ ಸಾವಿಗೀಡಾದರು. ದುಃಖ ಎಂದರೆ ಏನೆಂಬುದರ ಅನುಭವ ಕೃಷ್ಣಮೂರ್ತಿಯವರಿಗೆ ಮೊದಲ ಬಾರಿಗೆ ಆಯಿತು. ಈ ದುಃಖದ ಬೆನ್ನ ಹಿಂದೆಯೆ ಅವರ ಮನಸ್ಸಿಗೆ ಶಾಶ್ವತ ಎಂಬುದು ಏನಿಲ್ಲ, ಎಲ್ಲ ಕ್ಷಣಭಂಗುರ ಎಂಬ ಕಠೋರ ಸತ್ಯದ ಅರಿವೂ ಆಯಿತು. ಎಲ್ಲ ವಿಚಾರಧಾರೆಗಳು, ಆಸೆ ಆಕಾಂಕ್ಷೆಗಳು ವ್ಯರ್ಥವೆನಿಸಿದವು, ಮೋಸ ಎನಿಸಿದವು. ಅವರ ಪಾಲಿಗೆ ಒಂದು ರೀತಿಯ ಅಲೌಕಿಕ ದೃಷ್ಟಿ ತನ್ನಷ್ಟಕ್ಕೆ ತಾನೆ ಸಿಕ್ಕಂತಾಯಿತು ಅದರಿಂದ ಅವರಿಗೆ ಎಲ್ಲವೂ ತಾವಿರುವ ಮೂಲಸ್ಥಿತಿಯಲ್ಲಿ ಗೋಚರವಾಗ ತೊಡಗಿದವು. ವ್ಯಕ್ತಿಗಳೆಲ್ಲ ಒಳಗಿನಿಂದ ಹೇಗಿದ್ದರೊ ಹಾಗೆಯೆ ಹೊರಗೂ ಕಾಣಿಸತೊಡಗಿದರು.

ಈ ದೃಷ್ಟಿಯನ್ನು ಪಡೆದುಕೊಂಡ ಅನಂತರ ಅವರು ಶ್ರೀಮತಿ ಏನಿಬೆಸೆಂಟರನ್ನು ನೋಡಿದಾಗ, ಅವರ ಸುತ್ತಮುತ್ತಲೂ ಇದ್ದ ಮಂದಿಯಲ್ಲಿ ಅನೇಕರು ಪ್ರಾಮಾಣಿಕರಾಗಿ ಕಾಣಲಿಲ್ಲ. ತಾವು ತಾಯಿಯ ಸಮಾನವೆಂದು ಪ್ರೀತಿಯಿಂದ ನೋಡುತ್ತಿದ್ದ ಬೆಸೆಂಟರನ್ನು ಕೆಲವು ಮಂದಿ ತಮ್ಮ ಸ್ವಾರ್ಥಸಾಧನೆಗಾಗಿ ಉಪಯೋಗಿಸಿಕೊಳ್ಳಲು ಆಸಕ್ತರಾಗಿರುವುದು ಅವರಿಗೆ ಗೋಚರವಾಯಿತು. ಇದೆಲ್ಲ ನೋಡಿ ಕೃಷ್ಣಮೂರ್ತಿಯವರಿಗೆ ಬೇಸರವಾಯಿತು.

ಇದು ಒಂದು ಪರ್ವ ಕಾಲವಾಗಿತ್ತು. ಕೃಷ್ಣಮೂರ್ತಿಯವರ ಮನಸ್ಸಿನ ಒಳಗೇ ರೂಪಾಂತರ ಪ್ರಾರಂಭವಾಗಿತ್ತು, ರಹಸ್ಯಮಯವಾದ ಪ್ರಕ್ರಿಯೆಯ ಮೂಲಕ ಅವರ ಅಂತರಾಳದ ಯಾತ್ರೆ ಗುಪ್ತಮಾರ್ಗವನ್ನು ಕಂಡುಕೊಂಡಿತ್ತು. ಅಸ್ತಿತ್ವದಿಂದ ಅಸ್ತಿತ್ವಹೀನತೆಯತ್ತ ನೆಗೆತಕ್ಕೆ ಅಣಿಯಾಗುತ್ತಿದ್ದ ಒಬ್ಬ ಹೊಸ ಕೃಷ್ಣಮೂರ್ತಿ ಅವರಲ್ಲಿ ರೂಪುದಳೆಯತೊಡಗಿದ್ದರು.

ಕೃಷ್ಣಮೂರ್ತಿ ಯಾವಾಗ ಮೈತ್ರೇಯಿಯ ಸ್ಥಿತಿಯನ್ನು ಪಡೆಯುತ್ತಾರೊ ಎಂಬ ನಿರೀಕ್ಷೆಯಲ್ಲಿದ್ದ ಥಿಯೊಸೋಫಿಕಲ್ ಸೊಸೈಟಿಯ ಸದಸ್ಯರು ತುದಿಗಾಲಿನಲ್ಲೇ ನಿಂತಿದ್ದರು. ತಾವು ಬುದ್ಧನ ರೂಪದಲ್ಲಿ ನೋಡಬಯಸುತ್ತಿದ್ದ ವ್ಯಕ್ತಿ ಅಗತ್ಯವಾದ, ಅಗೋಚರವಾದ ಮತ್ತು ಅವರ್ಣನೀಯವಾದ ಚೈತನ್ಯದ ಮಟ್ಟವನ್ನು ಮುಟ್ಟಿಬಿಟ್ಟಿದ್ದಾನೆಂಬುದರ ಅರಿವು ಅವರಿಗೆ ಇರಲಿಲ್ಲ. ಗೀತಿಲರಲ್ಲಿ

ಅವರು ಹಾಲೆಂಡಿನಲ್ಲಿ ತಮಗೆ ಸಮರ್ಪಿಸಲಾಗಿದ್ದ ೫೦೦೦ ಎಕರೆ ಭೂಮಿಯ ಮೇಲೆ ವಿಶಾಲವಾಗಿ ಕಟ್ಟಿದ್ದ ಸಭಾಗೃಹದಲ್ಲಿ ಭಾಷಣ ಮಾಡುತ್ತ ಹೀಗೆ ಹೇಳಿದರು—"ಸತ್ಯಕ್ಕೆ ಯಾವುದೇ ದಾರಿ ಎಂಬುದು ನಿರ್ಮಾಣವಾಗಲು ಸಾಧ್ಯವಿಲ್ಲ. ಯಾವುದೇ ಸಂಸ್ಥೆ, ಯಾರೇ ಗುರು, ಯಾವುದೇ ಶಾಸ್ತ್ರ, ಯಾವುದೇ ನಂಬಿಕೆ ಸತ್ಯದ ಅನುಭವವನ್ನು ಮಾಡಿಕೊಡಲು ಸಾಧ್ಯವಿಲ್ಲ." ತಮ್ಮ ಮುಂದೆ ಕುಳಿತಿದ್ದ ಸಾವಿರಾರು ಮಂದಿ ಶ್ರೋತೃಗಳನ್ನು ಉದ್ದೇಶಿಸಿ ಅವರು ಅಂದರು— "ನನಗೆ ಯಾರೂ ಶಿಷ್ಯರಿಲ್ಲ. ಗುರು ವ್ಯರ್ಥ, ಗುರುವಿನ ಮೂಲಕ ಸತ್ಯವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಸತ್ಯ ಹೊರಗೆಲ್ಲೂ ಇಲ್ಲ, ಅದು ನಿಮ್ಮೊಳಗೇ ಇದೆ. ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ನೀವು ಎಲ್ಲ ರೀತಿಯ ಕಟ್ಟುಪಾಡುಗಳಿಂದ ಮುಕ್ತರಾಗಿ ಸಂಪೂರ್ಣವಾಗಿ ಸ್ವತಂತ್ರರಾಗಬೇಕು."

ಅವರು ಸೊಸೈಟಿಯ ಎಲ್ಲ ವ್ಯವಸ್ಥೆಗಳನ್ನು ಮುಚ್ಚಿ, ಐದು ಸಾವಿರ ಎಕರೆ ಭೂಮಿಯನ್ನು ತಮಗೆ ಅರ್ಪಿಸಿದ್ದ ಜನರಿಗೇ ಹಿಂದಕ್ಕೆ ಕೊಟ್ಟುಬಿಟ್ಟರು. ೧೯೩೩ರಲ್ಲಿ ಶ್ರೀಮತಿ ಏನಿಬೆಸೆಂಟ್ ಮೃತರಾದ ಮೇಲೆ ಅವರು ಥಿಯೊಸೊಫಿಕಲ್ ಸೊಸೈಟಿಯ ಜೊತೆ ತಮ್ಮ ಎಲ್ಲ ಸಂಬಂಧಗಳನ್ನು ಕಡಿದುಕೊಂಡರು. ಇದರೊಡನೆಯೆ ಎಲ್ಲ ಸಂಸ್ಥೆಗಳ, ಎಲ್ಲ ವ್ಯವಸ್ಥೆಗಳ, ಎಲ್ಲ ಪ್ರತಿಷ್ಠಾನಗಳ ಜೊತೆಗಿದ್ದ ಬಂಧನದಿಂದ ಅವರು ಕಳಚಿಕೊಂಡು ಹೊರಬಂದರು. ಅವರು ಅನಂತರ ಮಾಡಿದ್ದು ಮಾತನಾಡಿದ್ದು ಎಲ್ಲವೂ ಬದುಕಿನ ಅತ್ಯಂತ ಆಳವಾದ ಸಂಬಂಧಗಳೊಡನೆ ಬೆಸೆದುಕೊಂಡಿತ್ತು.

ಹಕ್ಸ್‌ಲೀಯೊಡನೆ ಭೇಟಿ

ಎರಡನೇ ಮಹಾಯುದ್ಧದ ಸಮಯದಲ್ಲಿ ಅವರು ಅಮೆರಿಕೆಯ ಕ್ಯಾಲಿಫೋರ್ನಿಯಾದಲ್ಲೇ ಉಳಿದುಕೊಳ್ಳಬೇಕಾಯಿತು. ಆ ದಿನಗಳನ್ನು ಅವರು ಒಬ್ಬಂಟಿಯಾಗಿಯೆ ಕಳೆದರು. ಈ ಒಂಟಿತನದಲ್ಲೇ ಅವರಿಗೆ ತಮ್ಮ ಒಳಗಡೆ ಅಡಗಿದ್ದ ಆ ಕೇಂದ್ರ ಬಿಂದುವಿನ ಸುಳಿವು ಸಿಕ್ಕಿತು. ಯಾವ ಬಂಧನವೂ ಇಲ್ಲದ' ಪರಮ ಸ್ವತಂತ್ರರಾಗಿರುವ, ಎಣೆಯಿಲ್ಲದಷ್ಟು ವಿಸ್ತಾರವಾಗಿರುವ ನೆಲೆಗೆ ಅಲ್ಲಿಂದಲೇ ದಾರಿ ತೆರೆಯುವುದೆಂದು ಅವರಿಗೆ ಮನದಟ್ಟಾಯಿತು. ಅಲ್ಲಿ ಯಾವುದೇ ರೀತಿಯ ದುಃಖವಿಲ್ಲ, ಇರುವುದೆಲ್ಲ ಆನಂದವೇ ಆನಂದ ಎಂಬ ಅರಿವು ಮೂಡಿತು.

ಹೆಸರಾಂತ ವಿಚಾರವಾದಿ ಆಲ್ಡಸ್ ಹಕ್ಸ್‌ಲೇ ಕೃಷ್ಣಮೂರ್ತಿಯವರ ನೆರೆ

ಯಲ್ಲಿದ್ದು ಆಗಾಗ್ಗೆ ಅವರೊಡನೆ ಭೇಟಿಯಾಗಲು ಬರುತ್ತಿದ್ದರು. ತುಂಬ ಶಾಂತಚಿತ್ತರಾಗಿ ಕೃಷ್ಣಮೂರ್ತಿಯವರ ವಿಚಾರಧಾರೆಯನ್ನು ಆಲಿಸುತ್ತಿದ್ದ ಹಕ್ಸ್‌ಲೀಯವರಿಗೆ ಇಂದಿನ ರೋಗಗ್ರಸ್ತ ನಾಗರಿಕತೆಯ ಮೂಲದಲ್ಲಿ ಕಣ್ಣು ಮುಚ್ಚಿಕೊಂಡು ಸಂಪ್ರದಾಯದ ಹಾದಿಯಲ್ಲಿ ಹೊರಟ ಜನ ಇದ್ದಾರೆಂದೂ, ಅವರು ತಮ್ಮ ವಿವೇಕವನ್ನು ಜಾಗೃತಗೊಳಿಸಿಕೊಳ್ಳುತ್ತಿಲ್ಲವೆಂದೂ ಗೊತ್ತಾಯಿತು. ಕುರುಡುನಂಬಿಕೆಗಳು ಒಂದು ದೊಡ್ಡ ರೋಗ ಹಾಗೂ ಇದಕ್ಕಿಂತ ದೊಡ್ಡ ಅಪರಾಧವನ್ನು ಮನುಷ್ಯ ತನ್ನ ಮೇಲೆಯೆ ಎಸಗಿಕೊಳ್ಳಲಾರ ಎಂಬ ಅಂಶ ಅವರಿಗೆ ಮನವರಿಕೆಯಾಯಿತು. ಏಕೆಂದರೆ ಉಳಿದ ಅಪರಾಧಗಳೆಲ್ಲ ಈ ಕುರುಡುಗತ್ತಲಿನಲ್ಲಿಯೆ ನಡೆಯುವುವು.

ಹಕ್ಸ್‌ಲೀ ಕೃಷ್ಣಮೂರ್ತಿಯವರ ‘ದ ಫಸ್ಟ್ ಅಂಡ್ ಲಾಸ್ಟ್ ಫ್ರೀಡಮ್’ ಪುಸ್ತಕಕ್ಕೆ ಮುನ್ನುಡಿ ಬರೆಯುವವರಿದ್ದರು, ಆದರೆ ೧೯೬೧ರಲ್ಲಿ ಹಕ್ಸ್‌ಲೀ ಆಕಸ್ಮಿಕವಾಗಿ ನಿಧನರಾದುದರಿಂದ ಹಾಗೆ ಮಾಡಲಾಗಲಿಲ್ಲ. ತಾವು ನಿಧನರಾಗುವುದಕ್ಕೆ ಮುಂಚೆ ಹಕ್ಸ್‌ಲೀಯವರು ಜೆ. ಕೃಷ್ಣಮೂರ್ತಿಯವರ ಬಗ್ಗೆ ತಮ್ಮ ಮಿತ್ರರಿಗೆ ಹೀಗೆ ಪತ್ರ ಬರೆದಿದ್ದರು—“ಇಷ್ಟೊಂದು ಪ್ರಭಾವಪೂರ್ಣವಾದ ಭಾಷಣವನ್ನು ನಾನು ಕೇಳಿರಲಿಲ್ಲ, ಭಗವಾನ್ ಬುದ್ಧನೇ ಮಾತನಾಡುತ್ತಿರುವಂತೆ ಅನಿಸಿತು. ಅವರ ವಿಚಾರಸರಣಿ ಅಖಂಡವಾಗಿದೆ, ಎಲ್ಲೂ ಒಡಕ್ಕಿಲ್ಲ. ಅವರು ಮಾತನಾಡುತ್ತಿದ್ದಾರೆ. ಪೂರ್ಣ ಬೋಧೆಯ ಭಾವನೆಯುಂಟಾಗುತ್ತದೆ, ವಿಚಾರಗಳಿಂದ ಪೂರ್ಣ ಮುಕ್ತಿದೊರೆತ ಭಾಸವಾಗುತ್ತದೆ. ಕೃಷ್ಣಮೂರ್ತಿ ಅದ್ಭುತ ವ್ಯಕ್ತಿ, ನಿಜವಾದ ಗುರು.”

೧೯೪೭ರಲ್ಲಿ ಹತ್ತು ವರ್ಷಗಳ ಕಾಲ ಹೊರದೇಶಗಳಲ್ಲಿದ್ದ ಮೇಲೆ ಕೃಷ್ಣಮೂರ್ತಿ ಭಾರತಕ್ಕೆ ಬಂದಾಗ ಶ್ರೀ ಸಾಮಾನ್ಯರಿಂದ ಮೊದಲುಗೊಂಡು ಬುದ್ಧಿಜೀವಿಗಳವರೆಗೆ ಅವರತ್ತ ಆಕರ್ಷಿತಗೊಂಡರು. ಅವರೆಲ್ಲರಿಗೂ ಕೃಷ್ಣಮೂರ್ತಿಯವರು ನೀಡಿದ ಸಂದೇಶ ಒಂದೇ—“ಸ್ವಾತಂತ್ರ್ಯ ಮೊದಲ ನೆಲೆ. ಅದನ್ನು ಸಾಧಿಸದಾದರೆ ಸತ್ಯವನ್ನು ಕುರಿತಂತೆ ಯಾವ ನಡೆಯೂ ಸಾಧ್ಯವಿಲ್ಲ. ಎಷ್ಟೇ ಶಾಸ್ತ್ರಗಳನ್ನು ಓದಿರಲಿ, ಅನೇಕಾನೇಕ ಗುರುಗಳ ಪ್ರವಚನವನ್ನು ಕೇಳಿರಲಿ, ಎಷ್ಟೇ ಸಿದ್ಧಾಂತಗಳನ್ನು ಬಾಯಿ ಪಾಠ ಮಾಡಿಕೊಂಡಿರಲಿ, ಕೇವಲ ಶಬ್ದಗಳು ಮಾತ್ರ ಉಳಿದಿರುತ್ತವೆಯೆ ವಿನಾ ಇನ್ನೇನೂ ದೊರೆಯಲಾರದು. ವಿಚಾರಗಳು ಬೇರೆಯವರವು, ವಿವೇಕ ನಮ್ಮದು. ಸತ್ಯದಲ್ಲಿ ಹುಟ್ಟನ್ನು ಪಡೆಯುವ ಪ್ರಜ್ಞೆಯೆ ಆ ವಿವೇಕ. ಸ್ವಂತಿಕೆಯ ಹೊಗೆಕಟ್ಟದ ನೆಲೆಯಲ್ಲಿ

ಜ್ವಲಿಸುವ ಈ ಜ್ಯೋತಿಯೆ ಮುಕ್ತವಾದ ವಿವೇಕ, ಅದೇ ಸತ್ಯವನ್ನು ಅರಿಯು ವಲ್ಲಿ ಯಶಸ್ವಿಯಾಗುವುದು. ನಾನು ಗುರುವಲ್ಲ, ಒಂದು ಕನ್ನಡಿ ಮಾತ್ರ, ಇದರಲ್ಲಿ ನೀವು ನಿಮ್ಮ ವಾಸ್ತವವಾದ ಪ್ರತಿಬಿಂಬವನ್ನು ನೋಡಿಕೊಳ್ಳಬಹುದು. ಒಮ್ಮೆ ನಿಮಗೆ ನಿಮ್ಮ ವಾಸ್ತವ ಸ್ವರೂಪದ ಬಗೆಗೆ ತಿಳಿವಳಿಕೆ ಮೂಡಿತೆಂದರೆ, ಆಮೇಲೆ ಮತ್ತಾರ ಕನ್ನಡಿಯ ಅಗತ್ಯವೂ ಇರುವುದಿಲ್ಲ.

ಅವರು ಕೇವಲ ಕನ್ನಡಿ ಮಾತ್ರ. ಅಸ್ತಿತ್ವ ಹೀನತೆಯ ಜೊತೆಯಲ್ಲಿ ಒಂದಾಗಿ ಶೂನ್ಯವಾಗಿದ್ದಾರೆ. ಆದರೆ ಅವರ ಪರಿಚಯ ಚೆನ್ನಾಗಿ ಇರುವವರು ಅವರ ಶಾಂತವಾದ ಮತ್ತು ವಿನಮ್ರವಾದ ವ್ಯಕ್ತಿತ್ವ ಆಳಗೊತ್ತಿಲ್ಲದ ಸಾಗರ ದಂತೆ ಎಂಬುದನ್ನು ಬಲ್ಲರು. ಆ ವ್ಯಕ್ತಿತ್ವದಲ್ಲಿ ತಳಕಾಣದ ಆಳವೂ ಉಂಟು, ಎಲ್ಲೆಮೀರಿದ ಆಕಾಶದೆತ್ತರವೂ ಉಂಟು. ಅವರ ಪ್ರವಚನಗಳು ನೇರವಾಗಿವೆ, ಮೊನಚಾಗಿವೆ, ಕೇಳುಗರನ್ನು ಹಿಡಿದು ಅಲ್ಲಾಡಿಸಿ ಎಬ್ಬಿಸುವಂತಿವೆ.

ಲಕ್ಷ್ಮೀನಾರಾಯಣ ಅರೋರ



ಕೆಟ್ಟ ಜನರ ದಿಟ್ಟ ಮಾತುಗಳಿಂದಲೇ ಮಹಾತ್ಮರ ಗೌರವವು ಹಾನಿಯಾಗುವುದಿಲ್ಲ. ಧೂಳು ಕೂತರೆ ರತ್ನದ ಬೆಲೆ ಕಡಿಮೆಯಾಗಲಾರದು.

—ಭಾರವಿ

ನೀರಿನಿಂದ ಬೆಂಕಿಯನ್ನೂ ಅಂಕುಶದಿಂದ ಆನೆಯನ್ನೂ ಔಷಧದಿಂದ ರೋಗವನ್ನೂ ನಿಯಂತ್ರಿಸಬಹುದು; ಆದರೆ ಮೂರ್ಖನಿಗೆ ಮಾತ್ರ ಮದ್ದಿಲ್ಲ.

—ಭರ್ತೃಹರಿ

ವಿಷಾಘಾತ ಪ್ರಸಂಗಗಳಲ್ಲಿ ಪ್ರಥಮ ಚಿಕಿತ್ಸೆ
ಚೇಳಿನ ವಿಷ ಇತ್ಯಾದಿ

ಚೇಳುಕುಟುಕಿದಾಗ ಒಂದೆರಡು ಮಿನಿಟುಗಳಲ್ಲೆ ಆ ಸ್ಥಳದಲ್ಲಿ ಕೆಂಪಗೆ ಊದಿಕೊಳ್ಳುವುದಲ್ಲದೆ ವಿಪರೀತ ಉರಿ ಆಗುತ್ತದೆ. ಕುಟುಕಿದ ಸ್ಥಳದಿಂದ ಚಳಕು ಹೊಡೆದಂತಾಗುವುದು. ಚೇಳು ಕುಟುಕಿನ ವೈಶಿಷ್ಟ್ಯ ತಲೆಸುತ್ತು, ಕಣ್ಣು ಕತ್ತಲೆ ಬರುವಿಕೆ, ಬಳಲಿಕೆ, ವಮನ, ಅದಿರುವಾಯು ಇವೂ ಕಂಡುಬರುವುವು. ಅನೇಕ ವೇಳೆ ವಿಪರೀತ ಬೆವತು ಸುಸ್ತುಧಕ್ಕೆ ಆಗುವುದೂ ಇದೆ. ಅಪರೂಪಕ್ಕೆ ಶ್ವಾಸಕೋಶಗಳ ಊತದಿಂದ ಮರಣ ಸಂಭವಿಸಬಹುದು. ಮಕ್ಕಳನ್ನು ಚೇಳು ಕುಟುಕಿದಾಗ ಮತ್ತು ತೀವ್ರತರ ವಿಷವನ್ನುಳ್ಳ ಜಾತಿಯ ಚೇಳು ಕುಟುಕಿದಾಗ ಹೀಗಾಗುವುದಿದೆ. ಬೆರಳನ್ನು ಕುಟುಕಿದ ಕೆಲವು ಸಂದರ್ಭಗಳಲ್ಲಿ ತತ್‍ಕ್ಷಣದ ಹಿಂಸೆಗಳು ಶಮನವಾದ ಮೇಲೆ ಆ ಭಾಗ ಕ್ರಮೇಣ ಒಣಗಿ ಸಣ್ಣದಾಗಿ ಕೊನೆಗೆ ಬಿದ್ದು ಹೋಗಬಹುದು. ಚೇಳಿನ ವಿಷದಲ್ಲಿ ಹಾವಿನ ವಿಷದಲ್ಲಿಯಂತೆಯೇ ನರಕ್ರಿಯೆಗೆ ಧಕ್ಕೆಮಾಡುವ ಘಟಕ ಮತ್ತು ರಕ್ತಕಣನಾಶಕ ಘಟಕ ಇರುವುದರಿಂದ ಈ ಲಕ್ಷಣಗಳು ಕಂಡುಬರುತ್ತವೆ. ಆದರೂ ಚೇಳು ಕುಟುಕಿನಿಂದ ಸಾವು ಸಂಭವಿಸುವುದು ತೀರ ಅಪರೂಪವೇ ಸರಿ. ಚೇಳುಕುಟುಕಿದಾಗ ದೇಹವನ್ನು ಸೇರುವ ವಿಷಪ್ರಮಾಣ ಹಾವು ಕಡಿದಾಗಿನದಕ್ಕಿಂತ ಕಡಿಮೆ ಇರುವುದರಿಂದ ಮರಣ ಪ್ರಸಂಗ ಅಪರೂಪವಾಗಿರಬಹುದೆಂಬುದೂ ವ್ಯಕ್ತ.

ಚೇಳುಕುಟುಕಿನ ವೇದನೆಯನ್ನು ಶಮನಗೊಳಿಸಲು ಕೊಕೆಯ್ನ್, ಪ್ರೋಕೆಯ್ನ್‌ಗಳಂಥ ಮದ್ದುಗಳನ್ನು ಸ್ಥಳೀಯ ಚುಚ್ಚುಮದ್ದಾಗಿ ಕೊಟ್ಟು ಆ ಕ್ಷೇತ್ರದ ನರಗಳನ್ನು ತಾತ್ಕಾಲಿಕವಾಗಿ ನಿಷ್ಕ್ರಿಯೆಗೊಳಿಸುವುದು ಒಂದೇ ಮಾರ್ಗ. ಸಾಮಾನ್ಯವಾಗಿ ಇದಕ್ಕೆ ವೈದ್ಯನೇ ಅಗತ್ಯವಾಗಿರುವುದರಿಂದ ಅಲ್ಲಿಯವರೆಗೆ ಕುಟುಕು ಸ್ಥಳದಿಂದ ಮೇಲುಭಾಗಕ್ಕೆ ಸಿಂಬಿಸುತ್ತಿ ಬಿಗಿಮಾಡುವುದು, ಸ್ಥಳವನ್ನು ಅಮೋನಿಯಾ, ಪೊಟ್ಯಾಸಿಯಮ್ ಪರ್ಮ್ಯಾಂಗನೇಟ್ ಅಥವಾ ಬಿಳಿಗಾರ (ಬೊರಾಕ್ಸ್) ದ್ರಾವಣಗಳಿಂದ ಚೆನ್ನಾಗಿ ತೊಳೆಯುವುದು. ಇಂಥ ಕ್ರಮಗಳನ್ನು ಕೈಗೊಳ್ಳಬೇಕು. ಸತತವಾಗಿ ತಣ್ಣೀರು ಅಥವಾ ಮಂಜುಗೆಡ್ಡೆಯಿಂದ ಇಲ್ಲವೆ ಈಥೈಲ್‌ಕ್ಲೋರೈಡ್ ಸಿಂಪಡಿಕೆಯಿಂದ ಸ್ಥಳವನ್ನು ಶೈತ್ಯೀಕರಿಸಿ ಉರಿಯನ್ನು ಶಮನಮಾಡಬೇಕು. ಹಿಸ್ಟಮಿನ್ ನಿರೋಧಕ ಮಾತ್ರೆಯನ್ನೂ ನುಂಗಿಸಬಹುದು.

ಮಂತ್ರತಂತ್ರಗಳು ಮತ್ತು ಇತರ ಜನಜನಿತ ಚಿಕಿತ್ಸೆಗಳನ್ನು ಕೈಗೊಳ್ಳು ವುದರಿಂದ ಒಂದೆರಡು ಗಂಟೆಗಳು ಕಳೆಯಬಹುದು. ಅಷ್ಟು ಹೊತ್ತಿಗೆ ಕುಟುಕಿನ ಬಾಧೆಗಳು ತಾವಾಗಿಯೇ ತಕ್ಕಷ್ಟು ಶಮನವಾಗಿ ತಡೆದುಕೊಳ್ಳಬಹುದಾಗಿರು ವಂತಿರುತ್ತವೆ. ಪ್ರಥಮ ಚಿಕಿತ್ಸಕ ಇದನ್ನು ಅರಿತು ಮೇಲ್ಕಂಡ ಕ್ರಮಗಳಿಂದ ಆಗಬಹುದಾದ ಲಾಭವನ್ನೂ ಪಡೆಯಬಹುದು.

ಕಣಜ ಕುಟುಕಿದಾಗಲೂ ಚೇಳು ಕುಟುಕಿದಾಗಿನ ಲಕ್ಷಣಗಳೇ ಕಂಡು ಬರುವುದರಿಂದ ಆಗ ಅನುಸರಿಸುವ ಕ್ರಮಗಳನ್ನೇ ಈಗಲೂ ಅನುಸರಿಸಬಹುದು.

ಜೇನು ಕುಟುಕು ಪ್ರಸಂಗಗಳಲ್ಲಿ ಹೆಜ್ಜೇನು ಕುಟುಕು ಭೀಕರವಾಗಿರುವ ಸಂಭವವಿದೆ. ಬಟ್ಟೆಮುಚ್ಚಿಲ್ಲದೆ ಇರುವ ತಲೆ, ಮುಖ, ಕತ್ತು ಹಾಗೂ ಕೈಕಾಲು ಗಳ ಮೇಲೆ, ಅಟ್ಟಿಸಿಕೊಂಡು ಬಂದ ಜೇನು ಹುಳುಗಳು ಎರಗಿ ಕುಟುಕುವುದ ರಿಂದ ಅನೇಕ ಕಡೆ ಘಾಸಿ ಆಗುವುದೂ ಅದಕ್ಕೆ ತಕ್ಕಂತೆ ದೇಹಕ್ಕೆ ಸೇರುವ, ವಿಷಪ್ರಮಾಣ ನಿರ್ಧಾರವಾಗುವುದೂ ವ್ಯಕ್ತ. ಕುಟುಕಿದ ಸ್ಥಳದಲ್ಲಿ ಜೇನಿನ ಕೊಂಡಿಗಳು ಹೊಕ್ಕಿರುವುದಲ್ಲದೆ ಒಂದೆರಡು ಮಿನಿಟುಗಳಲ್ಲೇ ದೊಡ್ಡ ಗಂಥೆಗಳು ಕಾಣಬರುತ್ತವೆ. ತಲೆಸುತ್ತು, ಎದೆ ಡವಡವ ಎಂದು ಹೊಡೆದುಕೊಳ್ಳುವುದು ಎದೆಯನ್ನು ಹಿಡಿಕೆ (ಇಕ್ಕಳ) ಯಲ್ಲಿಟ್ಟು (ವೈಸ್) ಅದುಮಿದಂತಾಗುವುದು, ತತ್ಪರಿಣಾಮವಾಗಿ ಉಸಿರಾಡಲು ಕಷ್ಟವಾಗುವುದು, ಬಿಟ್ಟುಬಿಟ್ಟು ಉಸಿರಾಡು ವುದು, ಮುಖ ಕೆಂಪಾಗಿ ಬೆವತು ತಣ್ಣಗಾಗಿ, ಅನಂತರ ನೀಲಿಗಟ್ಟುವುದು, ಹತೋಟಿ ತಪ್ಪಿ ಮಲಮೂತ್ರಗಳಾಗುವುದು. ಇಂಥ ಲಕ್ಷಣಗಳು ಸೂಕ್ಷ್ಮ ಪ್ರಕೃತಿಯ ವ್ಯಕ್ತಿಗಳಲ್ಲಿ ಕಂಡುಬರುವುದಿದೆ. ತೀರ ಅಪರೂಪವಾಗಿ ಇವು ಸುಸ್ತು ಧಕ್ಕೆಯಲ್ಲಿ ಪರಿಣಮಿಸಿ ಅಂತಿಮವಾಗಿ ಮರಣ ಸಂಭವಿಸಬಹುದು.

ಹೊಕ್ಕಿರುವ ಕೊಂಡಿಗಳನ್ನು ಚಿಮುಟದಲ್ಲಿ ಹಿಡಿದು ಕಿತ್ತುಹಾಕಿ ಆ ಸ್ಥಳ ದಲ್ಲಿ ಹಿಸ್ಟಮಿನ್ ಪ್ರತಿರೋಧಕ ಮುಲಾಮನ್ನು ಲೇಪಿಸಿ ಮೆಲ್ಲಗೆ ಸವರಬೇಕು. ನುಂಗಲು ತೊಂದರೆ ಇಲ್ಲದ ಸಂದರ್ಭಗಳಲ್ಲಿ ಹಿಸ್ಟಮಿನ್ ಪ್ರತಿರೋಧಕ ಮಾತ್ರೆ ಇಲ್ಲವೆ ದ್ರಾವಣವನ್ನು ನೀಡಬೇಕು. ಸಾಧ್ಯವಾದರೆ ಅಡ್ರೀನಲಿನ್ ಮತ್ತು ಅಥವಾ ಹಿಸ್ಟಮಿನ್ ಪ್ರತಿರೋಧಕ ಮದ್ದುಗಳನ್ನು ಚುಚ್ಚುಮದ್ದಾಗಿ ಸ್ಥಳೀಯವಾಗಿ ಕೊಡಬೇಕು.

ಕಂಬಳಿಹುಳುಗಳ ಸೋಂಕು ತಗಲಿದಾಗ ನವೆ ಉರಿಗಳು ಉಂಟಾಗಿ ಆ ಸ್ಥಳದಲ್ಲಿ ಹೊಕ್ಕಿರುವ ರೋಮಗಳೂ ಅವುಗಳ ಅಡಿಯಲ್ಲಿ ಚುಕ್ಕೆಯಂಥ ಗಂಥೆಗಳೂ ಕಂಡು ಬರುತ್ತವೆ. ಸ್ಥಳೀಯವಾಗಿ ಕೆರೆದು ಉಜ್ಜಿಕೊಳ್ಳುವಂತೆ

ಉತ್ಕಟೇಚ್ಛೆ ಉಂಟಾದರೂ ಗಟ್ಟಿ ಮನಸ್ಸುಮಾಡಿ ಅದನ್ನು ತಡೆದುಕೊಳ್ಳಬೇಕು. ಕೆರೆದರೆ ನಾಟಿಕೊಂಡಿರುವ ರೋಮಗಳೂ ಇನ್ನೂ ಆಳಕ್ಕೆ ಹೋಗಿ ಬಾಧೆ ಹೆಚ್ಚಾಗುತ್ತದೆ. ಸ್ಥಳೀಯವಾಗಿ ಹಿಸ್ಟಮಿನ್ ಪ್ರತಿರೋಧ ಔಷಧ ಯಾವುದನ್ನಾದರೂ ಸಿಂಪಡಿಸುವುದು ಶ್ರೇಷ್ಠ.

ಹುಚ್ಚುನಾಯಿ ನರಿತೋಳಗಳ ಕಡಿತ, ಬೆಕ್ಕುಮಂಗಗಳ ಪರಚುವಿಕೆ ಇಲಿ ಮೂಗಿಲಿಗಳು ಕಡಿಯುವುದು, ಇವು ಹಳ್ಳಿಗಾಡಿನ ಕಡೆ ಅಪರೂಪವಲ್ಲ. ಇಂಥ ಪ್ರಸಂಗಗಳಲ್ಲಿ ವಿಷ ಇಲ್ಲವೇ ವಿಷಾಣುಗಳು ದೇಹದ ಒಳಹೋಗುವುದರಿಂದ ಹಾಗೇ ಬಿಟ್ಟರೆ ಮುಂದಕ್ಕೆ ವಿಶಿಷ್ಟ ಭೀಕರ ರೋಗಗಳು ತಲೆದೋರಬಹುದು. ಆದ್ದರಿಂದ ಆದಷ್ಟು ಶೀಘ್ರವಾಗಿ ಕುದ್ದು ಆರಿಸಿದ ಬೆಚ್ಚನೆ ನೀರಿನಿಂದ ಗಾಯಗಳನ್ನು ಚೆನ್ನಾಗಿ ತೊಳೆದು ಕ್ರಿಮಿನಾಶಕ ದ್ರಾವಣಗಳನ್ನು ಲೇಪಿಸಿ ತಜ್ಞ ವೈದ್ಯಚಿಕಿತ್ಸೆಗೆ ವ್ಯಕ್ತಿಯನ್ನು ಕಳುಹಿಸುವುದು ಯುಕ್ತ.

ಅಪರೂಪವಾಗಿ ಕ್ಯಾಂಥರಿಡಿನ್ ಎಂಬ ಕೀಟಜನ್ಯ ವಿಷವಸ್ತುವಿನ ಪ್ರಯೋಗ ಪ್ರಸಂಗ ಕಂಡುಬರಬಹುದು. ಕ್ಯಾಂಥರಿಡಿಸ್ ಎಂಬುದು ಕ್ಯಾಂಥರಿಡಿಸ್ ಎಂಬ ವಾಟಿ ಹುಳುವಿನ ಮೃತದೇಹಚೂರ್ಣ. ಕೀಟದ ವಾಟಿ ಫಳಫಳ ಹೊಳೆಯುವ ಹಸಿರು ಬಣ್ಣದ್ದಾಗಿರುವುದರಿಂದ ಕ್ಯಾಂಥರಿಡಿನ್ ಹೊಳೆಯುವ ಹಸಿರು ತುಣುಕುಗಳುಳ್ಳ ಬೂದ ಕಂದುವರ್ಣ ಪುಡಿಯಾಗಿರುತ್ತದೆ. ಪುಡಿಯ ಮುಖ್ಯ ರಾಸಾಯನಿಕ ಘಟಕಕ್ಕೂ ಇದೇ ಹೆಸರಿದ್ದು ಅದು ಸ್ಪರ್ಶಿಸಿದ ಸ್ಥಳಗಳಲ್ಲಿ ಒಂದೆರಡು ಗಂಟೆಗಳಲ್ಲಿ ಉರಿಬೊಬ್ಬೆ ಏಳಿಸಬಲ್ಲದ್ದಾಗಿದೆ. ಭಾರತದಲ್ಲಿ ಕ್ಯಾಂಥರಿಡಿನ್ ಎಂಬ ವಾಟಿಹುಳು ಇಲ್ಲದಿದ್ದರೂ ಅದೇ ಜಾತಿಯ ಮತ್ತು ಅದೇ ಪಾಷಾಣಗುಣದ ಮೈಲಾಬ್ರಿಸ್ ಎಂಬ ಕೀಟಕದ ಪ್ರಭೇದಗಳು ಭಾರತದ ಅನೇಕ ಪ್ರಾಂತ್ಯಗಳಲ್ಲಿ, ಅದರಲ್ಲೂ ಮಳೆಗಾಲದಲ್ಲಿ ಕಾಣಸಿಗುತ್ತವೆ. ಒಂದು ಪ್ರಭೇದ ಬೆಂಗಳೂರಿನ ಸುತ್ತಮುತ್ತ ಹೊಲ ಮತ್ತು ತರಕಾರಿ ತೋಟಗಳಲ್ಲಿ ಇರುವುದೂ ತಿಳಿದಿದೆ. ವೈದ್ಯಕೀಯ ಕಾರಣಗಳಿಗಾಗಿ ಉರಿಬೊಬ್ಬೆ ಬರಿಸಲು ಕ್ಯಾಂಥರಿಡಿನ್ನನ್ನು ಎಚ್ಚರಿಕೆಯಿಂದ ಬಳಸುವುದಾದರೂ ಹಿಂಸಾಕ್ರಮವಾಗಿ ಅದನ್ನು ಮಿತಿಮೀರಿದ ಪ್ರಮಾಣದಲ್ಲಿ ಬಳಸುವುದೂ ಇದೆ. ಹಾಗೆ ಬಳಸಿದಾಗ ಇದು ರಕ್ತಗತವಾಗಿ ದೇಹದ ಬೇರೆ ಬೇರೆ ಕಡೆಗಳಲ್ಲಿ ತೊಂದರೆಗಳನ್ನು ಉಂಟುಮಾಡುವುದಿದೆ. ಕ್ಯಾಂಥರಿಡಿನ್ನನ್ನು ಉದ್ದಿಶ್ಯಪೂರ್ವಕವಾಗಿ ಇಲ್ಲವೆ ಬಲವಂತವಾಗಿ ಸೇವಿಸಿದಾಗಲೂ ಈ ತೊಂದರೆಗಳು ಉದ್ಭವಿಸುವುದು ವ್ಯಕ್ತ. ಬಾಯಿ ನಾಲಿಗೆ ಗಂಟಲುಗಳಲ್ಲಿ ಉರಿಬೊಬ್ಬೆಗಳು ಕಂಡು ಬಂದು ವಿಪರೀತ ಜೊಲ್ಲು

ಉತ್ಪತ್ತಿ ಆಗುತ್ತಿದ್ದರೂ ಅತೀವ ನೀರಡಿಕೆ ಆಗುವುದು ಈ ವಿಷದ ವೈಶಿಷ್ಟ್ಯ. ಆದರೆ ನೀರು ನುಂಗಲೂ ಕಷ್ಟವೆನಿಸುತ್ತದೆ. ವಾಕರಿಕೆ ರಕ್ತ ಹಾಗೂ ಲೋಳೆ ಯುಕ್ತ ವಮನ, ರಕ್ತಮಲ ರಕ್ತಮೂತ್ರಗಳು, ಮೂತ್ರ ವಿಸರ್ಜನೆ ಅತಿ ಕಷ್ಟ ಕರವಾಗಿರುವುದು. ಇವು ಇತರ ವಿಷಲಕ್ಷಣಗಳು. ಉಸಿರಾಟ ಕಷ್ಟವಾಗುತ್ತ, ನಾಡಿ ಕ್ರಮೇಣ ಕುಂದುತ್ತ, ಎಚ್ಚರ ತಪ್ಪಿ, ಅದಿರುವಾಯು ಕಂಡು ಬಂದು ಅಂತಿಮ ವಾಗಿ ಮರಣ ಸಂಭವಿಸುವುದಿದೆ. ಗರ್ಭಪಾತಕ್ಕಾಗಿ ಇಲ್ಲವೆ ಕಾಮೋತ್ತೇಜನ ಕ್ಕಾಗಿ ಕ್ಯಾಂಥರಿಡಿನ್ನನ್ನು ಬಳಸುವ ಸಂಭವವಿರುವುದರಿಂದ ಕ್ಯಾಂಥರಿಡಿನ್ನಿನ ವಿಷಪ್ರಸಂಗಗಳು ಯಾವಾಗಾದರೊಮ್ಮೊಮ್ಮೆ ಕಂಡು ಬರುವುದಿದೆ. ಕ್ಯಾಂಥರಿಡಿ ನ್ನನ್ನು ಕೋಳಿಗಳಿಗೆ ಕೊಟ್ಟಾಗ ಅವು ಅವುಗಳ ದೇಹಗತವಾದರೂ ಅವುಗಳಲ್ಲಿ ಏನು ಕೆಡುಕನ್ನೂ ಉಂಟುಮಾಡುವುದಿಲ್ಲ. ಆದರೆ ಅಂಥ ಕೋಳಿಗಳನ್ನು ಪಕ್ವಮಾಡಿ ಸೇವಿಸಿದರೆ, ಸೇವಿಸಿದ ವ್ಯಕ್ತಿಯಲ್ಲಿ ವಿಷಪರಿಣಾಮಗಳು ಕಂಡು ಬರುವುದಿದೆ. ಕೊಲೆಗಾಗಿ ಈ ಪ್ರಮೇಯವನ್ನು ಬಳಸಬಹುದಾದ್ದರಿಂದ ಕ್ಯಾಂಥರಿಡಿನ್ನಿನ ವಿಷಲಕ್ಷಣಗಳನ್ನು ತಿಳಿದಿರುವುದು ಒಳ್ಳೆಯದು.

ಹೀರುಪಿಚಕಾರಿ ನಳಿಕೆಗಳನ್ನು ಬಳಸಿ ಜಠರವನ್ನು ಶುದ್ಧವಾಗಿ ತಣ್ಣೀರಿ ನಿಂದ ತೊಳೆಯಬೇಕು. ಎಳನೀರು, ಜೇನು ಬೆರಸಿದ ನೀರು ೫% ಗ್ಲೂಕೋಸ್ ದ್ರಾವಣ ಇಂಥವನ್ನು ಕುಡಿಯಲು ಯಥೇಚ್ಛವಾಗಿ ಕೊಟ್ಟು ಬಲವಂತವಾಗಿ ಕುಡಿಸಬೇಕು. ಹಾಲು, ತೈಲಗಳು, ಮದ್ಯಸಾರ ಇವು ನಿಷಿದ್ಧ. ಅಂತೆಯೇ ಹಿಂಸೆ ಶಮನಕ್ಕಾಗಿ ಮಾರ್ಫಿನ್ ಚುಚ್ಚುಮದ್ದು ಕೂಡ.

ಕಲುಷಿತ ಆಹಾರ ಸೇವನೆಯಿಂದ ವಿಷಲಕ್ಷಣಗಳು ಉಂಟಾಗುವುದಿದೆ. ಸಾಮಾನ್ಯವಾಗಿ ಸಮಾರಾಧನೆ ಸಂದರ್ಭಗಳಲ್ಲಿ ಕಲುಷಿತ ಆಹಾರವನ್ನು ಅನೇಕರು ಸೇವಿಸುವುದರಿಂದ ಒಟ್ಟಿಗೆ ಅನೇಕರಲ್ಲಿ ವಿಷಲಕ್ಷಣಗಳು ಕಂಡು ಬರುವುದು ವ್ಯಕ್ತ. ಇಂಥ ಆಹಾರದಲ್ಲಿರುವ ಸಾಲ್ಮೊನೆಲ್ಲಿ ಎಂಬ ಏಕಾಣುಗಳ ಸೋಂಕಿನಿಂದ ಅಥವಾ ಅವು ಸ್ರವಿಸಿದ ವಿಷದಿಂದ ಈ ಲಕ್ಷಣಗಳು ಉಂಟಾಗು ತ್ತವೆ. ಕೆಟ್ಟುಹೋದ ಮಾಂಸ, ಮೀನು, ಮೊಟ್ಟೆ, ಹಾಲು, ಐಸ್‌ಕ್ರೀಮ್, ಡಬ್ಬದಲ್ಲಿ ಮೊಹರಾದ ಆಹಾರಗಳು, ಇವುಗಳಲ್ಲಿ ಈ ವಿಷ ಇರುವುದುಂಟು. ಈ ಪದಾರ್ಥಗಳನ್ನು ಪಕ್ವಮಾಡಿ ಬಳಸಿದಾಗಲೂ ವಿಷನಾಶವಾಗುವುದಿಲ್ಲ; ಜೊತೆಗೆ ಅನೇಕ ವೇಳೆ ಬೇರೆ ದುರ್ವಾಸನೆಗಳು ಇಲ್ಲದಿರುವುದರಿಂದ ಈ ಪದಾರ್ಥಗಳು ಕೆಟ್ಟುಹೋಗಿರುವ ವಿಷಯವೂ ಗೊತ್ತಾಗುವುದಿಲ್ಲ. ಏಕಾಣುಗಳ ವಿಷದಿಂದ ಪರಿಣಾಮವಾಗಿದ್ದರೆ ಆಹಾರ ಸೇವಿಸಿದ ಕೂಡಲೆ ಲಕ್ಷಣಗಳು ಕಂಡು

ಬರುತ್ತವೆ. ವಿಷಾಣುಗಳ ಸೋಂಕೇ ಕಾರಣವಾಗಿದ್ದರೆ ಲಕ್ಷಣಗಳು ಸುಮಾರು ೨೪ ಗಂಟೆಗಳ ನಂತರ ಕಂಡು ಬರುತ್ತವೆ.

ತಲೆನೋವು, ತಲೆಸುತ್ತು, ಅತೀವದಾಹ, ಹಠಾತ್ ವಮನ, ಅನಂತರ ಭೇದಿ (ಕಾಲರದಲ್ಲಿ ಮೊದಲು ಭೇದಿ, ಅನಂತರ ವಮನ ಎನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು). ಹೊಟ್ಟೆ ನುಲಿಯುವಿಕೆ, ಕಣ್ಣಿನ ಪಾಪೆಗಳು ಹಿಗ್ಗಿರುವುದು, ತಣ್ಣಗೂ ತೇವವಾಗಿಯೂ ಇರುವ ಚರ್ಮ, ಇಲ್ಲವೇ ಮೈನಡುಕ ಮತ್ತು ಜ್ವರ (೪೫ C ನಷ್ಟು), ಸುಸ್ತು ಸ್ನಾಯುಸೆಳೆತ, ಇವು ಸಾಮಾನ್ಯ ಲಕ್ಷಣಗಳು. ತೀವ್ರ ಸ್ಥಿತಿಗಳಲ್ಲಿ ನಾಡಿ ಮಂದವಾಗಿ, ಹೃದಯ ಸೋತು ಮರಣ ಸಂಭವಿಸುತ್ತದೆ. ಹೀರುವಿಚಕಾರಿಯಂಥ ವಿಶಿಷ್ಟ ಸಲಕರಣೆಯಿಂದ ಜಠರವನ್ನು ತೊಳೆಯುವುದು, ತೀವ್ರವಾಗಿ ವರ್ತಿಸುವ ಲವಣವಿರೇಚಕಗಳನ್ನು ಕೊಡುವುದು, ಉತ್ತೇಜಕ ಪಾನೀಯಗಳನ್ನು ಸ್ವಲ್ಪಸ್ವಲ್ಪವಾಗಿ ಬಹುಬಾರಿ ಕೊಡುವುದು, ಇವು ಈ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಮಾರ್ಗಗಳು.

ಆಹಾರದಲ್ಲಿಯ ವಿಷಾಣುವಿಷದಿಂದ ಪರಿಣಮಿಸುವ ಇನ್ನೊಂದು ಸ್ಥಿತಿ ಬ್ಯಾಟ್ಯುಲಿಸಮ್. ಬ್ಯಾಸಿಲ್ಲಸ್ ಬಾಟ್ಯುಲೈನಸ್ ಎನ್ನುವ ವಿಷಾಣುಸ್ರವಿಸುವ ವಿಷದಿಂದ ಈ ಸ್ಥಿತಿ ಕಂಡುಬರುತ್ತದೆ. ಅಲ್ಪವಾಗಿ ಪೂರ್ವಸಂಸ್ಕಾರಗೊಳಿಸಿ ಡಬ್ಬದಲ್ಲಿ ಮೊಹರು ಮಾಡಿಟ್ಟ ಮೀನು, ಮಾಂಸಗಳು ಹಾಗೂ ಹುಳಿಯಾಗಿರುವ ಹಣ್ಣುತರಕಾರಿಗಳು ಇವುಗಳಲ್ಲಿ ಈ ವಿಷ ಇರುವ ಸಂಭವವಿದೆ. ಇಂಥ ಆಹಾರಗಳನ್ನು ಸೇವಿಸಿದ ೨೪ ಗಂಟೆಗಳ ಬಳಿಕ ವಿಷಲಕ್ಷಣಗಳು ಕಂಡು ಬರುತ್ತವೆ. ಬಾಯಿ ಒಣಗುವುದು, ನುಂಗಲು ಕಷ್ಟವಾಗುವುದು, ವಾಕರಿಕೆ, ವಮನ, ಹೊಟ್ಟೆಶೂಲೆ, ಭೇದಿ ಇವು ಪ್ರಾರಂಭ ಲಕ್ಷಣಗಳು. ಅನಂತರ ಕಣ್ಣಿನ ಪಾಪೆ ಹಿಗ್ಗುವುದು, ಕಣ್ಣು ತಾನಾಗಿಯೇ ಮುಚ್ಚಿಕೊಳ್ಳುವುದು, ದ್ವಿದೃಷ್ಟಿ, ತೊದಲು ಮಾತು, ಉಸಿರುಕಟ್ಟುವಿಕೆ, ಸ್ನಾಯುಗಳ ದುರ್ಬಲತೆ, ಮಂದ ನಾಡಿ, ಮೈ ನೀಲಿಗಟ್ಟುವುದು, ಜ್ವರ (೪೪°C ನಷ್ಟು) ಇವು ಕಂಡುಬರುತ್ತವೆ. ಸಾಮಾನ್ಯವಾಗಿ ಮರಣ ೨೪ ಗಂಟೆಗಳಲ್ಲಿ ಸಂಭವಿಸುತ್ತದೆ. ಮರಣಕ್ಕೆ ಮುನ್ನ ದೇಹದ ತಾಪ ಹಠಾತ್ತಾಗಿ ಕುಗ್ಗುವುದಿದೆ.

ಸ್ಥಿತಿ ಪತ್ತೆ ಆದ ಕ್ಷಣ ಹೊಟ್ಟೆಯನ್ನು ತೊಳೆಯುವುದು, ಎಳನೀರು, ಚಿಟಿಕೆ ಉಪ್ಪು ಬೆರಸಿದ ಬಾರ್ಲಿ ನೀರು ಇವುಗಳನ್ನು ಕೊಡುವುದು. ಅಗತ್ಯವಾದರೆ ಕೃತಕ ಶ್ವಾಸ ಕೈಗೊಳ್ಳುವುದು. ಇವು ಈ ಸ್ಥಿತಿಯಲ್ಲಿ ಅನುಸರಿಸಬೇಕಾದ ಕ್ರಮಗಳು.

ಮೇಲೆ ವಿವರಿಸಿದ ವಿಷಾಘಾತ ಪ್ರಸಂಗಗಳನ್ನು ಬಿಟ್ಟು ಬೇರೆ ಅನೇಕಾನೇಕ ವಿಷ ಪ್ರಸಂಗಗಳು ಇರುತ್ತವೆ ಎನ್ನುವುದು ವ್ಯಕ್ತ. ಇವುಗಳಲ್ಲಿ ಹೆಚ್ಚು ಸಾಮಾನ್ಯವಾಗಿರುವ ಕೆಲವನ್ನು ಮಾತ್ರ ಕೆಳಗೆ ವಿವರಿಸಿದೆ.

ಅಫೀಮು : ಇದನ್ನು ಚಟಕಾರಿ ವಸ್ತುವಾಗಿ ಇಲ್ಲವೇ ಆತ್ಮಹತ್ಯೆಗೆ ಸೇರಿಸುವುದಿದೆ. ಅಫೀಮು ಮಯಕಕಾರಿ ವಿಷ. ಶೀಘ್ರವಾಗಿ ಗಾಢ ನಿದ್ರೆಯನ್ನು ಉಂಟುಮಾಡಿ ಮಯಕಸ್ಥಿತಿಗೆ ಕೊಂಡೊಯ್ಯುತ್ತದೆ. ಕಣ್ಣಿನ ಪಾಪೆಗಳು ಅತಿಯಾಗಿ ಕಿರಿದಾಗಿರುವುದು. ಅಫೀಮು ಪ್ರಯೋಗದಲ್ಲಿನ ವಿಶಿಷ್ಟ ಲಕ್ಷಣ— ಗುರುಗುಟ್ಟು ಉಸಿರಾಟ, ನಿಧಾನ ಹಾಗೂ ದುರ್ಬಲ ನಾಡಿ, ತಂಪಾಗಿ, ಅಂಟಂಟಾಗಿ ನೀಲಿಗಟ್ಟಿರುವ ಚರ್ಮ ಇವು ಇತರ ಲಕ್ಷಣಗಳು. ಪತ್ತೆ ಆದ ಕೂಡಲೆ ವ್ಯಕ್ತಿಗೆ ತುರ್ತಾಗಿ ವಮನ ಮಾಡಿಸಬೇಕು. ಇದಕ್ಕಾಗಿ ಅಡಿಗೆ ಉಪ್ಪನ್ನು ಬಳಸಬಾರದು. ಉಪ್ಪು ಅಫೀಮಿನ ವಿಷಗುಣವನ್ನು ಹೆಚ್ಚಿಸುತ್ತದೆ ಎಂದು ಹೇಳಲಾಗಿದೆ. ಬದಲು ಸಾಸಿವೆ ಪುಡಿಯನ್ನು ವಮನಕಾರಕವಾಗಿ ಬಳಸಬೇಕು. ೫ ಮಿನಿಟುಗಳಿಗೊಮ್ಮೆ ಹೀಗೆ ವಮನ ಮಾಡಿಸುತ್ತಿರಬೇಕು. ಗಂಟಲಿಗೆ ಬೆರಳು ಹಾಕಿ ವಮನಮಾಡಿಸಿದರೂ ಸರಿ. ತಿರುಗಾಡಿಸುತ್ತಿರುವುದು, ಮಂದವಾಗಿ ಇಳಿಸಿದ ಕಾಫಿಯನ್ನು ಕೊಡುವುದು, ಒದ್ದೆ ಬಟ್ಟೆಯಲ್ಲಿ ಒರಸಿ ಗಾಳಿಹಾಕುವುದು. ಇತ್ಯಾದಿ ಕ್ರಮಗಳಿಂದ ವ್ಯಕ್ತಿಗೆ ನಿದ್ರೆ ಬಾರದಂತೆ ಸರ್ವಥಾ ಪ್ರಯತ್ನಿಸಬೇಕು. ಕ್ಯಾಂಡಿದ್ರಾವಣ ಇದ್ದರೆ ಎರಡು ಚಮಚ ದ್ರಾವಣವನ್ನು ಒಂದು ದೊಡ್ಡ ಬಟ್ಟಲು ನೀರಿಗೆ ಸೇರಿಸಿ ಕುಡಿಸಬೇಕು.

ಆರ್ಸೆನಿಕ್ : ಪಿಂಗಾಣಿ ಚೂರುಗಳಂತಿರುವ ಈ ಮದ್ದು ಗಂದಿಗೆ ಅಂಗಡಿಗಳಲ್ಲಿ ಸುಲಭವಾಗಿ ಸಿಕ್ಕುತ್ತದೆ. ಕ್ರಿಮಿಕೀಟಗಳಿಂದ ಮರಮುಟ್ಟುಗಳು ಕೆಡದೇ ಇರುವಂತೆ ಮಾಡಲು ಇದನ್ನು ಬಳಸುವುದಿದೆ. ರುಚಿರಹಿತವಾಗಿರುವುದರಿಂದಲೂ ಕೇವಲ ಒಂದು ಪ್ರಯೋಗದಿಂದಲೇ ಮಾರಕವಾಗಿರುವುದರಿಂದಲೂ ಇದನ್ನು ಆಹಾರದಲ್ಲಿ ಬೆರಸಿಕೊಟ್ಟು ಕೊಲೆ ಪ್ರಯತ್ನ ಮಾಡುವುದು ಸಾಮಾನ್ಯ. ಪ್ರಯೋಗಿಸಿದ ಅರ್ಧಗಂಟೆಯಲ್ಲಿ ಜಠರದ ಉರಿ, ವಮನ, ರಕ್ತಯುಕ್ತ ಭೇದಿ, ಜೋಮು, ಚಳುಕು, ಸುಸ್ತುಥಕ್ಕೆ; ಮರಣಪೂರ್ವ ಮಯಕ ಇವುಗಳು ಕ್ರಮವಾಗಿ ಕಂಡುಬಂದು ಮರಣಸಂಭವಿಸುತ್ತದೆ. ವಮನ ಮಾಡಿಸುವುದು, ಮೊಟ್ಟೆ ನೀರು, ಇಲ್ಲವೆ ಮೊಟ್ಟೆ, ಬೆಚ್ಚಗಿರುವ ತುಪ್ಪ ಇವುಗಳನ್ನು ಪ್ರಥಮ ಚಿಕಿತ್ಸಾ ಕ್ರಮಗಳಾಗಿ ನೀಡಬೇಕು. ಸುಸ್ತುಥಕ್ಕೆ ಪರಿಸ್ಥಿತಿಯಲ್ಲಿ ಅದಕ್ಕೆ ತಕ್ಕ ಚಿಕಿತ್ಸಾ ಕ್ರಮ ಅಗತ್ಯವೆನ್ನುವುದು ವ್ಯಕ್ತ.

ಗಾಂಜ: ಇದನ್ನು ಬಹುವಿಧವಾಗಿ ಬಳಸುವುದಿದೆ. ಈ ಗಿಡದ ಒಣಗಿದ ಎಲೆ ಕಡ್ಡಿಗಳ ಪುಡಿಯನ್ನು ಭಂಗಿ ಎಂದೂ ಒಣಗಿದ ಹೂವನ್ನು ಗಾಂಜ ಎಂದೂ ಗಂದಿಗೆ ಅಂಗಡಿಗಳಲ್ಲಿ ಮಾರುತ್ತಾರೆ. ಇವುಗಳ ಧೂಮಪಾನ ಮಾಡುವುದು ಅನೇಕರಲ್ಲಿ ಒಂದು ಚಟ. ಇದರ ಎಲೆ ಮತ್ತು ರೆಂಬೆಗಳಿಂದ ಹಿಂಡಿದ ರಾಳಕ್ಕೆ ಚರಸ್ ಎಂದು ಹೆಸರು. ಇದನ್ನು ಮಿಠಾಯಿಗಳಲ್ಲಿ ಸೇರಿಸಿ ಹಷೀಷ್ ಎಂಬ ಪದಾರ್ಥವನ್ನು ತಯಾರಿಸುವುದಿದೆ. ಇದು ಈಜಿಪ್ಟ್, ಅರೇಬಿಯ ಈ ದೇಶಗಳಲ್ಲಿ ಬಹುಬಳಕೆಯಲ್ಲಿದೆ. ಚರಸನ್ನು ಮದ್ಯಸಾರಯುಕ್ತ ಪಾನೀಯಗಳಿಗೆ ಸೇರಿಸಿ ಬಳಸುವುದೂ ಇದೆ. ಗಾಂಜವನ್ನು ಬಳಸಿದಾಗ ಅದರ ಪ್ರಥ[ಮ] ಪರಿಣಾಮ ಮಿದುಳಿನ ಉತ್ತೇಜನ. ಇದರಿಂದ ಅತೀವ ಮತ್ತು ವರ್ಣನಾತೀ[ತ] ಆನಂದದ ಅನುಭವ ಆಗುತ್ತದೆ ಎಂದು ವ್ಯಕ್ತಿಗೆ ಅನ್ನಿಸುತ್ತದೆ. ಆದರೆ ಇದು ಭ್ರಾಂತಿ. ವಾಸ್ತವವಾಗಿ ಮನಸ್ಸು ಉದ್ರೇಕಗೊಂಡು ನಗು ಹಾಗೂ ಅನುಚಿ[ತ] ಮಾತು, ಹುಚ್ಚು ಓಡಾಟ ಇವುಗಳು ವ್ಯಕ್ತಿಯಲ್ಲಿ ಕಂಡು ಬರುತ್ತವೆ. ಅಲ್ಲ[ದೆ] ಸುಪ್ತವಾಗಿರಬಹುದಾದ ಮನುಷ್ಯ ಹತ್ಯೆಪ್ರಕೃತಿ ಹೊಡೆದೆಬ್ಬಿಸಿದಂತಾಗುತ್ತ[ದೆ] ಆದ್ದರಿಂದ ಕೊಲೆಪಾತಕರು ತಾವೇ ಗಾಂಜವನ್ನು ಸೇವಿಸಬಹುದು; ಇಲ್ಲವೆ ಅವರಿಗೆ ಧೈರ್ಯ ಬರಲಿ ಎಂದು ಬೇರೆಯವರು ಅವರಿಗೆ ಕೊಡಬಹುದು. ಕಣ್ಣ[ಿನ] ಪಾಪೆಗಳು ಅರಳಿಸುವುದು. ನಾಡಿದೃಢವಾಗಿದ್ದರೂ ನಿಧಾನವಾಗಿ ಮಿಡಿಯುವುದು, ಪ್ಪ್ಸ ಜೋಂಪುಗಟ್ಟುವುದು, ತಲೆತಿರುಗು, ಮಂಪರು, ಮಯಕ ಇ[ವು] ಇತರ ಲಕ್ಷಣಗಳು. ಮರಣ ಸಂಭವಿಸುವುದೂ ಅಪರೂಪವಿಲ್ಲ. ವಮ[ನ] ಮಾಡಿಸುವುದು, ನಿದ್ರೆ ತಪ್ಪಿಸುವುದು, ಬಿಸಿ ಕಾಫಿ ಹಾಗೂ ಬ್ರಾಂದಿಗಳನ್ನು ಕುಡಿಸುವುದು ಇತ್ಯಾದಿಗಳು ಪ್ರಥಮ ಚಿಕಿತ್ಸಾಕ್ರಮಗಳು. ಕೃತಕ ಉಸಿರಾಟವು ಆಗತ್ಯವಾಗಬಹುದು.

ಉಮ್ಮತ್ತಿ: ಅಫೀಮು ಆರ್ಸೆನಿಕಗಳನ್ನು ಬಿಟ್ಟರೆ ವಿಷಪ್ರಯೋಗಕ್ಕೆ ಸಾಮಾನ್ಯವಾಗಿ ಬಳಸುವ ಪದಾರ್ಥವೆಂದರೆ ಉಮ್ಮತ್ತಿ. ಈ ಗಿಡಕ್ಕೆ ವೈಜ್ಞಾನಿಕವಾಗಿ ದತ್ತೂರ ಎಂಬ ಹೆಸರಿರುವುದರಿಂದ ಇದನ್ನು ದತ್ತೂರಿ ಎಂದು ವ್ಯವಹರಿಸುವುದೂ ಇದೆ. ಆದರೆ ಹಳೆ ಮೈಸೂರು ಪ್ರಾಂತ್ಯದಲ್ಲಿ ಮುರಿದ[ರೆ] ಹಳದಿ ರಸ ಒಸರುವ, ಹಳದಿ ಹೂ ಬಿಡುವ ಮುಳ್ಳು ಎಲೆಯ ಗಸಗಸೆ ಗಿಡ[ದ] ಜಾತಿಗೆ ಸೇರಿದ ಅರ್ಜಿಮೋನಿ ಮೆಕ್ಸಿಕನ ಎಂಬ ಶಾಸ್ತ್ರೀಯ ಹೆಸರಿನ ಗಿಡವನ್ನು ದತ್ತೂರಿ ಗಿಡ ಎಂದು ಕರೆಯುವುದರಿಂದ ವೈಜ್ಞಾನಿಕ ದತ್ತೂರ ಗಿಡಕ್ಕೆ ಇಲ್ಲಿ[ನ] ಬಳಕೆಯಲ್ಲಿರುವ ಉಮ್ಮತ್ತಿ ಎಂದೇ ವ್ಯವಹರಿಸುವುದು ವಾಸಿ. ಉಮ್ಮತ್ತಿ

ಕಾಯಿಯ ಜಜ್ಜಿದ ಬೀಜಗಳನ್ನು ಆಹಾರದೊಡನೆ ಸೇರಿಸಿ ಕೊಡುವುದುಂಟು. ಸಾಮಾನ್ಯವಾಗಿ ಕೊಲ್ಲುವ ಉದ್ದೇಶದಿಂದ ಕೊಡುವುದಿಲ್ಲವಾದರೂ ವ್ಯಕ್ತಿಗೆ ಜ್ಞಾನ ತಪ್ಪಿಸಿ ಒಡವೆವಸ್ತುಗಳನ್ನು ಕದಿಯುವುದಕ್ಕಾಗಿ ಉಮ್ಮತ್ತಿ ಬೀಜವನ್ನು ಬಳಸುವುದಿದೆ. ಗಂಟಲು ಒಣಗುವುದು, ಮುಖ ಕೆಂಪಾಗುವುದು, ಕಣ್ಣಿನ ಪಾಪೆ ಅತಿಯಾಗಿ ಹಿಗ್ಗಿರುವುದು. ಚರ್ಮ ಬಿಸಿಯಾಗಿರುವುದು, ಅಲ್ಲದೆ ಲೇಶವಾದರೂ ಬೆವರಿಲ್ಲದಿರುವುದು, ನುಂಗಲು ಕಷ್ಟವಾಗಿರುವುದು. ಇವು ಪ್ರಾರಂಭ ಚಿಹ್ನೆಗಳು. ಅನಂತರ ಅಶಾಂತಿ, ಅನೈಚ್ಛಿಕ ಚಲನೆಗಳು, ಅಸಂಬದ್ಧ ಗೊಣಗುವಿಕೆ, ಮತ್ತು ಮಯಕ ಕಂಡು ಬರುತ್ತವೆ. ಕ್ರಮೇಣ ಹೃದಯ ಶ್ವಾಸಕೋಶಗಳು ಸೋತು ಸಾವು ಉಂಟಾಗುತ್ತದೆ. ಚೇತರಿಸಿಕೊಂಡರೆ ಅನೇಕ ದಿನಗಳವರೆಗೆ ಪಾಪೆಹಿಗ್ಗಿಯೇ ಇರುತ್ತದೆ. ಗಾಂಜ ವಿಷವೇರಿಕೆಯಲ್ಲಿಯಂತೆಯೇ ಉಮ್ಮತ್ತಿ ವಿಷವೇರಿಕೆಯಲ್ಲೂ ವಮನ ಮಾಡಿಸುವುದು, ನಿದ್ರೆ ತಪ್ಪಿಸುವುದು, ಬಿಸಿ ಕಾಫಿ ಬ್ರಾಂದಿಗಳನ್ನು ಕುಡಿಸುವುದು ಇತ್ಯಾದಿ ಕ್ರಮಗಳನ್ನು ಅನುಸರಿಸಬೇಕು.

ವತ್ಸನಾಭಿ: ಇದು ಅತ್ಯುಗ್ರವಿಷ. ಅದೃಷ್ಟವಶಾತ್ ಭಾರತದಲ್ಲಿ ಇದರ ಪ್ರಯೋಗ ಕಡಿಮೆ. ಗಂಧಿಗೆ ಅಂಗಡಿಯಲ್ಲಿ ಸಿಕ್ಕುವ ಇದರ ಒಣಗಿ ಸುಕ್ಕಾದ ಬೇರು ಒಂದು ಆಯುರ್ವೇದ ಔಷಧಿ. ಆದರೆ ಗುಡ್ಡಗಾಡು ಜನ ಕೊಲೆಗಾಗಿ ಇದರ ತೆಯ್ದ ಗಂಧವನ್ನು ಬಾಣದ ತುದಿಗೆ ಲೇಪಿಸಿ ಬಳಸುವುದುಂಟು. ಕಂತ್ರಿ ಮಾದಕ ಪಾನೀಯಗಳ ಅಮಲನ್ನು ಹೆಚ್ಚಿಸಲು ವತ್ಸನಾಭಿಸಾರವನ್ನು ಸೇರಿಸುವುದೂ ಉಂಟು. ಆದರೂ ವಿಷವೇರಿಕೆಯ ಲಕ್ಷಣಗಳು ಇದನ್ನು ಕೊಲೆಗಾಗಿ ಬಳಸಿದ ಸಂದರ್ಭಗಳಲ್ಲಿ ಮಾತ್ರ ಸಾಮಾನ್ಯವಾಗಿ ಕಂಡು ಬರುತ್ತವೆ. ಇದರ ಬೇರನ್ನು ಜಜ್ಜಿ ಟೀಯೊಂದಿಗೆ ಸೇರಿಸಿ ಕೊಲೆಪಾನೀಯವಾಗಿ ಕೊಡುವುದಿದೆ. ವಿಷಪ್ರಯೋಗದ ಮೊದಲ ಲಕ್ಷಣ ಜ್ಞಾನವಾಹಿ ಕ್ರಿಯಾವಾಹಿನರಗಳ ಚುರುಕು ಹೆಚ್ಚುವುದು. ಅನಂತರ ಅವುಗಳ ಕ್ರಿಯಾನಾಶ ಕಂಡುಬರುತ್ತದೆ. ತುಟಿನಾಲಿಗೆ ಗಂಟಲುಗಳ ಕೆರೆತ, ಅತಿ ಜೊಲ್ಲು, ಕೈಕಾಲುಗಳ ಜೋಮು, ಬಲಹೀನತೆ, ಮಂದ ಹಾಗೂ ಅಕ್ರಮ ನಾಡಿ ಮತ್ತು ಉಸಿರಾಟ ಇವುಗಳು ಕಂಡು ಬರುತ್ತವೆ. ಆದರೂ ಬುದ್ಧಿ ವ್ಯತ್ಯಾಸಗೊಳ್ಳುವುದಿಲ್ಲ. ಶೀಘ್ರದಲ್ಲೇ ತೀವ್ರ ಕುಸಿತ ಉಂಟಾಗಿ ಸಾವು ಸಂಭವಿಸುತ್ತದೆ. ವಿಷಪ್ರಯೋಗ ಪತ್ತೆ ಆದ ಕೂಡಲೆ ವಮನ ಮಾಡಿಸಬೇಕು. ಮಂದವಾದ ಕಾಫಿಯಿಂದ ಉತ್ತೇಜಕ ಪಾನೀಯಗಳನ್ನು ಕೊಡಬೇಕು. ಸುಸ್ತುಧಕ್ಕೆ ಕಂಡುಬಂದಲ್ಲಿ ಅದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯವಿದ್ದಲ್ಲಿ ಕೃತಕ ಶ್ವಾಸವನ್ನು ಆರಂಭಿಸಬೇಕು.

ಎಸ್. ರಾಮರಾವ್

ಬಿ.ಎಂ.ಶ್ರೀ: ಕೆಲವು ಅವಿಸ್ಮರಣೀಯವಾದ ನೆನಹುಗಳು

ಆಗ ಆಂಗ್ಲರ ಆಳುವಿಕೆಯ ಕಾಲ; ಆಂಗ್ಲಭಾಷೆಗೇ ಮನ್ನಣೆಯ ಮಣೆ. ಕಾಲೇಜು ಶಿಕ್ಷಣವಂತೂ ಆಂಗ್ಲಭಾಷಾಮಯ. ಅದರಲ್ಲೂ ಕ್ರಿಶ್ಚಿಯನ್ ಆಡಳಿತದ ಶಾಲೆಕಾಲೇಜುಗಳ ಸ್ಥಿತಿ ಹೇಳುವುದೇ ಬೇಡ; ಅಂದಿಗೆ ಇಂಗ್ಲಿಷ್ ಭಾಷೆಗೆ ಅವರ ಆಡಳಿತದ ವಿದ್ಯಾಸಂಸ್ಥೆಗಳಲ್ಲಿ ಇರುವ ಪ್ರಾಧಾನ್ಯವೇ ಅಲ್ಲಿಗೆ ಹೆಚ್ಚಿನ ಆಕರ್ಷಣೆ ಕೂಡ ಆಗಿತ್ತು.

ಮಂಗಳೂರಲ್ಲಿ, ಈಗಲೂ ಪ್ರಸಿದ್ಧವಾಗಿರುವ ಸೈಂಟ್ ಎಲೋಶಿಯಸ್ ಕಾಲೇಜು ಅಂತಹ ಆಕರ್ಷಕ ವಿದ್ಯಾಸಂಸ್ಥೆಗಳಲ್ಲಿ ಒಂದು. ಅಲ್ಲಿ ಪಾಶ್ಚಾತ್ಯ ದೇಶದಿಂದ ಬಂದ, ಕ್ರಿಶ್ಚಿಯನ್ ಮಿಶನರಿಗಳಾದ ಪಾದ್ರಿಗಳು ಆಂಗ್ಲಭಾಷೆಯ ಬೋಧಕರಾಗಿಯೂ ಇದ್ದರು. ಇತರ ಭಾಷೆಗಳನ್ನೋ, ವಿಷಯಗಳನ್ನೋ ಕಲಿಸಲು ಭಾರತೀಯರಾದ ವಿದ್ವಾಂಸರು ಇದ್ದರೂ ಇಂಗ್ಲಿಷ್ ಕಲಿಸಲು ವಿದೇಶೀಯ ವಿದ್ವಾಂಸರಷ್ಟು ಪರಿಣತರು ನಮ್ಮವರು ಅಲ್ಲ ಎನ್ನುವ ಭಾವನೆ ಬಲವಾಗಿತ್ತು; ಅದಕ್ಕೆ ಅನುಗುಣವಾಗಿ ಅಲ್ಲಿ ಪಾಶ್ಚಾತ್ಯ ವಿದ್ವಾಂಸರೇ ಇಂಗ್ಲಿಷ್ ಭಾಷಾ ಬೋಧಕರಿದ್ದರು.

ಬಿ. ಎಂ. ಶ್ರೀಕಂಠಯ್ಯನವರು: ಹೊಸಗನ್ನಡದ ಆಚಾರ್ಯಪುರುಷರಾಗಿ ಅಂದು ವಿಜೃಂಭಿಸಿದ್ದ ಕಾಲ; ಕನ್ನಡದ ಕೆಲಸಕ್ಕಾಗಿಯೇ ಮಂಗಳೂರಿಗೂ ಬಂದಿದ್ದರು; ಬಹುಶಃ ನಾಡಹಬ್ಬದ ಕಾರ್ಯಕ್ರಮ ನಿಮಿತ್ತವಿರಬೇಕು; ಕನ್ನಡ ಸಾಹಿತ್ಯದ ಕುರಿತು ಅವರ ಭಾಷಣ ಕೂಡ ಜರುಗಿತು; ಮಂಗಳೂರಿನ ಕಾಲೇಜು ಅಧ್ಯಾಪಕರಿಗೆ ಹಾಗೂ ಇತರ ವಿದ್ವಾಂಸರಿಗೆ ಬಿ. ಎಂ. ಶ್ರೀಯವರು ಆಂಗ್ಲಭಾಷಾ ಪರಿಣತರೆಂದೂ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರೊಫೆಸರು ಕೂಡ ಆಗಿರುವರೆಂದೂ ತಿಳಿದಿತ್ತು. ಹಾಗಾಗಿ, ಅವರದೊಂದು ಆಂಗ್ಲ ಭಾಷೆಯ ಭಾಷಣವನ್ನು ಮಂಗಳೂರು ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಏರ್ಪಡಿಸಲು ನಿಶ್ಚಯವಾಯಿತು. ಅಲ್ಲಿನ ವಿದೇಶೀ ಪ್ರಿನ್ಸಿಪಾಲರೂ ಪಾಶ್ಚಾತ್ಯ ವಿದ್ವಾಂಸರೂ ಭಾರತೀಯನೊಬ್ಬನು ಏನು ಮಾತನಾಡುತ್ತಾನೆ ಎಂಬ ಕುತೂಹಲದಿಂದಲೇ ಅಂತಹ ಒಂದು ಕಾರ್ಯಕ್ರಮಕ್ಕೆ ಒಪ್ಪಿಗೆ ಇತ್ತಿರಬೇಕು.

ಬಿ.ಎಂ.ಶ್ರೀ. ಶೇಕ್ಸ್‌ಪೀಯರ್ ಕವಿಯ ಕುರಿತು ಅಲ್ಲಿ ಭಾಷಣ ಮಾಡಿದರು. ನಿರರ್ಗಳವಾಗಿ, ಗಂಭೀರವಾಗಿ, ಸ್ವಚ್ಛಸುಂದರ ಆಂಗ್ಲ ಭಾಷೆಯಲ್ಲಿ ಗಂಟೆಗಳ

ಕಾಲ ಮಾತನಾಡಿದರು ; ಶೇಕ್ಸ್‌ಪೀಯರರ ಟ್ರಾಜಿಡಿ, ಕಾಮೆಡಿ ನಾಟಕಗಳ ಮೇಲೆ, ಆತನ ಇತರ ಕವಿತೆಗಳ ಮೇಲೆ ವಾಕ್ಯಗಳನ್ನು, ಪದ್ಯಗಳನ್ನು ಅಲ್ಲಲ್ಲಿ ಉದ್ಧರಿಸುತ್ತಾ ವಿವರಿಸುತ್ತಾ ಶ್ರೋತೃಗಳನ್ನು ತಲೆದೂಗಿಸಿದರು. ಭಾಷಣ ಕಾರ್ಯಕ್ರಮ ಕೊನೆಗೊಂಡ ಮೇಲೆ, ಅಲ್ಲಿ ಶೇಕ್ಸ್‌ಪೀಯರ್ ಕೃತಿಗಳಲ್ಲಿ 'ಅಥಾರಿಟಿ'ಯೆನಿಸಿದ್ದ ಪ್ರಾಚಾರ್ಯರಾದ ಇಟಾಲಿಯನ್ ದೇಶೀಯರಾದ ಪಾದ್ರಿಗಳು ಎದ್ದು ಬಂದು, ಶ್ರೀಯವರನ್ನು ಮೆಚ್ಚಿ ಮಾತನಾಡಿದರು ; ಅವರ ಆಂಗ್ಲಭಾಷಾ ವಿದ್ವತ್ತನ್ನು, ಆ ಭಾಷೆಯಲ್ಲಿ ಶ್ರೀಯವರು ಸಿದ್ಧಿಸಿಕೊಂಡ ವಾಗ್ವೈಖರಿಯನ್ನು ಕೊಂಡಾಡಿದರು. ಅದುವರೆಗೆ, 'ಶ್ರೀ'ಯವರು ಕೇವಲ ಕನ್ನಡದ ಆಚಾರ್ಯಪುರುಷರೆಂದು ಬಗೆದಿದ್ದ ಹಲವು ಮಂದಿ ದಕ್ಷಿಣ ಕನ್ನಡದ ಈ ಕಡೆಯ ಕನ್ನಡಿಗರಿಗೆ, ಆ ಸಂದರ್ಭ ಅವರ ವಿಶಾಲ ವಿದ್ವತ್ತಿನ ಪೂರ್ಣ ಪರಿಚಯ ನೀಡಲು ಸಹಾಯಕವೂ ಆಯಿತು.

* * *

ಅದೇ ಕಾಲದ, ಒಂದೆರಡು ವರ್ಷ ಹಿಂದು ಮುಂದಾಗಿ, ಪುತ್ತೂರಿನಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗುತ್ತಿದ್ದ ದಸರಾ ಮಹೋತ್ಸವದ ಒಂದು ಕಾರ್ಯಕ್ರಮದಲ್ಲಿ ಬಿ.ಎಂ.ಶ್ರೀಯವರು 'ನಚಿಕೇತ ಮತ್ತು ಸೋಕ್ರೆಟೀಸ್' ಎಂಬೀ ವಿಷಯದ ಮೇಲೆ ಒಂದು ವಿದ್ವತ್ಪೂರ್ಣ ಭಾಷಣವಿತ್ತರು. ಕಠೋಪ ನಿಷತ್ತಿನಿಂದ ಉದ್ಧರಿಸಿ ನಚಿಕೇತನ ಕುರಿತು ವ್ಯಾಖ್ಯಾನಿಸಿದರು. ಸೋಕ್ರೆ ಟೀಸನಿಗೂ ನಚಿಕೇತನಿಗೂ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ವಿವರಿಸಿದರು ; ಸಂಸ್ಕೃತ ಭಾಷೆಯಲ್ಲಿ ಪರಿಣತರಾಗಿದ್ದ, ಈ ಕಡೆಯ ಹಲವು ಮಂದಿ ವಿದ್ವಾಂಸ ರಿಗೆ, ಬಿ.ಎಂ.ಶ್ರೀ. ಕೇವಲ ಇಂಗ್ಲಿಷ್ ಬಲ್ಲ ಕನ್ನಡ ವಿದ್ವಾಂಸರು ಎಂದಿದ್ದ ಭಾವನೆ ಅವರಿಂದ ದೂರವಾಗಿ ಅವರಲ್ಲಿ ಗೌರವ ಹೆಚ್ಚುವಂತಾಯಿತು.

'ನಹಿ ಭಾರ್ಯಾ ಸಮಂ ಮಿತ್ರಂ'—ಎಂಬ ವ್ಯಾಸಋಷಿಯ ಮಹಾಭಾರತದ ಸೂಕ್ತಿಯನ್ನು ಎತ್ತಿಕೊಂಡು ಇನ್ನೊಮ್ಮೆ ಅವರು ಭಾಷಣ ಮಾಡಿದ್ದನ್ನು ನಾನು ಕೇಳಿದ್ದೇನೆ. ವ್ಯಾಸಋಷಿ ಆ ಸೂಕ್ತಿಯಲ್ಲಿ ಎಂತಹ ಉದಾತ್ತ ದಾಂಪತ್ಯ ಜೀವನವನ್ನು ಚಿತ್ರಿಸಿದ್ದಾನೆ—ಭಾರತದ ಅಧ್ಯಾತ್ಮಕ್ಕೂ ಲೌಕಿಕಕ್ಕೂ ಎಂತಹ ಸುಂದರವಾದ ಹೊಂದಾಣಿಕೆ ಇದೆ ಎಂಬಿತ್ಯಾದಿಗಳನ್ನು ವಿವರ ವಿವರವಾಗಿ ಆದೊಂದು ಸೂಕ್ತಿಯನ್ನು ವಿವರಿಸುವ ಮೂಲಕ 'ಶ್ರೀ'ಯವರು ಶ್ರೋತೃಗಳ ಮನದಟ್ಟು ಮಾಡಲು ಸಮರ್ಥರಾದರು.

ಇಂದು ಪಾಶ್ಚಾತ್ಯಪೌರ್ವಾತ್ಯ ಭಾಷಾ ಸಂಸ್ಕೃತಿಗಳ ಆಳವಾದ ಅಭ್ಯಾಸ,

ಅಸದೃಶವಾದ ವ್ಯಾಖ್ಯಾನ, ಶ್ರೋತೃಗಳನ್ನು ಮೈಮರೆಸುವ ಮಾತಿನ ಮೋಡಿ —ಇವುಗಳು ಕನ್ನಡದ ಆಚಾರ್ಯಪುರುಷರಾದ ಬಿ.ಎಂ.ಶ್ರೀಯವರ ಉನ್ನತ ವ್ಯಕ್ತಿತ್ವವಾಗಿತ್ತು.

*   *   *

ಇಂತಹ ಔನ್ನತ್ಯವನ್ನು ಅವರು ಪಡೆದಿದ್ದರೂ ಇತರರನ್ನು ಮೆಚ್ಚುವ ಸಹೃದಯತೆಯೂ ಅವರಲ್ಲಿತ್ತು. ಶ್ರೀ ಶಿವರಾಮಕಾರಂತರು ಆಗ ಅವರ ನಾಟ್ಯಪ್ರಯೋಗಕ್ಕೆ ತೊಡಗಿದ್ದ ಕಾಲ. ಅವರೇ ರಂಗಭೂಮಿಯಲ್ಲಿ ನೃತ್ಯ ಮಾಡುತ್ತಿದ್ದರು; ಆ ನೃತ್ಯದ ಕತೆಯೋ ಹಾಡೋ ತಾಳವೋ ಎಲ್ಲವೂ ಅವರದೇ —ಎನ್ನುವಂತೆ ನೂತನವಾಗಿತ್ತು; ನೇಪಥ್ಯದ ಹಿಂದಿನಿಂದ ಅವರ ಪತ್ನಿ ಆ ನೃತ್ಯಕ್ಕೆ ಅನುಗುಣವಾದ ಹಾಡನ್ನು ಹಾಡುತ್ತಿದ್ದರು. ಕಾರಂತರು ಅದ್ಭುತವಾಗಿ ರೋಮಾಂಚಕವಾಗಿ ನರ್ತನ ಮಾಡಿದರು: ಆ ನರ್ತನದ ಕಲ್ಪನೆ ಎಲ್ಲಾ ನೂತನವಾಗಿತ್ತು; ಕಾರಂತರ ಸ್ವಂತಪ್ರತಿಬಿಂಬವು ಹೊಚ್ಚ ಹೊಸದಾಗಿತ್ತು; ನೃತ್ಯ ಮುಗಿದ ಮೇಲೆ ಸಭೆಯಲ್ಲಿ ಪ್ರೇಕ್ಷಕರಾಗಿ ಕುಳಿತಿದ್ದ 'ಶ್ರೀ'ಯವರು ಎದ್ದು ವೇದಿಕೆಗೆ ಬಂದರು. ಕಾರಂತರನ್ನು ಅಭಿನಂದಿಸಿದರು; ಈ ನೃತ್ಯ ಪ್ರದರ್ಶನ ಇಂಗ್ಲೆಂಡಿನಲ್ಲಿ, ವಿದೇಶಗಳಲ್ಲಿ ನಡೆದಿದ್ದರೆ, ಕಾರಂತರಿಗೆ ಅಂತಾರಾಷ್ಟ್ರೀಯ ಕೀರ್ತಿ ತರುತ್ತಿತ್ತೆಂದು ಕೊಂಡಾಡಿದರು.

ಇಂತಹ ಉದಾರತೆ—ಘನತೆ—ಬಿ.ಎಂ.ಶ್ರೀಕಂಠಯ್ಯನವರದು ಆಗಿತ್ತು.

ಕಯ್ಯಾರ ಕಿಞ್ಞಣ್ಣ ರೈ



ಯಾರು ಪೂರ್ವಿಕರ ಕಡೆ ನೋಡುವುದಿಲ್ಲವೋ ಅವರು ಭವಿಷ್ಯ ಜನಾಂಗದ ಬಗೆಗೂ ಯೋಚಿಸುವುದಿಲ್ಲ. —ಎಡ್ಮಂಡ್ ಬರ್ಕ್

ನಮ್ಮ ಭೂಮಿ-೩

ಜಲಮಯ ಜಗದ ಸಾಗರ, ಸರೋವರಗಳು : ಭೂಮಿಯ ಮೇಲ್ಮೈಯ ಶೇಕಡಾ ೭೧ರಷ್ಟು ವಿಸ್ತಾರವನ್ನು ನೀರು ಮುಚ್ಚಿದೆ. ಬೇರೆ ಯಾವ ಗ್ರಹದಲ್ಲೂ ಹೀಗಿಲ್ಲ. ಆದಕ್ಕೇ ಭೂಮಿಯನ್ನು 'ಜಲಮಯ ಜಗತ್ತು' ಎನ್ನುವುದು. ನೀರಿರುವ ಭಾಗವನ್ನೆಲ್ಲ ಒಟ್ಟಾಗಿ ಜಲಮಂಡಲ ಎನ್ನುವರು. ಪುರಾಣಗಳಲ್ಲಿ ಸಪ್ತಸಾಗರಗಳನ್ನು ಕಲ್ಪಿಸಿದ್ದರು. ಇಂದಂತೂ ಭೂಮಿಯನ್ನು ತಬ್ಬಿದ ವಿಶಾಲ ಜಲರಾಶಿಯನ್ನು ಪೆಸಿಫಿಕ್ ಸಾಗರ, ಅಟ್ಲಾಂಟಿಕ್ ಸಾಗರ, ಹಿಂದೂ ಮಹಾಸಾಗರ, ಆರ್ಕ್ಟಿಕ್ ಸಾಗರ (ಉತ್ತರ ಧ್ರುವ ಸಾಗರ, ದಕ್ಷಿಣ ಧ್ರುವ ಸಾಗರ ಮೊದಲಾಗಿ ಹಲವು ಭಾಗಗಳನ್ನಾಗಿ ಗುರುತಿಸಿದ್ದಾರೆ. ಸಮುದ್ರ ರೂಪುಗೊಳ್ಳುವ ಕಾಲದಲ್ಲಿ ಭೂಗರ್ಭದಿಂದ ಲವಣಗಳು ಹೊರ ಸೂಸಿಯೋ, ಭೂಖಂಡಗಳ ಶಿಲೆಗಳಲ್ಲಿರುವ ಲವಣಗಳು ನದಿನೀರಲ್ಲಿ ವಿಲೀನಗೊಂಡು ಭೂ ಇತಿಹಾಸದುದ್ದಕ್ಕೂ ಸಾಗರವನ್ನು ಸೇರಿಯೋ ಕಡಲಿನ ನೀರಲ್ಲಿ ಶೇಕಡಾ ೩.೫ರಷ್ಟು ಲವಣಗಳಿವೆ. ಆದ್ದರಿಂದಲೇ ಸಮುದ್ರದ ನೀರು ಉಪ್ಪುಪ್ಪು.

ಸಾಗರದ ವಿವಿಧ ಭಾಗಗಳು ಒಂದೇ ರೀತಿ ಬಿಸಿಯಾಗುವುದಿಲ್ಲ. ಇದರಿಂದ ಸಾಗರ ಜಲದ ಸಾಂದ್ರತೆಯಲ್ಲೂ ಏರುಪೇರಾಗುತ್ತದೆ. ನೂರಾರು ಕಿ.ಮೀ. ದೂರಕ್ಕೆ ಹರಿಯುವ ಉಷ್ಣ ಪ್ರವಾಹಗಳೂ ಶೀತ ಪ್ರವಾಹಗಳೂ ಉಂಟಾಗುತ್ತವೆ. ಭೂಮಿಯ ವಾಯುಗುಣದ ಮೇಲೆ ಈ ಪ್ರವಾಹಗಳ ಪ್ರಭಾವ ಇದ್ದೇ ಇದೆ.

ಸಮುದ್ರ ತೀರಕ್ಕೆ ಹೋಗಿ ನೊರೆ ತೆರೆಗಳನ್ನು ನೋಡಿದ್ದಿಯಾ? ದೂರದಿಂದ ಬರುವ ಅಲೆ ದಂಡೆಗೆ ಬಂದಂತೆ ಒಮ್ಮೆಲೆ ಬದಲಾಗುತ್ತದೆ. ಕಡಲ ದಂಡೆಯ ಬಳಿ ಸಮುದ್ರ ಆಳವಾಗಿಲ್ಲ. ಗಾಳಿ ದೂಡಿ ಉಂಟಾದ ಅಲೆಗಳ ಕೆಳಭಾಗದ ನೀರು ತಳದ ಘರ್ಷಣೆಯಿಂದ ನಿಧಾನವಾಗುತ್ತದೆ: ಮೇಲ್ಭಾಗದ ನೀರು ಮುನ್ನುಗ್ಗುತ್ತದೆ. ಅಲೆ ಶೃಂಗ ಏರಿ ಮುಂದೆ ಬಾಗಿ ಮುಗ್ಗರಿಸಿ ಬೀಳುತ್ತದೆ. ಹೀಗೆ ಬಡಿಯುವ ಕಡಲಿನ ಅಲೆಗಳು ಸದಾ ದಂಡೆಯ ಶಿಲೆಗಳನ್ನು ಸವೆಸುತ್ತವೆ.

ಸಮುದ್ರ ತಳವೆಂದರೆ ಬರಿಯ ತಗ್ಗು ನೆಲವಲ್ಲ. ಅಲ್ಲಿ ಭೂಖಂಡದ ಮೇಲ್ಮೈಯಲ್ಲಿರುವುದಕ್ಕಿಂತ ಭಾರವಾದ ಶಿಲಾಪದರವಿದೆ. ಭೂಕವಚದ ಅತಿ ತೆಳುವಾದ ಭಾಗ ಇರುವುದು ಸಾಗರ ತಳದಲ್ಲೇ.

ಕಡಲಿನೆಡೆ ಚಾಚಿದ, ನೀರಿನಡಿಯಲ್ಲಿರುವ ನೆಲಭಾಗ ಭೂಖಂಡದ ಕರೆ.

ಮುಂದೆ ಭೂಖಂಡದ ಇಳಿಜಾರುಗಳು (Continental Slopes) ಸಾಗರ ದಾಳಕ್ಕೆ ಇಳಿಯುತ್ತವೆ. ಇಲ್ಲಿಂದಾಚೆ ವಿಶಾಲವಾದ ಸಮುದ್ರಪಾತ್ರಗಳಿವೆ. ಜೀವಜಂತುಗಳಿಂದಲೂ ಶಿಲಾಪದಾರ್ಥದಿಂದಲೂ ಕೂಡಿದ ಮಡ್ಡಿ ಇಲ್ಲಿ ಸಂಚಯನವಾಗುತ್ತದೆ.

ಸಮುದ್ರ ಪಾತ್ರಗಳ ತಳ ಒಂದೇ ಸಮನಾದ ಬಯಲಲ್ಲ. ನೆಲ ಭಾಗದಲ್ಲಿರುವಂತೆ ಕಂದಕ, ಕಮರಿ, ಪರ್ವತಶ್ರೇಣಿಗಳು ಸಾಗರ ತಳದಲ್ಲೂ ಇವೆ. ಪೆಸಿಫಿಕ್ ಸಾಗರದ ಮರಿಯಾನ ಕಂದಕ ಅತಿ ಆಳವಾದದ್ದು. (ಸಮುದ್ರ ಮಟ್ಟದಿಂದ ೧೧ ಕಿ.ಮೀ. ಆಳದಲ್ಲಿದೆ) ಜ್ವಾಲಾಮುಖಿಗಳಿಂದ ಆದ ದ್ವೀಪಗಳೂ ಅಲ್ಲಲ್ಲಿವೆ. ಇಂದ್ರನ ವಜ್ರಾಯುಧದ ಪೆಟ್ಟಿಗೆ, ಹಾರಾಡುತ್ತಿದ್ದ ಪರ್ವತಗಳು ರೆಕ್ಕೆ ಮುರಿದು ಸಮುದ್ರಕ್ಕೆ ಬಿದ್ದುವೆಂಬುದೊಂದು ಕಥೆ. ಅದು ನಿಜವೋ ಎಂದು ಭ್ರಮೆ ಹುಟ್ಟಿಸುವ ಉನ್ನತ ಪರ್ವತ ಶಿಖರಗಳೂ ದೀರ್ಘ ಪರ್ವತಶ್ರೇಣಿಗಳೂ ಸಮುದ್ರದಲ್ಲಿವೆ. ಹವಾಯಿಬಳಿಯ ಅಗ್ನಿಪರ್ವತ 'ಮೌನಾಕೀ' (Maunakea) ಸಮುದ್ರ ತಳದಿಂದ ೯.೬೫ ಕಿ. ಮೀ. ಎತ್ತರಕ್ಕೆ ಏರಿದೆ; ೧೬ ಸಾವಿರ ಕಿ. ಮೀ. ಉದ್ದವೂ ೮೦೦ ಕಿ. ಮೀ. ಅಗಲವೂ ಇರುವ ಅಟ್ಲಾಂಟಿಕ್ ಮಧ್ಯದ ಪರ್ವತಶ್ರೇಣಿಯು ಭೂಮಿಯಲ್ಲೇ ದೊಡ್ಡದು.

ನಿರಂತರವಾದ ಉಬ್ಬರ ಇಳಿತ: ಸಮುದ್ರ ದಂಡೆಯನ್ನು ಅಲೆಗಳು ಅಪ್ಪಳಿಸಿ ಹಿಂದಿರುಗುವ ಎತ್ತರವನ್ನು ನೋಡುತ್ತಿರು. ಇಲ್ಲವೇ ಹಿನ್ನೀರಿನ ಬದಲಾಗುವ ಮಟ್ಟವನ್ನು ವೀಕ್ಷಿಸು. ದಿನಕ್ಕೆ ಎರಡುಬಾರಿ ನೀರಿನ ಮಟ್ಟ ಏರಿದಂತೆಯೂ ಎರಡು ಬಾರಿ ಇಳಿದಂತೆಯೂ ಕಾಣುತ್ತದೆ ಸಮುದ್ರದ ನೀರು ಹೀಗೆ ಪರ್ಯಾಯವಾಗಿ ಏರಿ ಇಳಿಯುವುದೇ ಉಬ್ಬರ-ಇಳಿತ. ಚಂದ್ರ, ಸೂರ್ಯರ ಗುರುತ್ವಾಕರ್ಷಣದಿಂದ ಉಂಟಾಗುವ ಸೆಳೆತವೇ ಈ ನಿರಂತರ ಕ್ರಿಯೆಗೆ ಕಾರಣ. ಅವರಲ್ಲೂ ಭೂಮಿಗೆ ಸಮೀಪದ ಚಂದ್ರನ ಸೆಳೆತದ ಪ್ರಭಾವವೇ ಹೆಚ್ಚು. ಹುಣ್ಣಿಮೆ, ಅಮಾವಾಸ್ಯೆ ದಿನಗಳಲ್ಲಿ ಸೂರ್ಯ, ಭೂಮಿ ಮತ್ತು ಚಂದ್ರ ನೇರ ಗೆರೆಯಲ್ಲಿ ಇರುವುದರಿಂದ ಅತ್ಯಧಿಕ ಉಬ್ಬರ ಉಂಟಾಗುವುದು. ಉಬ್ಬರ-ಇಳಿತ ಪ್ರಮಾಣದ ಮೇಲೆ ಸಮುದ್ರ ತಳದ ಆಳ, ಆಕಾರಗಳ ಪರಿಣಾಮವೂ ಇದೆ. ಭೂಮಿಯ ನೆಲಭಾಗವೂ ಸೂರ್ಯ, ಚಂದ್ರರ ಗುರುತ್ವಾಕರ್ಷಣೆಗೆ ಒಳಗಾಗಿ ಸೆಳೆಯಲ್ಪಡುತ್ತದೆ. ಆದರೆ ಸಾಗರದ ನೀರಿನಲ್ಲಿ ಕಂಡ ಪ್ರಮಾಣದ ಸೆಳೆತದ ಪರಿಣಾಮವನ್ನು ನೆಲದಲ್ಲಿ ಕಾಣಲಾರೆವು.

ಅಲೆಗಳು :–ಸಾಗರದ ದಂಡೆಯಿಂದ ದಂಡೆಗೆ : ಸಮುದ್ರ ತಳ ಕಂಪಿಸಿದಾಗ ಬಲು ದೀರ್ಘ ಅಲೆಗಳು ಉಂಟಾಗುತ್ತವೆ. ಗಂಟೆಗೆ ಸುಮಾರು ೬೫೦ ಕಿ. ಮಿ. ವೇಗದಲ್ಲಿ ಸಾಗಬಲ್ಲ ಈ ಅಲೆಗಳನ್ನು ತ್ಸುನಾಮಿಗಳೆನ್ನುವರು. ಸಾಗರ ಮಧ್ಯದಲ್ಲಿ ಸುಮಾರು ಅರ್ಧ ಮೀಟರ್ ಎತ್ತರದ ಶೃಂಗಗಳು, ತೀರಕ್ಕೆ ಬಂದಂತೆ ೧೫ ಮೀಟರ್ ಎತ್ತರಕ್ಕೂ ಏರಬಲ್ಲವು. ಸಾಗರದ ಒಂದು ಬದಿಯಿಂದ ಮತ್ತೊಂದು ಬದಿಗೆ ಸಂಚರಿಸಿ ಇವು ಹಾನಿಯನ್ನು ತರಬಲ್ಲವು.

ಸರೋವರಗಳು : ಸಾಗರದಿಂದ ಪ್ರತ್ಯೇಕವಾಗಿ ಉಳಿದ ಜಲಾಶಯಗಳು ಸರೋವರಗಳು. ಭೂಮಿಯ ಚಿಪ್ಪಿನ ಸ್ಥಾನ ಪಲ್ಲಟದಲ್ಲಿನ ವ್ಯತ್ಯಾಸದಿಂದ ಉಂಟಾದ ತಗ್ಗು ಜಾಗಗಳಲ್ಲಿ ಹಲವು ಸರೋವರಗಳು ರೂಪುಗೊಂಡವು. ಪೂರ್ವ ಆಫ್ರಿಕದ ಸರೋವರಗಳು, ಸೈಬೀರಿಯದ ಬೈಕಲ್ (Baikal) ಸರೋವರ, ಮೃತ ಸಮುದ್ರಗಳು ಇಂಥವು. ಹಿಮನದಿಗಳು (ಹರಿಯುವ ಮಂಜುಗಡ್ಡೆಯ ಹಾಸು) ನೂಕಿ ತಂದ ಕಲ್ಲು, ಮಣ್ಣೇ ಕಟ್ಟೆಯಾಗಿ ನೀರು ಸಂಗ್ರಹಗೊಂಡು ಉತ್ತರ ಅಮೆರಿಕದ ಸರೋವರಗಳು ಉಂಟಾದವು. ಜ್ವಾಲಾಮುಖಿಯಿಂದ ಹರಿದ ಲಾವರಸಕಣಿವೆಯ ಅಡ್ಡಕ್ಕೆ ನಿಂತು ಜಲಾಶಯಗಳನ್ನು ನಿರ್ಮಿಸಿದ್ದುಂಟು. ಫ್ರಾನ್ಸಿನ ಕೆಲವು ಸರೋವರಗಳು ಆಫ್ರಿಕದ ರುಅಂಡ ಉರುಂಡಿಯಲ್ಲಿರುವ ಕಿವು (Kivu) ಸರೋವರ ಹೀಗೆ ಉಂಟಾದವು. ನದೀತಳವು ಮಿದುವಿರುವಲ್ಲಿ ಸವೆದಾಗಲೀ ನದಿಯು ಹಾದಿ ಬದಲುವಾಗ ಆಗಲೀ ಸರೋವರಗಳಾಗುವುದುಂಟು. ಸರೋವರಗಳಲ್ಲಿ ಕೆಲವು ಉಪ್ಪು ನೀರಿನವು—ಮೃತ ಸಮುದ್ರ, ಕ್ಯಾಸ್ಪಿಯನ್ ಸಮುದ್ರ, ರುಡಾಲ್ಫ್ ಸರೋವರ ಇತ್ಯಾದಿ ಉಳಿದವು ಸಿಹಿನೀರಿನವು. ನೀರು ಹೊರಸಾಗದಿರುವ ಸರೋವರಗಳಲ್ಲಿ ಬಾಷ್ಪೀಕರಣದಿಂದ ಲವಣಗಳು ಉಳಿದು ನೀರು ಹೆಚ್ಚು ಉಪ್ಪಾಗುತ್ತದೆ. ಸಿಹಿನೀರಿನ ಸರೋವರಗಳಿಂದ ನೀರು ಹೊರಹರಿಯುವ ಕಾರಣ ಲವಣಾಂಶ ಅಷ್ಟು ಹೆಚ್ಚಿರುವುದಿಲ್ಲ. ಸರೋವರಗಳಲ್ಲೂ ಸವೆತದಿಂದ ಬಂದ ಮಡ್ಡಿ ಸಂಗ್ರಹವಾಗುವುದು. ಸರೋವರಗಳೂ ಶಾಶ್ವತವಾಗಿ ಒಂದೇ ರೀತಿಯಲ್ಲಿ ಇರುವುದಿಲ್ಲ.

ಭೂಮಿಯ ಹಚ್ಚಡ : ಸೇಬಿನ ಗಾತ್ರಕ್ಕೆ ಹೋಲಿಸಿದರೆ ಅದರ ಸಿಪ್ಪೆ ಎಷ್ಟು ದಪ್ಪವಾದೀತು? ಭೂಮಿಯ ಗಾತ್ರಕ್ಕೆ ಹೋಲಿಸಿದರೆ ವಾತಾವರಣವನ್ನು ಅಂಥ ಸಿಪ್ಪೆಯ ದಪ್ಪಕ್ಕೆ ಹೋಲಿಸಬಹುದು. ಪರಿಣಾಮಕಾರಿಯಾದ ವಾತಾವರಣವಿರುವುದು ಭೂಮಿಯ ಮೇಲ್ಮೈಯಿಂದ ಸುಮಾರು ೪೦೦-೫೦೦ ಕಿ. ಮಿ. ಎತ್ತರದವರೆಗೆ. ಮಂಜು, ಮೋಡ, ಮಾರುತಗಳು ಕಾಣಿಸಿಕೊಳ್ಳು

ವುದು ಸುಮಾರು ೧೧ ಕಿ. ಮೀ. ಎತ್ತರದೊಳಗೆ. ಆದ್ದರಿಂದ ಈ ಭಾಗವನ್ನು 'ಹವಾಮಂಡಲ' ಎಂದು ಕರೆಯುವರು. ೧೧ ಕಿ. ಮೀ. ನಿಂದ ಮೇಲಿನ ಎತ್ತರದ ಭಾಗ ಸ್ಥಿರಮಂಡಲ. ಇದರ ಕೆಳಮಟ್ಟದಲ್ಲಿ ಉಷ್ಣತೆ ಸ್ಥಿರ. ಸುಮಾರು ೬೪ ಕಿ. ಮೀ. ನಿಂದ ೪೮೦ ಕಿ. ಮೀ. ಎತ್ತರದವರೆಗಿನ ಭಾಗ 'ಅಯಾನುಮಂಡಲ.' ಇದರಲ್ಲಿ ವಿದ್ಯುದಂಶ ಪೂರಿತ ಅಯಾನುಗಳಿವೆ. 'ಅಯಾನುಮಂಡಲ'ವು ರೇಡಿಯೋ ಅಲೆಗಳನ್ನು ಪ್ರತಿಫಲಿಸಬಲ್ಲುದು. ಇದರಿಂದ ಭೂಮಿಯ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ರೇಡಿಯೋ ಸಂಪರ್ಕ ಸಾಧ್ಯವಾಗಿದೆ. ವಾತಾವರಣವಿಲ್ಲದ ಚಂದ್ರನಂಥ ಆಕಾಶ ಕಾಯಗಳಲ್ಲಿ ಇದು ಸಾಧ್ಯವಿಲ್ಲ. ಭೂಮಿಯ ವಾತಾವರಣ ನಮಗೆ ವೈವಿಧ್ಯಮಯ ಸದ್ದುಗಳಿರುವ ಜಗತ್ತನ್ನು ನೀಡಿದೆ; ಅಪಾಯಕಾರಿ ವಿಕಿರಣವನ್ನು ತಡೆಗಟ್ಟಿ ರಕ್ಷಣೆ ನೀಡಿದೆ.

ಭೂಮಿಯ ಮೇಲಿನ ಗಾಳಿ: ಭೂಮಿಯ ಎಲ್ಲೆಡೆ ಸೂರ್ಯರಶ್ಮಿ ಒಂದೇರೀತಿಯಾಗಿ ಬೀಳುವುದಿಲ್ಲ. ಭೌಗೋಲಿಕ ಸ್ಥಿತಿಗಳೂ ಏಕಪ್ರಕಾರವಾಗಿ ಇಲ್ಲ. ಪರಿಣಾಮ: ಪ್ರದೇಶದಿಂದ ಪ್ರದೇಶಕ್ಕೆ ಹವೆ, ವಾಯುಗುಣಗಳ ವ್ಯತ್ಯಾಸ.

ಭೂಗೋಲವನ್ನಿಡೀ ಗಮನಿಸಿದರೆ ವಿವಿಧ ಅಕ್ಷಾಂಶ ಪ್ರದೇಶಗಳಲ್ಲಿ ಬೀಸುವ ಮಾರುತಗಳಲ್ಲಿ ಒಂದು ಕ್ರಮಬದ್ಧತೆಯಿದೆ. ಭೂಮಧ್ಯರೇಖಾ ಪ್ರದೇಶದ ಬಿಸಿಗಾಳಿ ಮೇಲೇರಿ ಧ್ರುವಾಭಿಮುಖವಾಗಿ ಸಾಗುವಾಗ ತಣಿಯುತ್ತದೆ. ಸುಮಾರು ೩೦ ಅಕ್ಷಾಂಶದಲ್ಲಿ ಕೆಳಗಿಳಿಯುತ್ತದೆ. ಇದರಲ್ಲಿ ಸ್ವಲ್ಪ ಭಾಗ ಉತ್ತರ ಧ್ರುವದೆಡೆಗೂ ಸ್ವಲ್ಪ ಭಾಗ ಭೂಮಧ್ಯ ರೇಖೆಯ ಕಡಮೆ ಒತ್ತಡ ಪ್ರದೇಶಕ್ಕೂ ಚಲಿಸುತ್ತದೆ. ಕ್ರಮಬದ್ಧವಾಗಿ ಬೀಸುವ ಈ ಮಾರುತಗಳು ಜಲಯಾನಕ್ಕೆ ಬಹಳ ಅನುಕೂಲ. ಆದ್ದರಿಂದ ಇವಕ್ಕೆ ವಾಣಿಜ್ಯ ಮಾರುತಗಳೆಂದು ಹೆಸರಾಯಿತು. ಮಾರುತಗಳ ದಿಕ್ಕಿನ ಮೇಲೆ ಭೂಮಿಯ ಆವರ್ತನೆಯ ಪರಿಣಾಮ ವಿಶೇಷವಾದದ್ದು. ದಕ್ಷಿಣ ಗೋಲಾರ್ಧದಲ್ಲಿ ಅವು ಎಡಕ್ಕೆ ಬಾಗುತ್ತವೆ. ಉತ್ತರ ಗೋಲಾರ್ಧದಲ್ಲಿ ಅವು ಬಲಕ್ಕೆ ಬಾಗುತ್ತವೆ.

ಉಷ್ಣವಲಯದಲ್ಲಿ ಸತತವಾಗಿ ನೀರು ಆವಿಯಾಗುವುದು, ಬಿಸಿಗಾಳಿ ಮೇಲೇರುವುದು. ಇಲ್ಲಿ ಮಳೆ, ಗಾಳಿ, ಮಿಂಚು, ಗುಡುಗುಗಳು ಸಾಮಾನ್ಯ. ೩೦° ಅಕ್ಷಾಂಶ ಪ್ರದೇಶದಲ್ಲಿ ಕೆಳಗಿಳಿಯುವ ವಾಯು ಸಂಕೋಚನಗೊಂಡು ಬಿಸಿಯಾಗುವುದು. ಆದ್ದರಿಂದ ಇಲ್ಲಿ ಒಣಹವೆ. ಸಹಾರ, ಕಲಹಾರಿ ಮೊದಲಾದ ಕೆಲವು ಮುಖ್ಯ ಮರುಭೂಮಿಗಳು ಈ ವಲಯದಲ್ಲಿವೆ. ೩೦° ಯಿಂದ

೬೦' ಅಕ್ಷಾಂಶ ಪ್ರದೇಶದಲ್ಲಿ ಋತು ಬದಲಾವಣೆಗಳು ಹೆಚ್ಚು ಸ್ಪಷ್ಟವಾಗಿ ತೋರುತ್ತವೆ. ಆರ್ಕ್ಟಿಕ್ ಮತ್ತು ಅಂಟಾರ್ಕ್ಟಿಕ್‌ಗಳು ಭೂಮಿಯ ಉತ್ತರ ಮತ್ತು ದಕ್ಷಿಣ ಧ್ರುವಪ್ರದೇಶಗಳು. ಮಂಜುಗಡ್ಡೆಯಿಂದ ಆಚ್ಛಾದಿತವಾದ ಈ ಪ್ರದೇಶಗಳಲ್ಲಿ ವರ್ಷವಿಡೀ ಶೀತ ವಾಯುಗುಣ. ಇಲ್ಲಿ ೬ ತಿಂಗಳುಗಳ ದೀರ್ಘ ಕತ್ತಲು ಮತ್ತು ಬೆಳಕುಗಳ ಆವರ್ತನೆ.

ಬೇಸಿಗೆಯಲ್ಲಿ ಏಷ್ಯಾ ಭೂಖಂಡ ಹಿಂದೂಸಾಗರ ಪ್ರದೇಶಕ್ಕಿಂತ ಹೆಚ್ಚು ಬಿಸಿಯಾಗುತ್ತದೆ. ಹಿಂದೂ ಸಾಗರದಲ್ಲಿ ಬೀಸುವ ಆಗ್ನೇಯ ಮಾರುತಗಳು ಭೂಮಧ್ಯರೇಖೆಯನ್ನು ದಾಟಿದ ಬಳಿಕ ಬಲಕ್ಕೆ ತಿರುಗಿ ಭಾರತ ಬರ್ಮಗಳಿಗೆ ಮಳೆ ತರುತ್ತದೆ.

ಅಡ್ಯನಡ್ಕ ಕೃಷ್ಣಭಟ್ಟ

(ಸಶೇಷ)



ಆಶೆ ಹೆಚ್ಚಿದವನೇ ಬಡವ. ತೃಪ್ತಿ ಇದ್ದರೆ ಧನಿಕನು ಯಾರು, ದರಿದ್ರನಾರು?

—ಭರ್ತೃಹರಿ

ನೈತಿಕವಾಗಿ ಯಾವುದು ಸರಿಯಲ್ಲವೋ ಅದು ರಾಜಕೀಯವಾಗಿಯೂ ಸರಿಯೆನಿಸದು.

—ಡೇನಿಯಲ್ ಓಕೋನಲ್

“....ಇದನ್ನು ಪಾಲು ಮಾಡುವುದಿಲ್ಲವೆ?”

ತಂದೆಯವರು ಬದುಕಿದ್ದಿದ್ದರೆ ಈ ಜನಕ್ಕೆ ಇಷ್ಟು ಅಸಭ್ಯವಾಗಿ ನಡೆದುಕೊಳ್ಳುವ ಶಕ್ತಿ ಎಲ್ಲಿರುತ್ತಿತ್ತು. ಅವರು ಒಮ್ಮೆ ಗುಡುಗಿದರೆಂದರೆ ಈ ಮನೆಯ ಗೋಡೆಗಳೂ ನಡುಗಿಬಿಡುತ್ತಿದ್ದವು. ಬೀದಿಯಲ್ಲಿ ಹೋಗುವ ಒಬ್ಬ ಹುಡುಗನಿಗೂ ನಮ್ಮ ಮನೆಯ ಬಾಗಿಲ ಮುಂದೆ ಇಣುಕುವ ಧೈರ್ಯವೂ ಇರುತ್ತಿರಲಿಲ್ಲ. ಇಂಥ ಕಠೋರ, ಕೋಪಿಷ್ಠ ವ್ಯಕ್ತಿತ್ವದ ಶ್ರೀಮಂತ ತಂದೆಯ ಚಿತೆ ಇನ್ನೂ ತಣ್ಣಗಾಗುವ ಮೊದಲೇ ಅವರ ಐಶ್ವರ್ಯವನ್ನು ಹರಿದುಹಂಚಿಕೊಳ್ಳುವ ನಾಟಕ ನಡೆಯುತ್ತಿದೆ. ಎಂಥ ವಿಡಂಬನೆ!

ತಂದೆಯವರು ಸ್ವರ್ಗವಾಸಿಗಳಾಗುತ್ತಿದ್ದಂತೆಯೇ ಎಳೆದಾಟ ಜಗ್ಗಾಟ ಕಸಿದುಕೊಳ್ಳುವ ಕಿತ್ತಾಟ ಆರಂಭವಾಗಿ ಬಿಟ್ಟಿದೆ. ಅವರ ಮುಂದೆ ಶಿಸ್ತಿಗೊಳಪಟ್ಟಿದ್ದ ಮಕ್ಕಳು ಸೊಸೆಯಂದಿರು ಕಟ್ಟುಗಳನ್ನೆಲ್ಲ ಕಿತ್ತುಹಾಕಿ ಎಂಥ ಅಶಿಷ್ಟ ವ್ಯವಹಾರದ ಎಲ್ಲೆಯನ್ನು ಮುಟ್ಟಿಬಿಟ್ಟಿದ್ದಾರೆ! ಇದನ್ನು ನೋಡಿ ಮನಸ್ಸಿಗೆ ಕಟುಯುಂಟಾಗುತ್ತಿದೆ. ಲೋಭ ದುರಾಸೆ ಮನುಷ್ಯನನ್ನು ಯಾವ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಅಸಮಯಾಸಮಯಗಳ ಪರಿವೆಯೂ ಇಲ್ಲದಂತೆ ಮಾಡಿಬಿಡುತ್ತದೆ.

ಮಧ್ಯಮ ಸೋದರ ಪೆನ್ನು-ಕಾಗದ ಹಿಡಿದು ಸ್ಟೂಲ್ ಮೇಲೆ ಕುಳಿತಿದ್ದಾನೆ. ತಮ್ಮಂದಿರು ಮತ್ತು ಸೊಸೆಯಂದಿರು ಪ್ರತಿಯೊಂದು ಕೋಣೆಯಲ್ಲಿರುವ ಸಾಮಾನುಗಳನ್ನು ತೆಗೆದು ತೆಗೆದು ತೆರೆದ ಆಕಾಶವಡಿಯ ಅಂಗಳದಲ್ಲಿ ತಂದು ತಂದು ಕುಕ್ಕುತ್ತಿದ್ದಾರೆ. ಒಂದೇ ಸಮನೆ ಬಹಳ ಹೊತ್ತಿನಿಂದ ಈ ಕೆಲಸದಲ್ಲಿ ತೊಡಗಿದ್ದುದರಿಂದ ಹಣೆಯ ಮೇಲೆ ಬೆವರಿನ ಹನಿಗಳು ಮಿನುಗುತ್ತಿವೆ. ಮನೆಯ ಸಾಮಾನುಗಳ ಪಟ್ಟಿಯನ್ನು ಮಾಡಲಾಗುತ್ತಿದೆ. ತಂದೆಯವರ ಅಲಮಾರಿನ ಬೀಗದಕೈ ಅನ್ನು ಮಧ್ಯಮನು ಅವರು ಸಾಯುವುದಕ್ಕೆ ಮೊದಲೆ ಹುಡುಕಿ ಪಡೆದುಕೊಂಡಿದ್ದ. ಅದು ಹೇಗೆ, ಗೊತ್ತಿಲ್ಲ. ಇಲ್ಲದಿದ್ದರೆ ಕೀಲಿಕೈ ಇಲ್ಲದೆ, ತಂದೆಯವರ ಅಮೂಲ್ಯವಾದ ಕಪ್ಪು ಪೆಟ್ಟಿಗೆಯನ್ನು ನಿರ್ದಯವಾಗಿ ಒಡೆದು ಹೇಗೆ ತೆರೆಯುತ್ತಿದ್ದರು?

ತಂದೆಯವರ ಕಪ್ಪು ಪೆಟ್ಟಿಗೆಯಿಂದಲೂ ಆವಶ್ಯಕವಾದ ಸಾಮಾನುಗಳನ್ನು

೧೯೬೮ರ ಜನವರಿ ೩೦ರ ‘ನವನೀತ’ ಮಾಸಪತ್ರಿಕೆಯಲ್ಲಿ ಪ್ರಕಟವಾದ ಉಪಾಸನಾರ್ಕ ಅವರ ‘ಇಸ್ಕೆ ಟುಕ್‌ಡೆ ನಹೀ ಕರೋಗೆ’ ಹಿಂದೀ ಕಥೆಯ ಅನುವಾದ.

ತೆಗೆದುಕೊಂಡು ಖಾಲಿ ಪೆಟ್ಟಿಗೆಯನ್ನು ಮಧ್ಯಮನ ಹೆಂಡತಿಯು ಒಂದು ಕಡೆ ಸರಿಸಿದ್ದಳು. 'ದೊಡ್ಡವರು-ಮುದುಕರು ಬರೀ ಕಬ್ಬಿಣದವನ್ನೇ ಸಂಗ್ರಹಿಸಿದ್ದಾರೆ' ಎಂದು ಗೊಣಗುತ್ತ ಹೇಳಿದಳು.

ಖಾಲಿ ಪೆಟ್ಟಿಗೆ ಧನಹೀನವಾಗಿ ನಿರ್ಲಕ್ಷ್ಯದಿಂದ ಬಿದ್ದಿದೆ. ಕಾಲದ ಪ್ರವಾಹ ಗತಕಾಲದ ಯಾವ ಚಿನ್ಹೆಯನ್ನೂ ಸ್ವೀಕರಿಸುವುದಿಲ್ಲ.

ತಂದೆಯವರು ರಿಟೈರ್ ಆದಮೇಲೆ ಕಾಲ ಕಳೆದಂತೆ ನಿಧಾನವಾಗಿ ಖಾಲಿ ಯಾಗುತ್ತ ಹೋದರು ಮತ್ತು ಈ 'ಶೂನ್ಯತೆ'ಯ ಕಾರಣದಿಂದಾಗಿ ಇವರಿಬ್ಬ ರಿಂದಲೂ ತಂದೆಯವರು ನಿಧಾನವಾಗಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತ ಹೋದರು. ಮಕ್ಕಳು ಕರ್ತವ್ಯ ವಿಮುಖರಾಗುತ್ತ ಹೋದರು. ತಂದೆಯವರ ಕಾಲುಗಳಲ್ಲಿ ಗತಿ ಚಲನೆ ನಿಂತು ಹೋಗಿತ್ತು. ಈ ಜನರ ಪ್ರಪಂಚ ವೇಗವಾಗಿ ಓಡುತ್ತಿತ್ತು. ಹೀಗಿರುವಾಗ ಅವರ ಜೊತೆ ಹೇಗೆ ಹೋಗುತ್ತಾರೆ?

ತಂದೆಯವರ ಪುಸ್ತಕ-ಫೈಲುಗಳ ಅಲಮಾರನ್ನು ಅತ್ಯಂತ ಜಾಗರೂಕತೆ ಯಿಂದ, ತೀಕ್ಷ್ಣದೃಷ್ಟಿಯಿಂದ ಹುಡುಕಿ ತೆಗೆಯುವ ಕೆಲಸದಲ್ಲಿ ತೊಡಗಿದ್ದಾನೆ, ತಮ್ಮ ರೂಪಾಯಿಗಳ ರಾಶಿ, ಬ್ಯಾಂಕಿನ ಪಾಸ್‌ಬುಕ್ ಅಥವಾ ಎಲ್ಲಕ್ಕಿಂತ ಹೆಚ್ಚಾಗಿ ಚರಸ್ಥಿರ ಆಸ್ತಿಯ ಉಯಿಲು ಪತ್ರಕ್ಕಾಗಿ ಹುಡುಕಾಟ ನಡೆದಿತ್ತು.

ಈ ನಾಲ್ವರಿಗೆ ನಿದ್ರೆ ದೂಷ್ಯವಾಗಿತ್ತು. ತಂದೆಯವರು ಸತ್ತ ಗಳಿಗೆಯಿಂದ ರಾತ್ರಿಯೆಲ್ಲಾ ಕೋಣೆಯಲ್ಲಿ ಕುಳಿತುಕೊಂಡು ಪಿಸುಗುಟ್ಟಿದ್ದೂ ಪಿಸುಗುಟ್ಟಿದ್ದೆ. ಉಯಿಲನ್ನು ಜ್ಯೇಷ್ಠನು ತನ್ನ ಹೆಸರಿಗೆ ಮಾಡಿಸಿಕೊಂಡು ಬಿಟ್ಟಿರುವನೋ ಎಂಬ ಚಿಂತೆ ಇವರಿಗೆ. ಕೇವಲ ನಾನು ಮಾತ್ರ ತಂದೆಯವರಿಗೆ ಅತ್ಯಂತ ಹತ್ತಿರ ದವನಾಗಿದ್ದೇನೆ. ಆದುದರಿಂದ ಈ ಬಡಪಾಯಿಗಳಿಗೆ ಹಾಗೆನ್ನಿಸುವುದು ಸಹಜವೇ.

ನಾನು ಹಿರಿಯನಾದುದರಿಂದ ತಂದೆಯವರಿಗೆ ನನ್ನ ಮೇಲೆ ತುಂಬ ಪ್ರೀತಿ ಇತ್ತು. ಅವರ ಆಶೀರ್ವಾದವಿತ್ತು, ನಾನು ಇವರ ಹಕ್ಕನ್ನು ಕಸಿದುಕೊಂಡು ಬಿಟ್ಟಿದ್ದೇನೆ. ಅಂದರೆ ತಂದೆಯವರ ಸಂಪತ್ತಿನ ಹೆಚ್ಚು ಲಾಭವನ್ನು ನಾನು ಪಡೆದುಕೊಂಡುಬಿಟ್ಟಿದ್ದೇನೆ.

ಮಧ್ಯಮನ ಹೆಂಡತಿ ತಂದೆಯವರ ವೃದ್ಧಾಪ್ಯದ ಆವಲಂಬನವಾದ, ಬೆಳ್ಳಿಯ ಹಿಡಿಯಿದ್ದ ಬೆತ್ತವನ್ನು ಮುರಿದು, ಬೆಳ್ಳಿಯ ರೇಕನ್ನು ತೆಗೆದುಕೊಳ್ಳುವ ಪ್ರಯತ್ನದಲ್ಲಿ ಶಕ್ತಿಯನ್ನೆಲ್ಲ ಪ್ರಯೋಗಿಸುತ್ತಿದ್ದಾಳೆ. ಅದಕ್ಕಾಗಿ ಕುಟ್ಟುತ್ತಿದ್ದ ಇಟ್ಟಿಗೆಯ ಚೂರು ಆಕೆಯ ಕೈಗೆ ಬಡಿಯಿತು. ಒಂದು ಬಾರಿ ನರಳಿದಳು.

ಆದರೆ ಬೆಳ್ಳಿಯ ಹಿಡಿಯನ್ನು ಮಾತ್ರ ಬಿಡಲಿಲ್ಲ. ಇನ್ನೊಂದು ಏಟು ಕೊಟ್ಟಳು, ಆದರೆ ತಪ್ಪು ಜಾಗದಲ್ಲಿ. ಈ ಸಾರಿ ಜೋರಾಗಿ ಚೀರಿದಳು. ಮಧ್ಯಮನು ಪೆನ್ನು ಕಾಗದವನ್ನು ಎಸೆದು ಹೆಂಡತಿಯ ಕೈಯನ್ನು ಹಿಡಿದುಕೊಂಡ. ಭಾವಾವೇಶದಲ್ಲಿ ಎದುರಿಗೆ ತಾಯಿ ಕುಳಿತಿದ್ದಾಳೆ ಎಂಬುದನ್ನು ಮರೆತುಬಿಟ್ಟ. ಇಂಥ ಸಮಯದಲ್ಲಿ ಪ್ರೇಮ ಪ್ರದರ್ಶನದ ಮಾತುಗಳನ್ನಾಡುವುದು ಚೆನ್ನಾಗಿ ಕಾಣುತ್ತದೆಯೇ! ಸಮಯಾ ಸಮಯದ ಗಮನವಿರಬೇಕಲ್ಲವೆ?

ಬೆಳ್ಳಿ ಹಿಡಿಯ ರೇಕು ೧೫೫ ಗ್ರಾಂ ತೂಗಿತು. ಮೂರು ಭಾಗ ಮಾಡುವುದರಲ್ಲಿ ಸ್ವಲ್ಪ ಗೊಂದಲವುಂಟಾಗಿ ತುಂಡುಗಳನ್ನಾಗಿ ವಿಭಜಿಸಿ ಒಂದು ಕಡೆ ಇಟ್ಟರು. 'ದೊಡ್ಡವನಿಗೆ ಭಾಗ ಕೊಡಲೇ ಬೇಕೆ, ಇವರಲ್ಲಿ. ಅವನಿಗೆ ಮೊದಲೇ ಬೆಳ್ಳಿ ಹೆಚ್ಚಾಗಿ ಸಿಕ್ಕಿದೆ.' ಕಿರಿಯಳ ಸಲಹೆಯಾಗಿತ್ತು.

ತಂದೆಯವರು ಬದುಕಿದ್ದಾಗ ಅವರ ಯಾವುದೇ ವಸ್ತುವನ್ನು ಮುಟ್ಟುವಷ್ಟು ಧೈರ್ಯವಿರಲಿಲ್ಲ. 'ನಾನು ಈ ವಸ್ತುವನ್ನು ಅಲ್ಲಿಟ್ಟಿದ್ದೆ, ಅದು ಇಲ್ಲಿಗೆ ಹೇಗೆ ಬಂತು?' ಎಂದು ಗುಡುಗಿದರೆ ಉತ್ತರ ಕೊಡಬೇಕಾದರೆ ಸಾಕಾಗಿಬಿಡುತ್ತಿತ್ತು, ಉತ್ತರ ಮಾತ್ರ ಸರಿಯಾಗಿ ದೊರೆಯುತ್ತಿರಲಿಲ್ಲ. ಇಂದು ಅವರ ಒಂದೊಂದು ವಸ್ತುವೂ ಹಂಚಿಕೆಯಾಗಿ ಒಂದು ಕಡೆ ಇಡಲಾಗುತ್ತಿದೆ. ಅನೇಕ ವಸ್ತುಗಳೊಂದಿಗೆ ಈ ಕುಟುಂಬದ ಅನೇಕ ವರ್ಷಗಳ ಐತಿಹಾಸಿಕ ಸಂಬಂಧವಿದೆ. ಆದರೆ ಈ ಲೋಭಿಗಳಿಗೆ ಅವುಗಳ ಆ ಮಹತ್ವವೆಲ್ಲಿದೆ? ಎಷ್ಟೊಂದು ನಿರ್ದಯೆಯಿಂದ ತಂದು ತಂದು ಇಲ್ಲಿ ಆ ಒಂದೊಂದು ವಸ್ತುವನ್ನು ಕುಕ್ಕುತ್ತಿದ್ದಾರೆ! ಒಡೆದಿರಲಿ, ಮುರಿದಿರಲಿ, ಅವುಗಳನ್ನು ಆದಷ್ಟು ಬೇಗ ಹಂಚಿಕೊಂಡು ತಮ್ಮ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗಬೇಕಾಗಿದೆ. 'ಈ ದಿನಗಳಲ್ಲಿ ರಜೆ ಎಲ್ಲಿ ಸಿಗುತ್ತದೆ. ಬಹಳ ಕಷ್ಟಪಟ್ಟುಕೊಂಡು ಬಂದಿದ್ದೇನೆ. ಇಷ್ಟು ದೂರ ಬರುವುದೆಂದರೆ ಎಷ್ಟೊಂದು ಹಣ ಖರ್ಚಾಗುತ್ತದೆ. ಆದರೂ ತಂದೆಯವರಿಗಾಗಿ ಖರ್ಚಿನ ಬಗ್ಗೆ ಚಿಂತಿಸಲೇ ಇಲ್ಲ.' ಇಬ್ಬರು ಸೋದರರೂ ಹಿಂತಿರುಗಿ ಹೋಗಲು ತಾಯಿಯ ಬಳಿ ನೆಪ ಹೇಳಿ ಚೆನ್ನಾಗಿ ಅತ್ತರು.

ತಾಯಿ ತದೇಕ ದೃಷ್ಟಿಯಿಂದ ನೋಡುತ್ತ ಇಬ್ಬರೂ ಮಕ್ಕಳ ಕಣ್ಣುಗಳಲ್ಲಿ ಅಡಗಿರುವ 'ಲಜ್ಜೆ'ಯನ್ನು ಹುಡುಕುತ್ತಿದ್ದಳು, ನಂತರ ಇದ್ದಕ್ಕಿದ್ದಂತೆ ನಿರುತ್ತರಳಾಗಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಪತಿಯ ಮರಣದಿಂದ ಅಳುತ್ತಿದ್ದಾಳೆ ಎಂದು ಜನ ಭಾವಿಸಿದರು. ಆದರೆ ತಾಯಿ ಇದ್ದಕ್ಕಿದ್ದಂತೆ ಏಕೆ ಬಿಕ್ಕಿದಳು ಎಂಬುದು ನನಗೆ ಗೊತ್ತು. ಆಕೆ ತನ್ನದೇ ರಕ್ತದ ಅಸೌಜನ್ಯವನ್ನು ಕಂಡು

ನಿರಾಶಾಭಾವದಿಂದ ಅತ್ತಿದ್ದಳು. ಈ ಎರಡು ಬಂಜರು ಹೃದಯ ಭೂಮಿಯನ್ನು ನನ್ನ ರಕ್ತವನ್ನು ನನ್ನ ಎದೆಹಾಲನ್ನೆರೆದು ಬೆಳೆಸಿದೆನಲ್ಲ ಎಂಬ ಮಮತೆಗಾಗಿ ಅತ್ತಿದ್ದಳು. ಅವರ ರಕ್ತ ಪತಿಯ ಸಾವಿನೊಂದಿಗೆ ಇಷ್ಟು ಬೇಗ ನೀರಾಗಿಬಿಟ್ಟಿತೆ. ತಾಯಿಯ ದೃಷ್ಟಿಯಿಂದಲ್ಲವಾದರೂ, ಸಮಾಜದ ದೃಷ್ಟಿಯಿಂದಲಾದರೂ ಸ್ವಲ್ಪ ನಾಚಿಕೆಪಟ್ಟುಕೊಳ್ಳಬಾರದಿತ್ತೆ.

ತಂದೆಯವರು ಜೊತೆಯಲ್ಲಿ ಏನನ್ನೂ ತೆಗೆದುಕೊಂಡು ಹೋಗಲಿಲ್ಲ. ಎಲ್ಲವನ್ನೂ ಇಲ್ಲಿಯೇ ಬಿಟ್ಟಂತೆ ಬಿಟ್ಟುಹೋದರು. ೧೩ ದಿನಗಳವರೆಗಾದರೂ ಸಹಿಸಿಕೊಂಡಿರಬಾರದಿತ್ತೆ. ತಾಯಿಯ ಮುರಿದ ಮನಸ್ಸಿಗೆ ಸಮಾಧಾನ ಮಾಡುವುದಿರಲಿ, ಮೇಲಿನಿಂದ ಮತ್ತಷ್ಟು ಪೆಟ್ಟು ಕೊಡುತ್ತಿದ್ದಾರೆ. ಸಂತೋಷವಾಗಲಿಲ್ಲ. ಹಸಿದ ಹದ್ದುಗಳಂತೆ ಮೇಲೆ ಬಿದ್ದು ತಾಯಿಯ ವಿಶ್ವಾಸ, ನಂಬಿಕೆಯನ್ನು ಕಿತ್ತು ಕಿತ್ತು ತಿನ್ನತೊಡಗಿದರು. ತಂದೆಯವರು ಸಾಯುತ್ತಿದ್ದಂತೆ ಎಷ್ಟು ಬೇಗ ಎಲ್ಲರೂ ತಮ್ಮ ನಿಜವಾದ ಬಣ್ಣವನ್ನು ತೋರಿಸಿಕೊಂಡು ಬಿಟ್ಟರು, ಇದೇ ಇವರ ನಿಜವಾದ ಪರಿಚಯ.

ದೊಡ್ಡ ಲಿಸ್ಟ್ ತಯಾರಾಯಿತು. ಕೆಲವು ವಸ್ತುಗಳಿದ್ದವು. ಮೂರು ಸ್ಥಳಗಳಲ್ಲಿ ಹಂಚಿಕೆಗೆ ಅನುಕೂಲವಾಗಿ. ಇವಲ್ಲದೆ ಒಂದು ಗೋಡೆ ಗಡಿಯಾರವಿತ್ತು. ಇಬ್ಬರು ಸೊಸೆಯಂದಿರೂ ಪರಸ್ಪರ ಸ್ವಲ್ಪ ಬಿಸಿ ಬಿಸಿಯಾದರು. 'ಇಷ್ಟು ದೊಡ್ಡ ಗಡಿಯಾರವನ್ನು ತೆಗೆದುಕೊಂಡು ನೀನೇನು ಮಾಡುತ್ತೀಯೆ? ನಿನ್ನ ಮನೆಯೂ ಚಿಕ್ಕದಿದೆ. ಇದನ್ನು ನಾನು ತೆಗೆದುಕೊಂಡು ಹೋಗುವೆನು 'ಮೇಡ್ ಇನ್ ಇಂಗ್ಲೆಂಡ್' ಎಂದು ಹೇಳಿ ಮಧ್ಯಮನ ಹೆಂಡತಿಯು ಗಡಿಯಾರವನ್ನು ಎತ್ತಿಕೊಂಡು ಹೋಗಿ ತನ್ನ ಭಾಗದ ಸಾಮಾನಿನ ಜೊತೆ ಇಟ್ಟುಕೊಂಡಳು.

'ವಾಹವ್ವಾ, ನೀನು ಬಹಳ ಜಾಣೆ. ತಂದೆಯವರ ಜೇಬಿನ ಗಡಿಯಾರ, ಟೈಪ್‌ರೈಟರ್‌ಗಳನ್ನು ಮೊದಲೇ ತೆಗೆದುಕೊಂಡುಬಿಟ್ಟೆ, ಈಗ ಗೋಡೆ ಗಡಿಯಾರವನ್ನೂ ನೀನೆ ತೆಗೆದುಕೊಳ್ಳುತ್ತೀಯಾ? ನೀನೆ ತುಂಬ ಜಾಣೆ? ಚಿಕ್ಕ ಸೊಸೆಯು ಕೂಡ ಗೋಡೆ ಗಡಿಯಾರದ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಿದಳು. ಇಬ್ಬರ ಗಂಡಂದಿರೂ ಅದರ ಬೆಲೆಯನ್ನು ಕಟ್ಟಿ ಅರ್ಧ-ಅರ್ಧ ಹಂಚಿಕೊಂಡು ಸಂದರ್ಭವನ್ನು ಶಾಂತಗೊಳಿಸಿದರು. ಒಡೆದಿದ್ದ ಹಿತ್ತಾಳೆಯ ಪಾತ್ರೆಗಳನ್ನು ತೂಗುತ್ತಿದ್ದರು. ದೊಡ್ಡ ದೊಡ್ಡ ಪಾತ್ರೆಗಳು, ಸಾಮಾನುಗಳನ್ನು ಅವಶ್ಯಕತೆಗನುಸಾರವಾಗಿ ಹಂಚುತ್ತಿದ್ದರು, ಅಥವಾ ಮಾರಿ ಹಣವನ್ನು ಹಂಚಿಕೊಳ್ಳುವಂತೆ ವ್ಯವಸ್ಥೆ ಮಾಡುತ್ತಿದ್ದರು.

ತಾಯಿ ಇವೆಲ್ಲವುಗಳಿಂದ ದೂರಾಗಿ, ಖಿನ್ನಮನಸ್ಕಳಾಗಿ ತಂದೆಯ ನೆನಪಿನಲ್ಲಿ ಸಂಜೆಯ ದೀಪವನ್ನು ಹತ್ತಿಸಿ, ಶೂನ್ಯ ಉದಾಸೀನ ಕಣ್ಣುಗಳಿಂದ ತನ್ನ ಮನೆಯ ವಿನಾಶವನ್ನು ನೋಡುತ್ತಿದ್ದಳು. ಈ ಮನೆ ತಂದೆಯ ಸ್ವಪ್ನದ ಗೂಡಾಗಿತ್ತು, ಅವನ್ನು ಒಮ್ಮೊಮ್ಮೆ ಅತ್ಯಂತ ತನ್ಮಯತೆಯಿಂದ, ಒಮ್ಮೊಮ್ಮೆ ತಪಸ್ಸಿನಂತೆ ತೊಡಗಿ ಅತ್ಯಂತ ಪರಿಶ್ರಮದಿಂದ ತುಂಬಿ ತುಳುಕುವಂತೆ ಸಿಂಗರಿಸಿದ್ದರು, ತುಂಬಿದ ಮನೆಯನ್ನು ಇದುವರೆಗೂ ನಡೆಸಿಕೊಂಡು ಬಂದಿದ್ದರು. ಅದರ ಕಣಕಣವೂ ಚದುರುತ್ತಿರುವ ಸಂಬಂಧವನ್ನು ತಟಸ್ಥವಾಗಿ ನೋಡುತ್ತಿತ್ತು. ಗಂಡ ಸಾಯುತ್ತಿದ್ದಂತೆಯೇ ಮಕ್ಕಳಿಂದಲೇ ಈ ರೀತಿಯನ್ನು ನೋಡಬಹುದೆಂದು ಯೋಚನೆಯನ್ನು ಸಹ ಮಾಡಿರಲಿಲ್ಲ.

ಅಂತರಂಗ ವೇದನೆಯ ದುಃಖ ತಾಯಿಯ ಸೌಭಾಗ್ಯವಳಿದ ಮುಖವನ್ನು ಮತ್ತಷ್ಟು ಕಾಂತಿಹೀನವನ್ನಾಗಿ ಮಾಡುತ್ತಿತ್ತು. ಎಂಥ ನೋವಿನ ಅಲೆಯೇಳುತ್ತಿದೆ ಆಕೆಯ ಮರ್ಮಸ್ಥಳದಲ್ಲಿ. ನನ್ನಿಂದ ಕಣ್ಮರೆಯಾಗಿಲ್ಲ ಆ ದೃಶ್ಯ.

ಅನೇಕ ಘಂಟೆಗಳ ಸತತ ಪ್ರಯತ್ನದ ನಂತರ ತಂದೆಯವರು ಸಂಪಾದಿಸಿಟ್ಟಿದ್ದ ಸಂಪತ್ತೆಲ್ಲ ರಾಶಿಯಾಗಿ ಬಿತ್ತು. ಚಿಕ್ಕವನು ಜ್ವರದಿಂದ ನೀರಾಗಿದ್ದಾನೆ. ಆದರೆ 'ಕೊಂಚ ಪಡೆಯುವ' ಸಂತೋಷಭಾವವೂ ಇದೆ. ನಗದು ಹಣದ ಒಂದು ಪಾಸ್ ಬುಕ್ ಸಿಕ್ಕಿತು, ಆದರೆ ಅದರಲ್ಲಿರುವ ಹಣ ಮನಸ್ಸನ್ನು ಸಂತೋಷಪಡಿಸುವಂತಿರಲಿಲ್ಲ. ಹೆಚ್ಚು ಹಣ ಇರುವ ಇನ್ನೊಂದು ಪಾಸ್ ಬುಕ್ ಇರಲೇಬೇಕೆಂಬ ಸಂಶಯವಲ್ಲ, ಖಚಿತವಾದ ಅಭಿಪ್ರಾಯವೇ ಇದೆ, ಮಧ್ಯಮನಿಗೆ. ಈ ನಂಬಿಕೆಯಿಂದಲೇ ಮಧ್ಯಮ ಮತ್ತು ಕನಿಷ್ಠರಿಬ್ಬರೂ ತಂದೆಯವರ ಹಾಸಿಗೆ-ದಿಂಬು-ಗದ್ದುಗೆಗಳನ್ನೆಲ್ಲಾ ಬಿಚ್ಚಿ ಬಿಚ್ಚಿ ಚೆಲ್ಲಿದ್ದರು. ಮನೆತುಂಬ ಚೆಲ್ಲಿದ ಹತ್ತಿ ಹಾರಾಡುತ್ತ ಅವರ ಲೋಭದ ಕಥೆಯನ್ನು ಹೇಳುತ್ತಿತ್ತು, ಆದರೆ ಹಣ ಸಿಕ್ಕಿರಲಿಲ್ಲ. ಅಶಾಂತರಾಗಿ ಅವರು ಕುಳಿತುಬಿಟ್ಟಿದ್ದರು.

ತಂದೆಯವರು ಎಂದಿಗೂ ತಮ್ಮ ಅಲಮಾರಿನ ಕಚ್ಚಾ-ಪಕ್ಕಾ ರಿಪೋರ್ಟ್ ಯಾರಿಗೂ ಸಿಗುವಂತೆ ಮಾಡಿರಲಿಲ್ಲ. ಎಂದಿಗೂ ತಮ್ಮ ಕರಗುತ್ತಿರುವ ಬ್ಯಾಂಕಿನ ಹಣದ ರಹಸ್ಯವನ್ನು ಬಯಲು ಮಾಡಿರಲಿಲ್ಲ. ತಾಯಿಗೂ ಈ ರಹಸ್ಯ ತಿಳಿದಿರಲಿಲ್ಲ. ನನಗೆ ಗೊತ್ತಿತ್ತು, ತಂದೆಯವರು ದಿನದಿಂದ ದಿನಕ್ಕೆ ದುರ್ಬಲರಾಗುತ್ತಿದ್ದಾರೆ. ಅವರ ಅಂತರಂಗವನ್ನು ಶೂನ್ಯ ತುಂಬುತ್ತಿದೆ. ಆದರೆ ಕೊನೆಯವರೆಗೂ ಸೋಲನ್ನೊಪ್ಪುವುದಿಲ್ಲ. ಸ್ವಾಭಿಮಾನಿ ವ್ಯಕ್ತಿತ್ವದವರಾಗಿದ್ದರಲ್ಲವೆ?

ಮಧ್ಯಮ ನನ್ನನ್ನು ಬಾರಿ ಬಾರಿಗೂ ಕೇಳುತ್ತಾನೆ—'ತಂದೆಯವರು ಹಣ

ವನ್ನು ಎಲ್ಲಿಡುತ್ತಿದ್ದರು?' ಎಂದು. ತಾಯಿಯನ್ನೂ ಕೇಳುತ್ತಾನೆ. ಎಂದಿಗೂ ತಂದೆಯುವರ ಸಂಬಳದ ಪೂರ್ಣ ಹಣವನ್ನೇ ಕೈಯಲ್ಲಿಟ್ಟು ಕಂಡಿರದ ಬಡಪಾಯಿ ತಾಯಿ ಏನು ಹೇಳಿಯಾಳು!

'ಅಮ್ಮ ಏಕೆ ಹೇಳುತ್ತಾರೆ, ಇವರು ಮೊದಲೇ ತೆಗೆದುಕೊಂಡು ಮುಚ್ಚಿಟ್ಟಿರ ಬಹುದು'—ಎಂದು ಚಿಕ್ಕ ಸೊಸೆ ಅತ್ತೆಯ ಮೇಲೆ ಆರೋಪ ಹೊರಿಸಿದಳು. ತಾಯಿ ಆ ಕಟುವಾದ ಮಾತನ್ನು ನುಂಗಿಕೊಂಡಳು. ಗಂಡನ ಸಾವಿನ ನಂತರ ಇಷ್ಟು ಬೇಗ ನಿಂದನೆಯನ್ನು ಕೇಳಬೇಕಾಗುವುದೆಂದು ಯೋಚಿಸಿಯೂ ಇರಲಿಲ್ಲ. ಮನಸ್ಸು ಆಳವಾದ ವಿತೃಷ್ಣೆಯಿಂದ ಕಹಿಯಾಗಿಹೋಯಿತು. ನಾನು ಇವೆಲ್ಲವು ಗಳ ಮಧ್ಯೆ ಇದ್ದೂ ತಟಸ್ಥನಾಗಿ ಎಲ್ಲಿಯೋ ದೂರದಲ್ಲಿ ಕಳೆದುಹೋಗಿದ್ದೇನೆ.

ಒಂದು ಅದ್ಭುತ ಭಯಾನಕ ದೃಶ್ಯ. ಸಾರಹೀನ ಸಂಜೆಯು ಮಬ್ಬು ಸುತ್ತಲೂ ಬಾಹುಗಳನ್ನು ಹರಡುತ್ತಿದೆ. ಸೂರ್ಯ ದೂರದ ಹಸಿರು ಜಲದ ಹಿಂದೆ ಅಡಗಿ ಬಿಟ್ಟ—ಸಂಜೆಯಾಗುತ್ತಲೇ ಹಕ್ಕಿಗಳು ತಮ್ಮ ತಮ್ಮ ಗೂಡುಗಳನ್ನು ಸೇರಲು ತವಕಿಸುತ್ತಿವೆ. ನೀಲ ದಿಗಂತ ಬಣ್ಣವನ್ನು ಬದಲಿಸಿಕೊಂಡಿದೆ.

* * *

ಮೃತ್ಯುವಿನ ರಾತ್ರಿ ಏಕೆ ಇಷ್ಟೊಂದು ಭಯಂಕರವಾಗಿ ಇರುತ್ತದೆ. ತಂದೆ ಯವರು ಸರಿಯಾಗಿ ಮೊನ್ನೆ ಇಂಥದೆ ಮುಸುಕಿನ ಸೂರ್ಯನ ಜೊತೆ ಮಬ್ಬಿನಲ್ಲಿ ತಮ್ಮ ಅಂತಿಮ ಯಾತ್ರೆಯನ್ನು ಕೈಕೊಂಡಿದ್ದರು. ಇಬ್ಬರು ಸೋದರರಿಗೂ ಮೂರನೆಯ ಸಾರಿ ಸಾವಿನ ಟೆಲಿಗ್ರಾಂ ಕೊಟ್ಟಿದ್ದೆ. ಹೆಂಡತಿಯರನ್ನು ಜೊತೆ ಯಲ್ಲಿ ಕರೆದುಕೊಂಡು ಇಬ್ಬರೂ ಬೆಳಕು ಹರಿಯುವ ಹೊತ್ತಿಗೆ ಬಂದಿದ್ದರು. ತಂದೆಯ ಸಾವಿನಿಂದ ದುಃಖ ಕಡಿಮೆ, ಸಂತೋಷ ಹೆಚ್ಚು ಎಂಬುದು ಅವರ ಮುಖದಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಸೊಸೆಯಂದಿರು ಮನೆಯ ಬೆಲೆ ಬಾಳುವ ಹಳೆಯ ಸಾಮಾನುಗಳ ಮೇಲೆ ತಮ್ಮ ಹಸಿದ ದೃಷ್ಟಿಯನ್ನು ಹಾಯಿಸುತ್ತಿದ್ದರು. ತಂದೆಯುವರು ಸಾಯುತ್ತಿದ್ದಂತೆಯೆ ಇವರಿಗೆ ಎಲ್ಲ ಸಾಮಾನುಗಳೂ ತಮ್ಮವೆಂಬಂತೆ ಕಾಣತೊಡಗಿದ್ದವು.

ತಂದೆಯುವರು ಎರಡು ತಿಂಗಳು ಕಾಯಿಲೆಯಿಂದ ನರಳಿ-ನರಳಿ ಸತ್ತರು. ಇವರಿಬ್ಬರಿಗೂ ಯಾವ ಸಂಬಂಧಿಯೂ ಅಲ್ಲವೇನೋ ಎಂಬಂತೆ. ಯಾವ ರಕ್ತ ಸಂಬಂಧವೂ ಇರಲಿಲ್ಲ. ಕಾಯಿಲೆಯಿದ್ದಾಗ ಹಣ ಕೊಡುವುದಂತೂ ದೂರವೇ, ಒಮ್ಮೆಯಾದರೂ ರಜೆ ಪಡೆದು ಬಂದು ನೋಡಿಕೊಂಡು ಹೋಗುವುದಕ್ಕೂ ಪುರುಸೊತ್ತಿರಲಿಲ್ಲ.' ಸಮಯವಿಲ್ಲ, ರಜೆ ಸಿಗುತ್ತಿಲ್ಲ. ಸಾಧ್ಯವಾದರೆ ಬರುತ್ತೇನೆ.

ನನಗೆ ಪತ್ರ ಬರೆದು ತಮ್ಮ ಕರ್ತವ್ಯದ ಪೂರ್ಣಾಹುತಿಯನ್ನು ಕೊಟ್ಟುಬಿಟ್ಟಿದ್ದರು, ಅವರಿಬ್ಬರೂ.

ಮಧ್ಯಮನ ಹೆಂಡತಿ ಗಡಿ ಮೀರಿ ಉಪದೇಶ ಮಾಡಿದ್ದಳು. ಅಳುತ್ತಿದ್ದ ಅತ್ತಿಗೆ ಧೈರ್ಯ ನೀಡುತ್ತ ಹೇಳಿದ್ದಳು—‘ಅಮ್ಮಾಜಿ, ಅಳುವುದೇಕೆ? ಎಷ್ಟೊಂದು ವಯಸ್ಸಾಗಿತ್ತು, ಮುಪ್ಪು ಅಡರಿತ್ತು, ಎಲ್ಲರೂ ಸಾಯಬೇಕು, ಅಂತೆಯೇ ಸತ್ತರು, ಕಾಯಿಲೆಯಿಂದ ಮುಕ್ತಿ ಪಡೆದರು.’

ಎಂಥ ಸಮಾಧಾನ ನೀಡುತ್ತಿದ್ದಳು. ಅಮ್ಮನಿಗೆ! “ಮುಪ್ಪು ಅಡರಿತ್ತು.... ಕಾಯಿಲೆಯಿಂದ ಮುಕ್ತಿ ಪಡೆದರು....ಎಂದಾದರೂ ‘ಮಾಂಗಲ್ಯ ಭಾಗ್ಯ’ ಮುಪ್ಪಾಗಿದೆಯೆ? ಅದರ ಬೆಲೆಯೂ ಎಂದಾದರೂ ಕಡಿಮೆ ಆಗಿದೆಯೆ? ಮಗ-ಸೊಸೆಯರ ದೃಷ್ಟಿಯಲ್ಲಿ ತಂದೆ-ತಾಯಿಗಳ ಬೆಲೆ ಕಾಲದ ಜೊತೆ ಜೊತೆಯಲ್ಲಿಯೇ ಕಡಿಮೆಯಾಗುತ್ತದೆಯೆ? ಭಾರತೀಯ ನಾರಿಯು ಚಿಟಿಕೆಯಷ್ಟು ಕುಂಕುಮದ ಬೆಲೆ, ಅಗ್ನಿ ಪ್ರದಕ್ಷಿಣೆ ಬರುವಾಗ ನೀಡಿದ್ದಷ್ಟೇ ಎಲ್ಲ ಕಾಲಕ್ಕೂ ಇರುತ್ತದೆ ಎಂಬುದನ್ನು ಅವರು ಯೋಚಿಸಲಿಲ್ಲವಲ್ಲ?

ಒಬ್ಬ ಹೆಂಡತಿಗೆ ಅವಳ ಗಂಡ ಎಂದಿಗೂ ಮುದುಕನಾಗುವುದಿಲ್ಲ. ಎಷ್ಟೇ ಜೀರ್ಣ ಶರೀರಿಯಾಗಿ ನರಳುತ್ತಿದ್ದರೂ ಅವಳು ಎಂದಿಗೂ ಅವನ ಮೃತ್ಯುವನ್ನು ಬಯಸುವುದಿಲ್ಲ. ಗಂಡನೇ ಅವಳ ಸರ್ವಸ್ವನಾಗಿದ್ದಾನೆ.

ನಿನ್ನೆಯೂ ಶವಸಂಸ್ಕಾರದ ಖರ್ಚಿಗಾಗಿ ಸೋದರರೆಲ್ಲಿಂದಲೂ ಚಂದಾ ವಸೂಲಿ ಮಾಡುವ ರೀತಿಯ ಸಲಹೆ ನೀಡುತ್ತಿದ್ದಳು ಮಧ್ಯಮನ ಹೆಂಡತಿ. ‘ನಾವೇ ಶವ ಎತ್ತುವ ಖರ್ಚನ್ನು ಏಕೆ ಮಾಡಬೇಕು? ಈ ಕನಿಷ್ಠ ಮತ್ತು ಜ್ಯೇಷ್ಠರಿಗೂ ಅವರು ತಂದೆಯಾಗಿರಲಿಲ್ಲವೆ? ನಾವು ಹೆಚ್ಚು ಸಂಪಾದಿಸುತ್ತಿದ್ದೇವೆ, ನಿಜ, ಅದೇನಾಯಿತು, ಮೂವರೂ ಸಮನಾಗಿ ಹಣವನ್ನು ಖರ್ಚು ಮಾಡಬೇಕು.’

ಒಳಗೆ ನಡೆಯುತ್ತಿರುವ ಈ ಸೋದರರ ಪಿಸುಮಾತು ಹೊರಗೆ ದುಃಖತಪ್ತರಾಗಿ ಅಂತಿಮಯಾತ್ರೆಯಲ್ಲಿ ಪಾಲ್ಗೊಳ್ಳಲು ಬಂದು ನೆರೆದಿರುವ ಗುಂಪಿನ ಕಿವಿಗಳ ಮೇಲೂ ಬೀಳುತ್ತಿತ್ತು. ತಿರಸ್ಕಾರ-ವಿತೃಷ್ಣೆಯ ಭಾವ ಎಲ್ಲರ ಮುಖದ ಮೇಲೂ ತೇಲಿಹೋಯಿತು. ಸೋದರರ ಈ ವ್ಯವಹಾರದಿಂದಾಗಿ ನನ್ನ ದೃಷ್ಟಿ ತಗ್ಗಿಹೋಗಿತ್ತು.

ಚಿತೆಗೆ ‘ಅಗ್ನಿಸಂಸ್ಕಾರ’ ಮಾಡುವವರು ಯಾರು? ಇದೂ ಚಿಂತೆಯ ವಿಷಯವಾಗಿತ್ತು ಇಬ್ಬರು ಸೋದರರ ಮಧ್ಯೆ. ಮಧ್ಯಮನಿಗೆ ೧೫ ದಿನಗಳ ನಂತರ ತನ್ನ

ಮೈದುನನ ಮದುವೆಗೆ ಹೋಗಬೇಕಾಗಿತ್ತು. ಆದುದರಿಂದ ಆತನ ಹೆಂಡತಿ ಜೋರಾಗಿ ಸ್ಪಷ್ಟವಾಗಿಯೇ ಹೇಳಿದ್ದಳು—'ತಾವು ಅಗ್ನಿಸಂಸ್ಕಾರ ಮಾಡಬೇಡಿ, ತಲೆ ಬೋಳಿಸಿಕೊಳ್ಳಬೇಕಾಗುತ್ತದೆ. ಹಾಗಾದರೆ ಮದುವೆಗೆ ಹೇಗೆ ಹೋಗುವುದು?' ಚಿಕ್ಕವನು ಕೂಡ ತನ್ನ ಅಸಮರ್ಥತೆಯನ್ನು ವ್ಯಕ್ತಪಡಿಸಿದ. "ಅಣ್ಣ, ನನ್ನ ಮುಖ ತೆಳ್ಳಗಿದೆ, ತಲೆ ಬೋಳಿಸಿಕೊಳ್ಳುವುದರಿಂದ ಕುರೂಪವಾಗಿ ಕಾಣುತ್ತದೆ. ನಾನು ಕಚೇರಿಗೆ ಬೇರೆ ಹೋಗಬೇಕು. ಎಲ್ಲ ನೌಕರರೂ ನನ್ನ ರೂಪವನ್ನು ಕಂಡು ಹಾಸ್ಯ ಮಾಡುವರು. ಅಲ್ಲದೆ ಹದಿಮೂರು ದಿನಗಳು 'ಕ್ರಿಯಾ ಸಂಸ್ಕಾರ'ಗಳಿಗಾಗಿ ಇಲ್ಲಿ ಕುಳಿತಿರುವುದೂ ಸಾಧ್ಯವಿಲ್ಲ. ನೀವೇ....'ಇದ್ದಕ್ಕಿದ್ದಂತೆ ಗಂಟಲು ಕಟ್ಟಿದಂತಾಯಿತು. ನಂತರ ತಡೆದು ತಡೆದು ತನ್ನ ಅಭಿಪ್ರಾಯವನ್ನು ತಿಳಿಸುವ ಪ್ರಯತ್ನ ಮಾಡತೊಡಗಿದ.

ಹೌದು ಹೌದು, ಏಕಿಲ್ಲ, ತಲೆ ಬೋಳಿಸಿಕೊಳ್ಳುವುದಕ್ಕೆ ಅವರು ಕೇವಲ ನನ್ನ ತಂದೆ ಮಾತ್ರ ಆಗಿದ್ದರು? ನನಗೆ ಕಚೇರಿಯಲ್ಲಿ ರಜೆಗಳ ಮೇಲೆ ರಜೆಗಳು ಸಿಕ್ಕಿಬಿಡುತ್ತವೆ. ನನ್ನ ಮುಖ ಕೆಟ್ಟದಾಗಿ ಕುರೂಪವಾಗಿ ಕಾಣುವುದಿಲ್ಲ! ಅರೆ, ನಿರ್ಲಜ್ಜರೆ, ಆಸ್ತಿಗೆ ನಿಮ್ಮ ಅಪ್ಪ....ಯಾವ ತಂದೆಯ ಆಶ್ರಯದಲ್ಲಿ ಇದ್ದುಕೊಂಡು ಇಂದು ಈ ಯೋಗ್ಯತೆಯನ್ನು ಪಡೆದಿದ್ದೀರಿ ಅವರಿಗೆ ಕೊನೆಯ ಕಾಣಿಕೆಯಾಗಿ ಕೂದಲನ್ನು ಕೊಡಲಾರಿರಾ? ಇದಕ್ಕಾಗಿ ನಿಮಗೆ ಯಾವ ಖರ್ಚೂ ತಗಲುವುದಿಲ್ಲ. ನಾನು ನಿಮ್ಮಿಬ್ಬರ ಪರವಾಗಿ ಕೂದಲನ್ನು ಕೊಟ್ಟುಬಿಡುವೆ. ನನ್ನ ದೇಹದ ರೋಮ ರೋಮವೂ ತಂದೆಗೆ ಋಣಿಯಾಗಿದೆ ನನ್ನ ಮುಗ್ಧ ತಮ್ಮಂದಿರೇ, ಕಾಲಪ್ರವಾಹದಿಂದ ಎಂದು ನಿಮ್ಮನ್ನು ರಕ್ಷಿಸಿಕೊಳ್ಳುವಿರಿ? 'ಇಂದು' ತಂದೆಯವರು ಎಲ್ಲಿದ್ದರು 'ನಾಳೆ' ನೀವು ಬರುತ್ತೀರಿ, ಅದು ನಿಯತಿಯ ಚಕ್ರ. ಅದು ನಿರಂತರವಾಗಿ ತನ್ನ ಅಕ್ಷದ ಮೇಲೆ ಸುತ್ತುತ್ತಿದೆ. ನಾನು ಮನಸ್ಸಿನಲ್ಲಿಯೇ ಗುನುಗಿ ಸುಮ್ಮನಾದೆ. ಗುಂಪಿನಲ್ಲಿ ಚರ್ಚೆ ಮಾಡಿ ಕುಟುಂಬದ ಗೌರವವನ್ನು ಮಣ್ಣುಪಾಲು ಮಾಡಲು ಇಷ್ಟವಿರಲಿಲ್ಲ.

'ಮೂರನೆಯ' ದಿನದ ಕಾರ್ಯವನ್ನು ಮುಗಿಸಿಕೊಂಡು ನಾಳೆ ಇಬ್ಬರು ತಮ್ಮಂದಿರೂ ಹೋಗುತ್ತಿದ್ದಾರೆ. ಅದ್ದರಿಂದಲೇ ಸಾಮಾನು ಮತ್ತು ಮನೆಯ ಹಂಚಿಕೆಯ ತರಾತುರಿ ನಡೆದಿದೆ. ನನ್ನ ಮತ್ತು ತಾಯಿಯ ಜೋಕೆಗಾಗಿ ಹೆಂಡತಿಯರನ್ನು ಬಿಟ್ಟು ಹೋಗುತ್ತಾರೆ.

ಬೀದಿಯಿಂದ ಯಾರೋ ಜೋರಾಗಿ ಅಳುವ ಸ್ವರ ಕೇಳಿಸಿತು. ಬಹುಶಃ ಕನೂದೀದಿ ಅಕ್ಕ ಇರಬೇಕು. ತಂದೆಯವರ ಅಂತಿಮ ದರ್ಶನಕ್ಕೆ ಅವಳು

ಬದಲಾಗಿರಲಿಲ್ಲ. ತಂದೆಯವರ ಪ್ರೀತಿಯ ಪುತ್ರಿ. ತಂದೆಯವರು ತನ್ನ ಸ್ನೇಹಿತನ ಪುತ್ರಿಯನ್ನು ದತ್ತು ತೆಗೆದುಕೊಂಡು ಲಾಲನೆ-ಪಾಲನೆ-ಮದುವೆ ಎಲ್ಲವನ್ನೂ ತನ್ನ ಸ್ವಂತ ಮಗಳಿಗೆ ಮಾಡುವಂತೆ ಮಾಡಿದ್ದರು. ನಮ್ಮೆಲ್ಲರ ಅಕ್ಕ. ಅಕ್ಕನಂತೆಯೇ ತನ್ನೆಲ್ಲ ಪ್ರೇಮವನ್ನು ಸುರಿಸುವವಳು. ಅಕ್ಕನಿಗೂ ಅಮ್ಮ-ಅಪ್ಪ ಇವರ ಮೇಲೆ ಅಸೀಮ ಪ್ರೀತಿ ಇದೆ. ತಂತಿ ಸಿಗುತ್ತಲೆ ಏರ್-ಪ್ಲೇನ್‌ನಲ್ಲೇ ಬಂದಿದ್ದಾಳೆ.

ಅಕ್ಕ ಮದರಾಸಿಗೆ ಹೋದಾಗ ಕಾಯಿಲೆಯ ತಂದೆ ಹೇಳಿದ್ದರು—' ಇಷು ದೂರ ಹೋಗುತ್ತಿದ್ದೀಯೆ, ನಿನ್ನ ತಂದೆ ಸತ್ತುಹೋದರೆ ನಿನಗೆ ನೋಡುವುದಕ್ಕೆ ಮಣ್ಣೂ ಸಿಗುವುದಿಲ್ಲ' ಎಂದು. ಅಕ್ಕ ತಂದೆಯವರನ್ನು ಅಪ್ಪಿಕೊಂಡು ಚೆನ್ನಾಗಿ ಅತ್ತಿದ್ದಳು.' ಅಪ್ಪಾಜಿ, ಈಗ ಹಾಗೆ ಹೇಳಬೇಡ. ನಾನು ನನ್ನ ಅಪ್ಪಾಜಿಯನ್ನು ಇಷ್ಟು ಬೇಗ ಸಾಯಲು ಬಿಡುವುದಿಲ್ಲ. ನಿಮ್ಮ ಮಗಳಿಗೆ ಇಂಥ ಮಾತುಗಳನ್ನು ಹೇಳಿ ಹೇಳಿ ಏಕೆ ಅಳಿಸುತ್ತೀರಿ? ಒಂದು ನಿಮ್ಮನ್ನು ಬಿಟ್ಟರೆ ನನಗೆ ಈ ಪ್ರಪಂಚದಲ್ಲಿ ಬೇರೆ ಯಾರಿದ್ದಾರೆ? ಅಕ್ಕನ ಕಣ್ಣೀರೋ ನಿಲ್ಲುತ್ತಲೇ ಇರಲಿಲ್ಲ.

ಅಕ್ಕ ಮದರಾಸಿಗೆ ಹೋದ ಒಂದು ತಿಂಗಳ ನಂತರ ಈಶ್ವರನು ತಂದೆಯವರನ್ನು ಎತ್ತಿಕೊಂಡ ಅಕ್ಕ ಮತ್ತೊಮ್ಮೆ ತಂದೆ ಇಲ್ಲದವಳಾದಳು.

ಕಮಲಾ ಅಕ್ಕ ಮನೆಯನ್ನು ಪ್ರವೇಶಿಸುತ್ತಿದ್ದಂತೆಯೆ ಇಬ್ಬರು ಸೊಸೆಯಂದಿರೂ ಕುಶಲ ಕಲಾಕಾರನಂತೆ ಕೈಯಲ್ಲಿದ್ದ ಕೆಲಸವನ್ನು ಬಿಟ್ಟು ತಲೆಯ ಮೇಲೆ ಸೆರಗನ್ನು ಹೊದ್ದುಕೊಂಡು ತಾಯಿಯ ಹತ್ತಿರ ಹೋಗಿ ಅಳಲು ಪ್ರಾರಂಭಿಸಿದರು. ತಾಯಿ ತನ್ನ ಮಗಳನ್ನು ಅಪ್ಪಿಕೊಂಡು ಮತ್ತೊಮ್ಮೆ ಜೋರಾಗಿ ಅಳಲಾರಂಭಿಸಿದಳು. ಮನಸ್ಸಿನಲ್ಲಿ ತಡೆದಿದ್ದ ದುಃಖದ ಆವೇಗ ಬಂಧನವನ್ನು ಮುರಿದು ಕೋಡಿವರಿದು ಹರಿಯಲಾರಂಭಿಸಿತು. ನಾನು ಈ ತಾಯಿ-ಮಗಳ ಕರುಣಾಮಯವಾದ, ಹೃದಯವನ್ನು ಸೀಳುವ ವಿಲಾಪವನ್ನು ನೋಡಿ ನಾನು ನನ್ನನ್ನು ತಡೆದುಕೊಳ್ಳಲಾಗಲಿಲ್ಲ. ನನ್ನ ತಡೆಹಿಡಿದಿದ್ದ ಕಣ್ಣೀರು ಬಿಕ್ಕಳಿಸುತ್ತ ಹರಿಯಲಾರಂಭಿಸಿತು. ಆ ಕಣ್ಣೀರಿನ ಧಾರೆಯಲ್ಲಿ ಅನೇಕ ಚಿತ್ರಗಳು ತೇಲುತ್ತಿದ್ದವು. ತಂದೆಯ ಅಗಲಿಕೆ, ತಮ್ಮಂದಿರ ವ್ಯವಹಾರ, ಇವೆಲ್ಲಕ್ಕಿಂತ ಬೇಕಾದ ಚಿತ್ರವೊಂದು ನನ್ನ ಹೃದಯದಲ್ಲಿತ್ತು-ಅವಳಿಗಾಗಿ ನಾನು ಜೀವನದ ಏಕಾಂತದಲ್ಲಿ ಅನೇಕ ಬಾರಿ ಮೌನವಾಗಿ ಕಣ್ಣೀರು ಸುರಿಸಿದ್ದೇನೆ—ನನ್ನ ಕಮಲೆಗಾಗಿ.

ಕಮಲೆಯ ಮೃತ್ಯು ನನ್ನನ್ನು ನಡುಗಿಸಿಬಿಟ್ಟಿತ್ತು. ನನ್ನ ಮನೆ-ಸಂಸಾರ ಚೂರು ಚೂರಾಯಿತು. ಅನಂತರ ಕೆಸರಿನಲ್ಲಿರುವ ಒಂಟಿ ಮೋಟು ಮರದಂತೆ

ಏಕಾಂಗಿಯಾಗಿ ನಿಂತುಬಿಟ್ಟಿದ್ದೆ. ನನ್ನ ಮುಂದೆ ಎಲ್ಲ ತೊಡಕಿನ ಸಮಸ್ಯೆಗಳಿದ್ದವು. ಯಾರೂ ಮುಂದೆ ಮುರಿದು ಬೀಳುತ್ತಿದ್ದ ನನ್ನನ್ನು ಸ್ವೀಕರಿಸಲಿಲ್ಲ. ಕಮಲೆಯ ಬಗ್ಗೆ ಪ್ರಾಯಶ್ಚಿತ್ತದ ಕಟ್ಟಳೆಯಲ್ಲಿ ಇಂದಿನ ತನಕ ಬದುಕಿದ್ದೇನೆ.

ನನ್ನ ಕಮಲೆಯಲ್ಲಿ, ಈ ನನ್ನ ತಮ್ಮಂದಿರ ಪತ್ನಿಯರೆಲ್ಲ! ನಾನು ಕಮಲೆಯನ್ನು ವೃದ್ಧ ತಂದೆ–ತಾಯಿಯರ ಸೇವೆಯಲ್ಲಿ ಸಮರ್ಪಿಸಿಬಿಟ್ಟಿದ್ದೆ. ಅವಳನ್ನು ನಾನು ಎಂದೂ ನನ್ನ ನೌಕರಿಯ ಜೊತೆಯಲ್ಲಿ ಕರೆದುಕೊಂಡು ಹೋಗಲಿಲ್ಲ. ಆಕೆ ಎಂದಾದರೂ ಜೊತೆಯಲ್ಲಿರಲು ಹೇಳಿದರೆ ಕೂಡಲೇ ಅವಳನ್ನು ಸಮಾಧಾನ ಮಾಡುತ್ತಿದ್ದೆ. ಅವಳಿಗೆ ನಾನು ಸದಾ ಕರ್ತವ್ಯಪಾಲನೆಯನ್ನು ಕಲಿಸಿದೆ. ಅವಳ ಯೋಗ್ಯ ಅಧಿಕಾರಗಳನ್ನು ಅನಾಧಿಕಾರದ ಪ್ರಯತ್ನವೆಂದು ಹೇಳುತ್ತಿದ್ದೆ. ಒಂದು ಆಳವಾದ ಮೌನವನ್ನು ತಳೆದು ಕರ್ತವ್ಯ ಪರಾಯಣೆಯಾಗಿಬಿಡುತ್ತಿದ್ದಳು. ಎಂದೂ ಪ್ರತೀಕಾರವನ್ನು ಮಾಡಲಿಲ್ಲ. ನಾನು ಅವಳ ಮುಗ್ಧ ಉತ್ಸಾಹಗಳನ್ನು ಎಂದೂ ಗಮನಿಸಲೇ ಇಲ್ಲ.

ಇಂದು ನನ್ನ ತಾಯಿಯಿಲ್ಲದ ಮಕ್ಕಳು ನನ್ನಿಂದ ತಮ್ಮ ತಾಯಿಯನ್ನು ಕೇಳುತ್ತಾರೆ. ಅವರ ಶೂನ್ಯವಾದ ಕಣ್ಣುಗಳಲ್ಲಿ ಜ್ವಲಂತವಾದ ಪ್ರಶ್ನೆ ತೇಲುತ್ತದೆ. 'ನೀನು ನಮ್ಮ ತಾಯಿಯನ್ನು ಉಸಿರು ಕಟ್ಟಿ ಸಾಯುವಂತೆ ಬಲಾತ್ಕರಿಸಿದೆ. ನೀನು ನಮ್ಮಿಂದ ನಮ್ಮ ತಾಯಿಯನ್ನು ತನ್ನ ಸ್ವಾರ್ಥಕ್ಕಾಗಿ ಅಕಾಲದಲ್ಲಿ ದೂರ ಮಾಡಿದೆ. ನಮ್ಮ ತಾಯಿಯನ್ನು ಹಿಂತಿರುಗಿ ಕೊಡು.' ನಾನು ನಿರುತ್ತರನಾಗುತ್ತೇನೆ.

ನನ್ನ ಹಿರಿಯ ಮಗ ಕೇಳುತ್ತಾನೆ, 'ತಂದೆ-ತಾಯಿಗಳ ಸೇವೆಯ ಬದಲಿಗೆ ನಿಮಗೆ ಸಿಕ್ಕಿದ್ದೇನು-ಆತ್ಮ ಸಂತೋಷ ಅಥವಾ ತಮ್ಮಂದಿರಿಂದ ಉಪೇಕ್ಷೆ, ಒಂದು ಪರಿಮಾಣದ ಬಡತನ, ದೀರ್ಘವಾದ ಏಕಾಂತ ಜೀವನದ ಪ್ರಯಾಣ ಮತ್ತು ನಮಗೆ.... ಇಬ್ಬರು ಚಿಕ್ಕಪ್ಪಂದಿರನ್ನು ನೋಡು. ಎಷ್ಟೊಂದು ಸಂತೋಷದಲ್ಲಿದ್ದಾರೆ. ಪ್ರಮೋಷನ್ ಕೂಡ ಸಿಕ್ಕಿದೆ. ನೀವೂ ಇದ್ದೀರಿ, ಬಂದ ಪ್ರಮೋಷನ್ ನನ್ನು ಬಿಟ್ಟುಕೊಟ್ಟಿರಿ, ಏಕೆ, ? ವೃದ್ಧ ತಂದೆ-ತಾಯಿಗಳ ಸೇವೆಯಿಂದ ದೂರ ಹೋಗಿಬಿಡುತ್ತೇನೆ. ಇವರನ್ನು ನೋಡಿಕೊಳ್ಳುವವರಾರು ? ಎಂದು. ತಮ್ಮಂದಿರಂತೆ ನಿಮ್ಮಿಂದ ಹೃದಯಹೀನರಾಗಲಿಲ್ಲ....'. ಎಂದು ಹುಚ್ಚು ತುಂಬಿದ ಸ್ವರದಲ್ಲಿ ನೆಲೆ ನಿಂತಿರುವ ವಂಶದ ಆವೇಶ ಮಾತನಾಡುತ್ತದೆ!

ಹೊಸ ಪೀಳಿಗೆ ಇಷ್ಟೊಂದು ಬುದ್ಧಿಶಾಲಿಯಾಗಿಬಿಟ್ಟಿದೆಯೆ, ಎಲ್ಲವನ್ನೂ ಲಾಭ-ನಷ್ಟದ ದೃಷ್ಟಿಯಲ್ಲಿಯೇ ಅಳೆಯುತ್ತದೆಯೆ, ನಾನು ಕೂಡ ಒಂದು ದಿನ

ಈ ಲಾಭ-ನಷ್ಟದ ತಕ್ಕಡಿಯಲ್ಲಿ ತೂಗಲ್ಪಡುತ್ತೇನೆಯೆ? ಏನು ಇವನು ನನ್ನನ್ನ....

ಅಕ್ಕ ನನ್ನ ಹೆಗಲ ಮೇಲೆ ಕೈಯನ್ನಿಟ್ಟಳು. ನಾನು ಬೆಚ್ಚಿಬಿದ್ದೆ, ಅವಳನ್ನು ಅಪ್ಪಿಕೊಂಡು ಅತ್ತುಬಿಟ್ಟೆ. 'ಅಕ್ಕಾ, ತಂದೆ ಏಕೆ ಸತ್ತುಹೋದರು? ನನ್ನ ಜೀವನದಲ್ಲಿ ಈ ಮೊದಲೇ ಕತ್ತಲೆಯೇ ತುಂಬಿತ್ತು, ಮತ್ತಷ್ಟು ದುಃಖವನ್ನು ಏಕೆ ಕೊಟ್ಟುಹೋದರು? ತಂದೆ ಇಲ್ಲದಿರುವುದು ನನಗೆ ಕಷ್ಟವೇ ಆಗುತ್ತಿರುತ್ತದೆ. ತಾಯಿಯ ಕಳಾಹೀನ ಗಂಭೀರ ಮುಖವನ್ನು ನೋಡಿಕೊಂಡು ಹೇಗೆ ಬದುಕಲಿ? ಈ ತಮ್ಮಂದಿರು ಇನ್ನು ನನ್ನನ್ನು ಶಾಂತಿಯಿಂದಿರಲು ಬಿಡುವುದಿಲ್ಲ. ತಂದೆಯವರ ಆಸ್ತಿಯನ್ನೆಲ್ಲ ಕಬಳಿಸಿದರು, ಜೀವನವಿಡೀ ಜಿಗಣೆಯಂತೆ ಅಂಟಿಕೊಂಡಿದ್ದರು, ಲೂಟಿ ಮಾಡುತ್ತಿದ್ದರು, ನಮಗೆ ಸಿಕ್ಕಿದ್ದೇನು! ಮೂಲ ಆಸ್ತಿಯನ್ನು ಮೊದಲೇ ಸೆಳೆದುಕೊಂಡರು, ಇಂಥ ಎಷ್ಟು ವಿಷ ತುಂಬಿದ ಬೈಗಳನ್ನು ಕೇಳಬೇಕಾಗುವುದೊ! ಅಕ್ಕ ನಿನಗೆ ಗೊತ್ತು. ನಾನು ನಿಸ್ವಾರ್ಥ ಭಾವದಿಂದ ಸೇವೆಯನ್ನು ಕರ್ತವ್ಯವೆಂದು ಭಾವಿಸಿ ಮಾಡಿದ್ದೇನೆ. ನೀನಾದರೂ ನನ್ನನ್ನು ತಪ್ಪು ತಿಳಿದುಕೊಳ್ಳುವುದಿಲ್ಲ ತಾನೆ?' ಅಕ್ಕನ ತಂಪಾದ ಕೈಗಳು ನನ್ನನ್ನು ಸಾಂತ್ವನಗೊಳಿಸಿದುದರಿಂದ ಸಂತಪ್ತ ಮನಸ್ಸಿಗೆ ಶಾಂತಿ ದೊರಕಿತು. ಒಂದು ಸ್ಫೂರ್ತಿ ಉಂಟಾಯಿತು. ನಂತರ ತೇಜೋಹೀನ ಮುಖದ ತಾಯಿಯ ನೆನಪಾಯಿತು. ಅವಳಿಗೆ ಯಾರೂ ಇಲ್ಲ, ನನ್ನ ಹೊರತು, ಅವಳಂತೂ ಸಂಪೂರ್ಣವಾಗಿ ಒಡೆದ ಹೃದಯಿಯಾಗಿದ್ದಾಳೆ ತಂದೆಯ ನಂತರ.

ಇಂದು ಅಂತಿಮ ಸಂಸ್ಕಾರವೂ ಮುಕ್ತಾಯವಾಯಿತು. ಎಲ್ಲರೂ ತಮ್ಮ ತಮ್ಮ ಮನೆಗೆ ಹಿಂತಿರುಗಿದರು. ಮನೆಯಲ್ಲಿ ಅಕ್ಕನಿದ್ದಾಳೆ. ಅವಳ ಎದುರಿನಲ್ಲಿಯೇ ಹಂಚಿಕೆ ನಡೆಯುತ್ತಿದೆ. ನಾನು ಈಗಲೂ ತಟಸ್ಥನಾಗಿದ್ದೇನೆ. ಅಸಮರ್ಥನಾಗಿ, ಈ ತಮ್ಮಂದಿರ ಕೆಲಸಗಳಿಂದ ಸುಲಿಯಲ್ಪಟ್ಟ ಕ್ಷತವಿಕ್ಷತಳಾದ ತಾಯಿಯನ್ನು ನೋಡುತ್ತಿದ್ದೇನೆ.

ಚಿಕ್ಕವನು 'ಅಣ್ಣಾ, ಇದು ನಿನ್ನ ಭಾಗ,' ಎಂದು ನನಗೆ ಹೇಳಿ ಸಾಮಾನಿನ ಪಟ್ಟಿಯನ್ನು ಕೈಯಲ್ಲಿ ತುರುಕುತ್ತ ಹೇಳಿದ್ದ. 'ಎರಡು ಪೆಟ್ಟಿಗೆ, ಒಂದು ಅಲಮಾರು, ಒಂದು ಪಿಪಾಯಿ, ನಾಲ್ಕು ಮಂಚಗಳು, ಎರಡು ಕಂಬಳಿ, ಚಿಕ್ಕ ಹದಿಮೂರು ಪಾತ್ರೆಗಳು, ಎರಡು ದೊಡ್ಡ ಕಲಶಗಳು, ಒಂದು ದೊಡ್ಡ ಮಣೆ. ಎರಡು ಕಬ್ಬಿಣದ ಬಾಂಡ್ಲಿಗಳು....' ಪಟ್ಟಿಯನ್ನು ನೋಡುತ್ತಿದ್ದಂತೆ ಇವರ ಮೂರ್ಖತೆಯನ್ನು ಕಂಡು ಬಲವಂತವಾಗಿ ನಗು ಬಂತು.

'ಮನೆಯನ್ನು ಮಾರಿಬಿಟ್ಟು ಮೂರುಜನ ಸೋದರರೂ ಹಣವನ್ನು ಹಂಚಿಕೊಳ್ಳೋಣ' ಇದು ಮಧ್ಯಮನ ಶಬ್ದವಾಗಿತ್ತು.

ಈ ಮನೆಯ ನವೀಕರಣಕ್ಕಾಗಿ ಎರಡು ಸಾರಿ ನನ್ನ ಫಂಡಿನಿಂದ ಸಾಲ ತೆಗೆದುಕೊಂಡಿದ್ದೇನೆ, ಅದಕ್ಕಾಗಿ ಇನ್ನು ಪ್ರತಿ ತಿಂಗಳೂ ನನ್ನ ಸಂಬಳದಿಂದ ಹಣವನ್ನು ಹಿಡಿದುಕೊಳ್ಳುತ್ತಿದ್ದಾರೆ ಎಂಬುದು ಇವರಿಗೇನು ಗೊತ್ತು.

'ರವಿ, ಈ ಹಂಚಿಕೆ ನಿನಗೆ ಸಂತೋಷವನ್ನುಂಟು ಮಾಡಿದೆಯೆ?' ಅಕ್ಕ ನನಗೆ ಪ್ರಶ್ನೆ ಹಾಕಿದಳು.

'ಇಲ್ಲ' ನನ್ನ ಉತ್ತರವನ್ನು ಕೇಳಿ ಅಲ್ಲಿ ನೆರೆದಿದ್ದವರೆಲ್ಲ ಬೆಚ್ಚಿಬಿದ್ದರು.

'ಏಕೆ? ನಾವು ಎಲ್ಲವನ್ನು ಸರಿಯಾಗಿ ಕಾನೂನಿನ ಪ್ರಕಾರ ಮಾಡಿದ್ದೇವೆ? ಇಬ್ಬರು ಸೋದರರ ಜೊತೆಯಲ್ಲಿ ಸೊಸೆಯಂದಿರೂ ಮಾತನಾಡಿದ್ದರು.

ನೀವೆಲ್ಲರೂ ಇನ್ನೊಂದು ವಸ್ತುವಿನ ಹಂಚಿಕೆ ಮಾಡಿಲ್ಲ. ಅದು ಎಲ್ಲಕ್ಕಿಂತ ಬೆಲೆ ಬಾಳತಕ್ಕದ್ದು, ಈ ಸಾಮಾನಿಗಿಂತ, ಈ ಮನೆಗಿಂತ ಹೆಚ್ಚು ಬೆಲೆ ಬಾಳುವಂಥದು. ಅದು ಲಕ್ಷಾಂತರ ರೂಪಾಯಿಗಳ ರತ್ನ, ಅದನ್ನು ತಂದೆಯವರು ಬಿಟ್ಟುಹೋಗಿದ್ದಾರೆ. ಅದನ್ನು ಹಂಚುವುದಿಲ್ಲವೆ? 'ನಾನು ನನ್ನ ಲಿಸ್ಟನ್ನು ಹರಿಯುತ್ತ ಹೇಳಿದೆ.

ಎಲ್ಲಿದೆ ಆ ಅಮೂಲ್ಯವಾದ ಖಜಾನೆ? ಮೊದಲು ಏಕೆ ಹೇಳಲಿಲ್ಲ?'

ನೋಡು ಅಲ್ಲಿದೆ ಅದನ್ನು ಮೂರು ಚೂರುಗಳನ್ನಾಗಿ ಮಾಡಿಕೊಂಡು ಬಿಟ್ಟಿದ್ದರೆ! 'ನಾನು ಮೂಲೆಯಲ್ಲಿ ನಿರಾಶಳಾಗಿ ಹತಾಶೆಯಲ್ಲಿ ಮುಳುಗಿರುವ ತಾಯಿಯ ಕಡೆ ಸಂಕೇತ ಮಾಡುತ್ತ ಹೇಳಿದೆ.

ಬಿ. ಸಂ. ಚಂದ್ರಯ್ಯ

ಒಳ್ಳೆಯದನ್ನು ಮಾಡುವ ಇಷ್ಟವಿದ್ದರೆ ಈಗಲೇ ಮಾಡು; ಕೆಟ್ಟದ್ದಾದರೆ ನಿದಾನಿಸು ಹಾಗೂ ಯೋಚಿಸು.

—ಈಸೋಪ್

ಜನತೆಯ ಹಿತಕ್ಕಾಗಿ, ಅನುಭವದ ಆಧಾರದಿಂದ ಮಾನವನ ಬುದ್ಧಿವಂತಿಕೆ ರೂಪಿಸುವುದೇ ಶಾಸನ.

—ಜಾನ್‌ಸನ್

ಮಲೇಶ್ಯಾದಲ್ಲಿ ಭೂರಹಿತರಿಗೆ ಭೂಮಿ

ಸಾವಿರದೊಂಭೈನೂರ ಎಪ್ಪತ್ತರಲ್ಲಿ ಮುಹಮ್ಮದ್ ಜಾರ್ಜಿಸ್ ಬಿನ್ ಅಜಾನ್ ತನ್ನ ಜೀವನವನ್ನೇ ಪಣವೊಡ್ಡಿದ! 'ಮಲಕ್ಕಾ'ದ ಬಳಿಯ ಪ್ರಸಿದ್ಧ ಪಟ್ಟಣ ಒಂದರ ಮೆಟ್ಟಿಲಲ್ಲಿದ್ದ ತನ್ನ ಸಂಸಾರವನ್ನು ಇದುವರೆಗೆ ಮನುಜಸ್ಪರ್ಶವಾಗದಿದ್ದಂಥ ನಿಬಿಡವಾದ ಅರಣ್ಯಪ್ರಾಂತದ ತಡಿಗೆ ವಿಶಾಲ, ಜನವಿಹೀನ ಪ್ರದೇಶಕ್ಕೆ ಕರೆತಂದ. ಅದು 'ಮಲಯಾ' ಪರ್ಯಾಯದ್ವೀಪದ ಮಧ್ಯಭಾಗ. ಬುಲ್‌ಡೋಜರಿನಿಂದ ನೆಲವನ್ನು ಉತ್ತು ಸಮತಟ್ಟುಗೊಳಿಸಲಾಗಿತ್ತು. ಅಲ್ಲಿಗೆ ಬಂದ ಮೊದಲ ದಿನ ತನ್ನ ಮನೆಯನ್ನು ಸುತ್ತುವರಿದಿದ್ದ ಕಾಡನ್ನು ಕಂಡು "ಬೆದರಿ ಹೋಗಿದ್ದೆ"ನೆಂದು ಹಳೆಯ ದಿನಗಳನ್ನು ನೆನಪಿಸಿಕೊಳ್ಳುತ್ತಾ ಜಾರ್ಜಿಸ್ ಹೇಳುತ್ತಾನೆ—"ಆದರೆ ತಿಂಗಳು ಕಳೆವಷ್ಟರಲ್ಲಿ ನನ್ನಲ್ಲಿ ಆತ್ಮವಿಶ್ವಾಸ ಮೊಳೆಯತೊಡಗಿತು. ಇಲ್ಲಿ ನನ್ನ ಮಕ್ಕಳಿಗೆ ಹೊಸ ಭರವಸೆ, ಹೊಸ ಆಯಾಮ ಒದಗಬರುವುದರಲ್ಲಿ ಸಂದೇಹವಿಲ್ಲವೆಂದು ಖಚಿತವಾಯಿತು."

ಅವನ ಹಳೆಯ ಜೀವನ ಒಂದು ಪರಿಮಿತಿಯೊಳಗೆ ಸುರಕ್ಷಿತವೇನೋ ಆಗಿತ್ತು. ಆದರೆ ಭವಿಷ್ಯದಲ್ಲಿ ಸುಖಸಮೃದ್ಧಿಯ ಆಶಾಕಿರಣವಾವುದೂ ಇರಲಿಲ್ಲ. ಒಂದು ಚಲಚ್ಚಿತ್ರ ಯಂತ್ರದ ಚಾಲಕನಾಗಿದ್ದ ಆತನಿಗೆ ತಿಂಗಳಿಗೆ ಬರೀ ೩೬೦ ರೂಪಾಯಿ ಸಿಕ್ಕುತ್ತಿತ್ತು. ಅವನ ಎಂಟು ಜನರ ಸಂಸಾರಕ್ಕೆ ಅದು ಸಾಕಾಗುತ್ತಿರಲಿಲ್ಲ. ಸ್ವಂತ ಮನೆಯನ್ನು ಹೊಂದುವುದಂತೂ ಕನಸಿನ ಗಂಟಾಗಿತ್ತು. ಹೆಚ್ಚಿನ ವರಮಾನವಿರುವ ಉದ್ಯೋಗಕ್ಕೂ ಅವಕಾಶವಿರಲಿಲ್ಲ. ಹೀಗಾಗಿ ಜಾರ್ಜಿಸ್ ಮಲೇಶ್ಯಾದ 'ಫೆಡರಲ್ ಲ್ಯಾಂಡ್ ಡೆವಲಪ್‌ಮೆಂಟ್ ಅಥೋರಿಟಿ' ಎಂದರೆ FELDA — "ಸಂಯುಕ್ತ ಸ್ವಾಯತ್ತ ಭೂಅಭಿವೃದ್ಧಿ ನಿಗಮ"—ಇದರ ಒಂದು ಯೋಜನೆಯ ಅನ್ವಯ ಇತರ ನೂರಾರು ಮಲಯವಾಸಿಗಳ ಜತೆ ಸೇರಿ "ಪ್ರಥಮಜೆಂಕಾ"ವನ್ನು ರೂಪುಗೊಳಿಸುವ ಮಹತ್ಕಾರ್ಯದಲ್ಲಿ ಪಾಲ್ಗೊಂಡ.

ಈ "ಜೆಂಕಾ ತ್ರಿಕೋಣ"ದಲ್ಲಿ ಇಪ್ಪತ್ತೊಂದು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಹಿಂದಿನ ಉಪಪ್ರಧಾನಿ ಟುನ್. ಡಾ. ಇಸ್ಮಾಯಿಲ್ ಮತ್ತು ದಿವಂಗತ ಪ್ರಧಾನಿ ಟುನ್ ಅಬ್ದುಲ್ ರಜಾಕ್‌ರ ಬೌದ್ಧಿಕ ಶಿಶುವಾಗಿತ್ತು—ಈ

ರೀಡರ್ಸ್ ಡೈಜೆಸ್ಟ್ ೧೯೭೪ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಲ್ಯಾಂಡ್ ಫಾರ್ ಲ್ಯಾಂಡ್‌ಲೆಸ್ ಇನ್ ಮಲೇಶಿಯಾ' ಲೇಖನದ ಅನುವಾದ.

ಫೆಲ್ಡ್ಡಾಸಂಸ್ಥೆ. ೧೯೫೬ರಲ್ಲಿ ಫೆಲ್ಡ್ಡಾ ಜನ್ಮ ತಾಳಿತು. ಭವಿಷ್ಯ ದ್ರಷ್ಟಾರರಾದ ಇಬ್ಬರು ಪ್ರಧಾನಿಗಳು ಜನನಿಬಿಡಪ್ರದೇಶಗಳಲ್ಲಿ, ಮನೆಮಠವಿಲ್ಲದೆ ಕಂಗಾಲಾದ ಜನರಿಗಾಗಿ, ವನ್ಯಪ್ರದೇಶಗಳನ್ನು ಕಡಿದು, ಕೆತ್ತಿ, ಉತ್ತು ಸರಿಪಡಿಸಿ ಕೃಷಿ ಭೂಮಿಯನ್ನಾಗಿಸುವ ಕನಸು ಕಂಡರು. ಅದಕ್ಕಾಗಿ ಸುಸಂಬದ್ಧ ಯೋಜನೆ ಗಳನ್ನು ಹಾಕಿಕೊಂಡರು. ಅವು ದೇಶದ ಆದಾಯವನ್ನು ಹೆಚ್ಚಿಸುವುದು ಮಾತ್ರವೇ ಅಲ್ಲ; ದೇಶದ ನಿಸರ್ಗದತ್ತ ಸಂಪನ್ಮೂಲಗಳ ಸದುಪಯೋಗ ಪಡೆ ಯುವ, ನಿರ್ಗತಿಕ ನಗರವಾಸಿಗಳನ್ನು ಮೇಲೆತ್ತುವ, ಮಾನವಶಕ್ತಿಯ ಸಂಪೂರ್ಣ ವಿಕಾಸದ ಮಹತ್ವಾಕಾಂಕ್ಷೆಯುಳ್ಳ ಬೃಹತ್ ವಿಧಾನಗಳಾಗಿದ್ದುವು.

* * *

‘ಫೆಲ್ಡ್ಡಾ’ ಮೊತ್ತಮೊದಲಿಗೆ ಏನುಮಾಡುವುದೆಂದರೆ—ಮಲೇಶ್ಯಾದ ವಿವಿಧ ಪ್ರಾಂತ್ಯಗಳಿಂದ ಮಾನವ ಸ್ಪರ್ಶವಾಗದಂಥ ಭೂಭಾಗವನ್ನು ‘ಕಾಲಕ್ರಮೇಣ ಕಂದಾಯ ತೆರುವ ಶರತ್ತಿನ ಮೇಲೆ’—ಪಡೆದುಕೊಳ್ಳುತ್ತದೆ. ಪ್ರತಿ ಭೂಪ್ರದೇಶ ವನ್ನು ನಿಖರವಾಗಿ ಅಳೆದು, ಮಣ್ಣಿನ ಕಣಕಣವನ್ನೂ ಪರೀಕ್ಷಿಸಿ, ಅದರ ಗುಣ ಮಟ್ಟವನ್ನು ನಿರ್ಧರಿಸಿ ಎಲ್ಲಿ ಯಾವ ಬೆಳೆ, ಅತ್ಯಧಿಕ ಫಲ ನೀಡಬಲ್ಲುದೆಂಬು ದನ್ನು ಪರಾಮರ್ಶಿಸುತ್ತದೆ. ಆ ಬಳಿಕ ಭೂಮಿಯನ್ನು ಹಸನುಗೊಳಿಸಿ ಕೃಷಿ ಯೋಗ್ಯವಾಗಿಸಲು, ಸಮತಟ್ಟುಮಾಡಲು, ಗಿಡಗಳನ್ನು ನೆಡಲು, ಮನೆಗಳನ್ನು ಕಟ್ಟಲು ಖಾಸಗಿ ಕಂಟ್ರಾಕ್ಟರನ್ನು ನಿಯಮಿಸುತ್ತದೆ. ಪಿ. ಡಬ್ಲ್ಯೂ. ಡಿ. ವಿಭಾಗವು ಮಾರ್ಗಗಳನ್ನು ತಯಾರಿಸುವುದು, ನೀರಿನ ಸರಬರಾಜು, ಚಿಕಿತ್ಸಾ ಲಯ, ಶಾಲೆ, ಇವುಗಳ ವ್ಯವಸ್ಥೆಯನ್ನು ಕೈಗೊಳ್ಳುತ್ತದೆ. ಪ್ರತಿ ಒಂದು ಯೋಜನೆಯಲ್ಲಿ ೪೦೦ ಕುಟುಂಬಗಳಿಗೆ ವಸತಿ, ಕೃಷಿ ಸೌಕರ್ಯ ಕಲ್ಪಿಸಲಾಗು ತ್ತಿದೆ. ಸುಮಾರು ಎರಡೂವರೆ ಸಾವಿರ ಹೆಕ್ಟೇರಿಗಿಂತಲೂ ಹೆಚ್ಚು ಭೂಪ್ರದೇಶ ದಲ್ಲಿ ಅದರ ಮಧ್ಯಭಾಗದಲ್ಲಿ ಗ್ರಾಮವೊಂದನ್ನು ನಿರ್ಮಾಣಮಾಡುತ್ತಾರೆ. ಇಂಥ ವಸಾಹತುಗಳಿಗೆ ಗೃಹಸ್ಥರನ್ನು ಆಯ್ಕೆಮಾಡುವಾಗ ಶರೀರ ಸಾಮರ್ಥ್ಯ, ಕೃಷಿಕ ಮನೋವೃತ್ತಿ, ವ್ಯಕ್ತಿಗಳ ಆವಶ್ಯಕತೆ—ಇವುಗಳ ಆಧಾರದ ಮೇಲೆ ಕೂಲಂಕುಷವಾಗಿ ಪರೀಕ್ಷಿಸಿಕೊಳ್ಳುತ್ತಾರೆ. ಅದಲ್ಲದೆ ಹೆಚ್ಚಾಗಿ ಇಪ್ಪತ್ತರಿಂದ ಮೂವತ್ತು ವರ್ಷ ವಯೋಮಿತಿಯೊಳಗಿನ ಉತ್ಸಾಹೀ ತರುಣರನ್ನೇ ಆರಿಸು ತ್ತಾರೆ.

ಒಂದು ಕುಟುಂಬದ ಸ್ಥಾಪನೆಗೆ ಹೆಚ್ಚುಕಮ್ಮಿ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ. ಈ ಹಣದ ಮೂರನೇ ಒಂದು

ಭಾಗವು ವಿದ್ಯಾಭ್ಯಾಸ, ಆರೋಗ್ಯ ಸಂರಕ್ಷಣೆ, ಪೋಲೀಸರಿಂದ ರಕ್ಷಣಾ ಸೇವೆಗಳು ಇವೆಲ್ಲವುಗಳ ಸೇವಾಸಿಬ್ಬಂದಿಗಳಿಗೆ ವಿನಿಯೋಗವಾಗುತ್ತದೆ. ಉಳಿದ ಎರಡು ಭಾಗವು ಭೂಮಿಯನ್ನು ಸಿದ್ಧಪಡಿಸಲು, ಗಿಡಗಳನ್ನು ನಾಟಿಮಾಡಲು, ಒಂದು ಮನೆಕಟ್ಟಲು ಉಪಯೋಗಿಸಲಾಗುವುದು. ಈ ಹಣವನ್ನು ಗೃಹಸ್ಥನು ೧೫ ವರ್ಷಗಳಲ್ಲಿ ಕಂತುಪ್ರಕಾರ ಪಾವತಿ ಮಾಡಬೇಕು. ಅವನಿಗೆ ಒದಗಿಸಿದ ಈ ಸಿದ್ಧ ಕೃಷಿಭೂಮಿ ಫಲಕೊಡುವವರೆಗೆ ಈ ಪಾವತಿ ಸ್ಥಗಿತವಾಗಿರುತ್ತದೆ.

"ಫೆಲ್ಡಾ" ಸಂಸ್ಥೆಯ ಪ್ರಮುಖ ಬೆಳೆಗಳೆಂದರೆ ಎಣ್ಣೆ ಬೆಳೆಯಾದ ಪಾಮ್, ಮತ್ತು ರಬ್ಬರ್. ಇವು ಫಲಕ್ಕೆ ಬರಬೇಕಾದರೆ ಕನಿಷ್ಠಪಕ್ಷ ಏಳು ವರ್ಷಗಳಾದರೂ ಬೇಕು. ಗೃಹಸ್ಥರು ಬಂದು ಸೇರುವ ಮೂರುವರ್ಷ ಮೊದಲೇ ಗಿಡಗಳ ನಾಟಿ ಮಾಡಿರುತ್ತಾರೆ. ಈರೀತಿ ಮೊದಲೇ ತಯಾರಿಸಿದ ತೋಟವನ್ನು ಅವರಿಗೆ ಕೊಡುವುದು ಮಾತ್ರವೇ ಅಲ್ಲ, ಸಾಲದ ಮರುಪಾವತಿಯೂ ಹಲವಾರು ವರ್ಷಗಳ ಮೇಲೆ! ಅಷ್ಟೇ ಅಲ್ಲದೆ ಫಲಕ್ಕಾಗಿ ಕಾಯುತ್ತಿರುವ ಈ ಕಾಲವಲ್ಲಿ ಸರಕಾರವೇ ತಕ್ಕ ವೇತನವನ್ನು ನೀಡಿ ಅಲ್ಲಿನ ಗೃಹನಿವೇಶನದ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸುತ್ತಿರುತ್ತದೆ.

ಉದಾಹರಣೆಗೆ, ಜಾರ್ಜಿಸ್‌ನ ಕುಟುಂಬವನ್ನೇ ತೆಗೆದುಕೊಳ್ಳಿ. ಅವನಿರುವ ಉಪನಿವೇಶನದಲ್ಲೆಲ್ಲಾ ಹರಡಿಕೊಂಡ ಕೃಷಿಕ್ಷೇತ್ರಗಳಿಗೆ ಪ್ರವೇಶಮಾರ್ಗಗಳ ಜಾಲವನ್ನೇ ನಿರ್ಮಿಸುವ ಕಾರ್ಯಕ್ರಮವಿದೆ. ಈ 'ಬಲೆ' ನೇಯುವ ಎಂದರೆ ಮಾರ್ಗಗಳನ್ನು ತಯಾರಿಸುವ ಕೆಲಸವನ್ನು ಜಾರ್ಜಿಸ್ ಮಾಡುತ್ತಾ ಇರುತ್ತಾನೆ. ಅವನ ಹೆಂಡತಿ ಪಾಮ್ ಗಿಡಗಳಲ್ಲಿ ಅರಳಿರುವ ಹೂಗೊಂಚಲುಗಳಿಗೆ ಪರಾಗಸ್ಪರ್ಶ ಮಾಡುತ್ತಿರುತ್ತಾಳೆ (ಜೀವನಕ್ಕೆ ಬೇಕಾದ ಆಹಾರ ಇತ್ಯಾದಿ ಅಗತ್ಯಗಳಿಗೆ ವೇತನದ ರೂಪದಲ್ಲಿ ಧನ ನೀಡಲಾಗುತ್ತದೆ).

ಇಷ್ಟಾದರೂ ಈ ಗೃಹಸ್ಥರು ತಮ್ಮ ಈ 'ಆಮೂಲಾಗ್ರ' ಬದಲಾದ ಹೊಸ ಜೀವನ ವ್ಯವಸ್ಥೆಗೆ, ಹೊಸ ಪರಿಸರಕ್ಕೆ, ಹೊಂದಿಕೊಳ್ಳುವುದು ಸುಲಭಸಾಧ್ಯವೇನಲ್ಲ. ಅದೊಂದು ಸಾಹಸವೇ ಸರಿ! ಅಲ್ಲಿಗೆ ಬಂದು ಸೇರಿದ ಹೊಸತರಲ್ಲಿ ಕಳೆದ ಆ ಕಠಿಣ ದಿನಗಳನ್ನು ಜಾರ್ಜಿಸ್ ಈಗಲೂ ಜ್ಞಾಪಿಸಿಕೊಳ್ಳುತ್ತಾನೆ. ನೋವು ನುಂಗಿದ ನಗೆಯಿಂದ ಹೇಳುತ್ತಾನೆ. "ಪ್ರತಿದಿನ ನಸುಕಿನಲ್ಲೇ ಬೆಳಗ್ಗೆ ೫ ಗಂಟೆಗೆ ಏಳುವುದು; ಹಾಜರಿಗಾಗಿ ಸಾಲಾಗಿ ನಿಲ್ಲುವುದು, ಪಾಮ್ ಸಸಿಗಳ ಸುತ್ತ ಬೆಳೆದ ಕಳೆ ಹುಲ್ಲುಗಳನ್ನು ಕಿತ್ತು ಕೊಚ್ಚಿ ಹಾಕುವುದು. ಇವುಗಳಲ್ಲೇ ದಿನವೆಲ್ಲಾ ಕಳೆಯುವುದು; ಇವು ನನಗೆ ಇಷ್ಟವಾದ ಕೆಲಸಗಳಾಗಿರಲಿಲ್ಲ."

ಜಾರ್ಜಿಸ್ ಕ್ರಮೇಣ ಆ ಜೀವನವನ್ನು ಸ್ವೀಕರಿಸಿಕೊಂಡ. ತನ್ನ ಯಜಮಾನ ತಾನೇ ಆಗಬೇಕಾದರೆ ತರಬೇತಿ ಬೇಕಷ್ಟೆ! ಇದು ಅವನು ತನ್ನ ಒಲ್ಲದ ಮನಸ್ಸಿಗೆ ಹೇಳಿಕೊಂಡ ಸಮಾಧಾನ.

ಗೆಳೆಯರ, ಆತ್ಮೀಯರ, ಬಂಧುಗಳ, ಸ್ನೇಹ ಸಂಬಂಧದಿಂದ ವಂಚಿತರಾಗಿ, ಹುಟ್ಟೂರಿಂದ ದೂರಾಗಿ, ಬಾಳುವ, ಈ ಅಭ್ಯಾಸವಿಲ್ಲದ ಜೀವನಕ್ರಮವು ಪ್ರಾರಂಭದಲ್ಲಿ ಬೇಸರ ಉಂಟುಮಾಡುವುದು ಸಹಜವೇ. ಈ ಪ್ರತ್ಯೇಕತೆಯ ವ್ಯಸನ ಗೃಹಿಣಿಯರನ್ನು ಹೆಚ್ಚು ಬಾಧಿಸುತ್ತದೆ. ತೀರ ಹತ್ತಿರದ ಪಟ್ಟಣವೆಂದರೂ ಎರಡು ಮೂರು ಗಂಟೆಯ ದಾರಿ ಕ್ರಮಿಸದೆ ಸಿಗುವುದಿಲ್ಲ. ಆದರೆ ಸಮಾನ ಕ್ಲೇಶಗಳು ಬಹು ಬೇಗನೆ ಹೊಸ ಸ್ನೇಹ ಬೆಸೆಯಲು ನಾಂದಿಯಾಗುತ್ತವೆಯಲ್ಲವೇ ?

ಮಾಜಿ ನಟ 'ಸೈಯದ್ ಅಲ್ವೀ'ಗೆ ಹೊಂದಾಣಿಕೆಗಳು ಬರಿಯ ಶಾರೀರಕ. ತನ್ನ ಬಗ್ಗೆ ಅವನನ್ನುವುದು ಹೀಗೆ—"ಶರೀರ ಶ್ರಮದ ಅಭ್ಯಾಸವೇ ನನಗಿರಲಿಲ್ಲ. ನನ್ನನ್ನು ಅದಕ್ಕಾಗಿ ಸಿದ್ಧಪಡಿಸಬೇಕಾಗಿತ್ತು. ನನ್ನ ಮನೆಯಿಂದ ಕೃಷಿಭೂಮಿಗಿರುವ ದೂರ ಆರೂವರೆ ಕಿಲೋಮೀಟರ್. ನಾನು ಮಾಡಿದ್ದು ಇಷ್ಟೆ. ಪ್ರತಿದಿನ ನಡೆಯುತ್ತ ನಡೆಯುತ್ತ ಶರೀರ ಸಾಮರ್ಥ್ಯ ಪಡೆದುಕೊಂಡೆ. 'ಕೃಷ್ಣ ರಾಮಸಾಮಿ' ಎಂಬ ಭಾರತೀಯನಿಗೆ ಭಾಷೆಯ ಸಮಸ್ಯೆ. ಜೆಂಕಾ-ಗ್ಕೆ ಬರುವ ಮೊದಲು ಅವನಿದ್ದುದು ಪೆಲಂಗೂರಿನ ರಬ್ಬರ್ ತೋಟವೊಂದರಲ್ಲಿ. ಇಲ್ಲಿ ಮಲಯಾಭಾಷೆ ಗೊತ್ತಿಲ್ಲದ್ದೊಂದೇ ತೊಡಕು. ಅವನೀಗ ಅವನೂ ಅವನ ಮಕ್ಕಳೂ ಸಲೀಸಾಗಿ ಮಲಯ ಮಾತಾಡುತ್ತಾರೆ!

ಪ್ರತಿಯೊಬ್ಬನ ಹೆಂಗಸರಿಗೂ ಪ್ರತ್ಯೇಕವಾಗಿ ನಾಲ್ಕು, ನಾಲ್ಕು ಹೆಕ್ಟೇರು ಭೂಮಿಯ ಸ್ವಾಮಿತ್ವ-ದಾಖಲೆ ಇದ್ದರೂ 'ಪಾಮೊಲಿವ್' ತೋಟಗಳಲ್ಲಿ ಪರಸ್ಪರ ಸಹಕಾರದಿಂದಲೇ ಕೆಲಸ ಮಾಡಬೇಕಾಗುವುದು. ಕೊಯ್ಲಿನ ಕಾಲದಲ್ಲಿ ಕೊಯ್ಯುವ ಕೆಲಸ ಗಂಡಸರದ್ದಾದರೆ ಆ ಕಾಯಿಗಳನ್ನು ಆಯುವ ಕೆಲಸ ಹೆಂಗಸರದ್ದು. ಯಾರು ಎಷ್ಟು ಕೊಯ್ಯುವರೋ ಆ ಪ್ರಮಾಣಕ್ಕೆ ಸರಿಯಾಗಿ ಫಲ ವಿಭಜನೆ; ವಿತರಣೆ.

ಜಾರ್ಜಿಸನ ಮೊದಲ ಕೊಯಿಲು ನಿಜಕ್ಕೂ ದೊಡ್ಡ ವಿಜಯವಾಗಿತ್ತು. ಅದು ಸಾವಿರದೊಂಭೈನೂರ ಎಪ್ಪತ್ತ ನಾಲ್ಕರಲ್ಲಿ. ಆ ವರ್ಷ 'ಪಾಮೊಯಿಲ್' ಜಾಗತಿಕ ಬೆಲೆ ಎಣಿಕೆಮೀರಿ ಮೇಲೇರಿತು. ಇದರಿಂದಾಗಿ ಅವನ ಸರಾಸರಿ ಮಾಸಿಕ ಆದಾಯ ೨೭೦೦ ರೂಪಾಯಿಗಳಷ್ಟಾಯಿತು! ಅವನು ತನ್ನ ಮನೆಗೆ

ಕೆಲವು ಪೀಠೋಪಕರಣಗಳನ್ನೂ ಬೇಕಾದಲ್ಲಿ ಹೋಗಿ ಬರಲು ಒಂದು ಮೋಟರ್ ಸೈಕಲ್ಲನ್ನೂ ಕೊಂಡುಕೊಂಡ. ಒಂದು ದೊಡ್ಡ ಮೊತ್ತವನ್ನು ಜೋಹೋರ್'ನಲ್ಲಿರುವ ತನ್ನ ಬಡ ಬಂಧುಗಳಿಗೆ ಕಳುಹಿಸಿಕೊಟ್ಟ. ಆದಾಯವು ವರ್ಷದಿಂದ ವರ್ಷಕ್ಕೆ ಏರುವುದು ಇಳಿಯುವುದು ಕೃಷಿಯಲ್ಲಿ ಸಾಮಾನ್ಯ ಸಂಗತಿಯಷ್ಟೆ! ಹಾಗಿದ್ದರೂ ಇತರ ಎಲ್ಲ ಗೃಹಸ್ಥರಂತೆ ಅವನ ಇತ್ತೀಚಿನ ಮಾಸಿಕ ಆದಾಯ ೧೪೪೦ ರೂಪಾಯಿ.

ಈ ಹೊಸ ರೈತರು ಆತ್ಮನಿರ್ಭರರಾದಂತೆ, 'ಫೆಲ್ಡಾ' ಸಂಸ್ಥೆ ಧನಸಹಾಯ, ಮೇಲ್ವಿಚಾರಣೆಗಳನ್ನು ಬಿಡುತ್ತಾ ಬರುತ್ತದೆ ಮತ್ತು ನಿವೇಶನ-ನಿವಾಸಿಗಳು ಅಂಗಡಿಗಳನ್ನು ತೆರೆಯಲು, ಅಥವಾ ಸಹಕಾರಿ ಸಂಸ್ಥೆಗಳನ್ನು ಕಟ್ಟಿ, ತಮ್ಮ ದಿನಬಳಕೆಯ ವಸ್ತುಗಳ ಸರಬರಾಜು ಮಾಡಿಕೊಳ್ಳಲು ಪ್ರೋತ್ಸಾಹಿಸುತ್ತದೆ.

'ಜೆಂಕಾ-೧' ರಲ್ಲಿ ಪಾಮೊಯಿಲ್ ಕಾಯಿಗಳನ್ನು 'ಫೆಲ್ಡಾ'ದ ಎಣ್ಣೆ ಮಿಲ್ಲುಗಳಿಗೆ ಸಾಗಿಸುವುದಕ್ಕಾಗಿ ಸಹಕಾರಿ ಸಾಗಾಣಿಕೆ ಸಂಸ್ಥೆಯೊಂದು ರೂಪುಗೊಂಡಿದೆ. ಪ್ರತಿ ಸದಸ್ಯನೂ ಇದಕ್ಕೆ ದೇಣಿಗೆ ನೀಡಿದ್ದಾನೆ. ಪೂರಕವಾಗಿ 'ಫೆಲ್ಡಾ' ಸಾಲ ಕೊಟ್ಟಿದೆ. ಈ ಒಟ್ಟು ಬಂಡವಾಳದಿಂದ ಟ್ರಕ್ಕು, ಟ್ರ್ಯಾಕ್ಟರ್‌ಗಳನ್ನು ಖರೀದಿಸಿದ್ದಾರೆ. ಇವುಗಳ ಚಾಲನೆ, ಪಾಲನೆ ಇತ್ಯಾದಿ ನಿರ್ವಹಣೆಯನ್ನು ಯಾಂತ್ರಿಕ ತಿಳುವಳಿಕೆ, ಸಾಮರ್ಥ್ಯ ಇರುವ ಸದಸ್ಯರು ನೋಡಿಕೊಳ್ಳುತ್ತಾರೆ.

ಆಯ್ಕೆಮಾಡಿದ ಪ್ರತಿನಿಧಿಗಳ ಮುಖಾಂತರ ಜೆಂಕಾನಿವಾಸಿಗಳು ಯೋಜನೆಗಳ ಎಲ್ಲ ಹಂತಗಳಲ್ಲಿ ಭಾಗಿಗಳಾಗುತ್ತಾರೆ; ಉದಾಹರಣೆಗೆ, ಇಲ್ಲಿ ಜಾರ್ಜಿಸ್ ಎರಡನೇ ಸ್ಥಾನದ ಪ್ರತಿನಿಧಿ. ತನ್ನ ವಸಾಹತುವಿನ ಜನರ ತೊಡಕು ತೊಂದರೆಗಳನ್ನು, ಸಲಹೆಸೂಚನೆಗಳನ್ನು, ನಿರ್ವಹಣಾಧಿಕಾರಿ ಇಸ್ಮಾಯಿಲ್ ಬಿನ್ ಮಹಮ್ಮದ್‌ರ ಅವಗಾಹನೆಗೆ ತರುತ್ತಾನೆ. ಇದೇ ರೀತಿ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲ 'ಫೆಲ್ಡಾ'ದ ಅಧಿಕಾರಿಗಳು ತೆರವುಗೊಳಿಸಿದ ಸ್ಥಾನಗಳಿಗೆ ಸ್ಥಳೀಯ ನಿವಾಸಿಗಳನ್ನೇ ತರಬೇತುಗೊಳಿಸಿ ನೇಮಿಸಿಕೊಳ್ಳುತ್ತಾರೆ.

ಗೃಹಿಣಿಯರೂ ಉತ್ತಮ ಅವಕಾಶಗಳನ್ನು ಹೊಂದಿರುತ್ತಾರೆ. ಕೌಟುಂಬಿಕ ಅರ್ಥವ್ಯವಸ್ಥೆಯ ಬಗ್ಗೆ ಗೃಹಿಣಿಯರಿಗಾಗಿ ಕ್ಲಾಸುಗಳನ್ನೂ ನಡೆಸುತ್ತಿದೆ. ಈ ಫೆಲ್ಡಾ ಸಂಸ್ಥೆ. ಗೃಹಿಣಿಯರ ಸಹಕಾರಿ ಶಿಶುವಿಹಾರಗಳೂ ರೂಪುಗೊಂಡಿವೆ.

ಹಿಂದೆ ಬೆಸ್ತನಾಗಿದ್ದಾತನ ಪತ್ನಿ 'ರಜಿಯಾಬಿಂಟಿ ಅಹಮದ್' ಎಂಬಾಕೆ ಹೇಳುವುದನ್ನು ಕೇಳಿ. "ಹುಟ್ಟೂರಿನಿಂದ ೫೦೦ ಕಿಲೋಮೀಟರ್ ದೂರದ ಈ

ನಾಡಿಗೆ ಬರುವಾಗ ಭಯದಿಂದ ಕಂಗಾಲಾಗಿದ್ದೆ. ಆದರೆ ಈಗ ನಾನು ಪೂರ್ಣ ಸುಖಿ. ನನ್ನ ಕಿರಿಯ ಮಕ್ಕಳು ಜೆಂಕಾದ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ದೊಡ್ಡವರು ಜೆಂಕಾ ಎಣ್ಣೆ ಗಿರಣಿಗಳಲ್ಲಿ ದುಡಿಯುತ್ತಿದ್ದಾರೆ.

ಎಲ್ಲ ಲೆಕ್ಕಹಾಕಿದರೆ 'ಫೆಲ್ಡಾ' ಮಲೇಶ್ಯಾದ ಉದ್ದಗಲಕ್ಕೆಲ್ಲಾ ಸೆರಿ ೨೧೧ ನವ ನಿರ್ಮಾಣ ಯೋಜನೆಗಳನ್ನು ಸ್ಥಾಪಿಸಿದೆ. ಇವು ಒಟ್ಟು ೩೯೫೦೦೦ ಹೆಕ್ಟೇರು ಭೂಪ್ರದೇಶವನ್ನು ಆವರಿಸಿವೆ. ಇವುಗಳಿಂದ ಬರುವ ಕಂದಾಯವೇ ೧೩೫ ಕೋಟಿಗಿಂತ ಹೆಚ್ಚಾಗಿದೆ! ಇದು ೧೯೭೬ರ ಅಂಕಿ–ಅಂಶಗಳು. ಮಲೇಶ್ಯಾ ಸರಕಾರ ತನ್ನ ರಾಜ್ಯಾಡಳಿತ ಖರ್ಚುವೆಚ್ಚದ ೬.೩ ಶೇಕಡಾದಷ್ಟು ಹಣವನ್ನು ಫೆಲ್ಡಾ ಆರ್ಥಿಕ ವ್ಯವಹಾರಕ್ಕೆಂದು ಮೀಸಲಿಡುತ್ತದೆ. (ಫೆಲ್ಡಾದ ಉಳಿದ ಖರ್ಚೆಗಳಿಗಾಗಿ ವಿಶ್ವಬ್ಯಾಂಕಿನಿಂದ, ಏಷ್ಯಾ ಅಭಿವೃದ್ಧಿ ಬ್ಯಾಂಕಿನಿಂದ, ಕುವೈತ್ ಫಂಡಿನಿಂದ, ಸೌದಿ ಅಭಿವೃದ್ಧಿ ಫಂಡಿನಿಂದ ತುಂಬಿಕೊಡಲಾಗುತ್ತದೆ) ಮಲೇಶ್ಯಾದ ಮೂರನೇ ಪಂಚವಾರ್ಷಿಕ ಯೋಜನೆಯ ಅನ್ವಯ 'ಫೆಲ್ಡಾ' ವರ್ಷಕ್ಕೆ ೨೮೦೦೦ ಹೆಕ್ಟೇರು ಕಾಡನ್ನು ನಾಡಾಗಿಸುವ ಗುರಿಯನ್ನು ಹೊಂದಿತ್ತು. ೪೨,೫೦೦ ಕ್ಕೂ ಹೆಚ್ಚು ಕುಟುಂಬಗಳು ಈಗಾಗಲೇ ಪುನರ್ವಸತಿ ಹೊಂದಿದ್ದಾರೆ! ಅದಲ್ಲದೆ ವರ್ಷಕ್ಕೆ ೫೦೦೦ ಹೊಸ ಕುಟುಂಬಗಳು ಈ ಯೋಜನೆಗೆ ಸೇರುತ್ತಿದ್ದಾರೆ!

"ಆರ್ಥಿಕವಾಗಿ ನಾವು ವಿಜಯಿಗಳಾಗಿದ್ದೇವೆ. ಹೆಚ್ಚಿನ ಎಲ್ಲ ತಾಂತ್ರಿಕ ಸಮಸ್ಯೆಗಳನ್ನು ನಾವು ನಿವಾರಿಸಿದ್ದೇವೆ" ಎಂದು ಜೆಂಕಾ ತ್ರಿಕೋಣದ ಪ್ರಾದೇಶಿಕ ಹತೋಟಿಯ ಅಧಿಕಾರಿ "ಮುಹಮ್ಮದ್ ನೂರ್‌ಝುಕಾರಿಯಾ ಹೆಮ್ಮೆಯಿಂದ ಹೇಳುತ್ತಾರೆ.


ಏಷ್ಯಾ ಮತ್ತು ಆಫ್ರಿಕದ ಹಲವು ದೇಶಗಳು ಈ ಯೋಜನೆಗಳನ್ನು ಅಭ್ಯಸಿಸಲು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿರುತ್ತವೆ. ನಲವತ್ತೈದು ವರ್ಷ ವಯಸ್ಸಿನ ರಾಜಾ ಮುಹಮ್ಮದ್ ಆಲಿಯಾಸ್ ಹೇಳುವುದೇನೆಂದರೆ "ನಾವು ನಮ್ಮೀ ವಿಕಾಸ ಯೋಜನೆಯ ತಂತ್ರವನ್ನು ವರ್ಷದಿಂದ ವರ್ಷಕ್ಕೆ ಪರಿಶುದ್ಧಗೊಳಿಸುತ್ತಲೇ ಬಂದಿದ್ದೇವೆ. ಫೆಲ್ಡಾ ಈಗ ಅತಿ ಹೆಚ್ಚು ಇಳುವರಿ ನೀಡಬಲ್ಲ ತಳಿಗಳಿಗಾಗಿ ವಿವಿಧ ಬೆಳೆಗಳ ಮೇಲೆ ಪ್ರಯೋಗಗಳನ್ನು, ಸಂಶೋಧನೆಗಳನ್ನು, ನಡೆಸುತ್ತಿದೆ. ಅದರ ಫಲವಾಗಿ ಕಬ್ಬು, ಕೊಕ್ಕೋ ಗಿಡಗಳನ್ನೂ ನೆಟ್ಟು ಬೆಳೆಯಿಸತೊಡಗಿದ್ದಾರೆ." ಕಳೆದ ಎರಡು ದಶಮಾನಗಳಿಂದ 'ಫೆಲ್ಡಾ' ಜನರ ಮಾನಸಿಕ ಮತ್ತು ಸಾಮಾಜಿಕ ಆವಶ್ಯಕತೆಗಳನ್ನು ಪ್ರಮುಖವಾಗಿಸಿ ಕಾರ್ಯ

ಶ್ರಮ ರೂಪಿಸಿಕೊಂಡಿತ್ತು. ಆದರೆ ಇಂದು ಬರಿಯ ಸಮೂಹಶ್ರಮ ಭೌತಿಕ ಕ್ಷೇಮಾಭಿವೃದ್ಧಿಗಳೇ ಅಲ್ಲದೆ ಮನುಷ್ಯರ ವ್ಯಕ್ತಿತ್ವದ ವಿಕಾಸದ ಕಡೆಗೆ ಹೆಚ್ಚಿನ ಮಹತ್ವ ನೀಡತೊಡಗಿದೆ. ಈ ಯೋಜನೆ ಸೇರಲು ಹತ್ತೊಂಬತ್ತು ಸಾವಿರ ಅರ್ಜಿಗಳು ಇನ್ನೂ ಕಾಯುತ್ತಿರುವ ಸನ್ನಿವೇಶವನ್ನು ಹೊಂದಿರಬೇಕಾದರೆ ಅದೇ ಫೆಲ್ಡಾದ ಯೋಗ್ಯತೆಗೊಂದು ಮಾನದಂಡ; ಒಂದು 'ಪ್ರಶಂಸಾ ಪ್ರಮಾಣಪತ್ರ; ಅದರ ಜನಪ್ರಿಯತೆಗೆ ಪ್ರತ್ಯಕ್ಷ ನಿದರ್ಶನ."

ನಿಜಕ್ಕೂ ಪುನರ್ನಿವೇಶನ ಹೊಂದಿದವರು ತೃಪ್ತರಾಗಿದ್ದಾರೆ. ಮೊದಲು ಸಿಕ್ಕುಸಿಕ್ಕಾಗಿ ಒಂದರೊಡನೊಂದು ಹೊಸೆದಂತಿದ್ದ ಮುಳ್ಳು ಪೊದೆಗಳ ಕಾಡಿದ್ದಲ್ಲಿ ಈಗ ಕ್ರಮಬದ್ಧ. ಸಾಲುಸಾಲಾದ ಪಾಮೊಯಿಲ್ ಮರಗಳು ಕಂಗೊಳಿಸುತ್ತಿವೆ. ಅಚ್ಚುಕಟ್ಟಾದ ಮನೆಗಳ ವಿಶಿಷ್ಟ ಅಲಂಕಾರಗಳು ರಮಣೀಯ 'ದೃಷ್ಟಿಪಥ'ವನ್ನೇ ನಿರ್ಮಿಸಿವೆ.

ಫೆಲ್ಡಾಕ್ಕೆ ಸೇರುವ ಮುನ್ನ ಚೀನಾದ ರಬ್ಬರ್ ತೋಟಗಳಲ್ಲಿ ರಬ್ಬರ್ ಹಾಲು ತೆಗೆಯುವ ಕೆಲಸ ಮಾಡುತ್ತಿದ್ದ 'ಫೈಜಲ್ ಬಿನ್ ಉದಾ' ಎಂಬಾತ ಏನೆನ್ನುತ್ತಾನೆ, ಕೇಳಿ. "ಒಂದು ಕಾಲದಲ್ಲಿ ನನಗೆ ಉದ್ಯೋಗವೇನೋ ಇತ್ತು. ಆದರೆ ಅದರಲ್ಲಿ ಭವಿಷ್ಯದ್ವರ್ತಮಾನಗಳಲ್ಲಿ ಸುಖ ಸಂತೋಷಗಳ ಛಾಯಾ ಮಾತ್ರವೂ ಇರಲಿಲ್ಲ. ಉದ್ಯೋಗ ಕಾಯಂ ಆಗಿ ಇರಲಿಲ್ಲ. ಈಗ ಇಲ್ಲಿ ನೋಡಿ, ನನ್ನದೇ ಆದ ಮನೆ! ನನ್ನದೇ ಭೂಮಿ! ನನಗೆ ನಾನೇ ಯಜಮಾನ!

ಸರಸ್ವತಿ ಬಡಕ್ಕಿಲ



ಅಖಂಡ ದಕ್ಷತೆಯಿಂದಲೇ ಸ್ವಾತಂತ್ರ್ಯ ರಕ್ಷಣೆ ಸಾಧ್ಯ.

—ಜೆಫರ್‌ಸನ್

ಸ್ಮೃತಿ ಕಳೆದುಕೊಂಡ ವಿಜ್ಞಾನಿ

ಅಂದು ಓವಲ್ ಕ್ರಿಕೆಟ್ ಮೈದಾನದ ಹೊರಗೆ, ಬಸ್ಸಿನಿಂದಿಳಿಯುತ್ತಲೇ ನನಗೆ, ಇಂದೇನೋ ಖಂಡಿತವಾಗಿಯೂ ವಿಚಿತ್ರ ಅನುಭವ ಘಟನೆ ಜರುಗುವುದಿದೆಯೆಂಬ ಪೂರ್ವಾಭಾಸವಾಯಿತು.

ಇಂದು, ಎಲ್ಲವೂ ಘಟಿಸಿಯಾದ ಮೇಲೆ, ನಾನು ಆ ಬಗ್ಗೆ ವಿಚಾರ ಮಾಡಿದಾಗ, ಅಂದು ಜರುಗಿದ ಪೂರ್ವಾಭಾಸಕ್ಕೆ ನನಗೆ ಯಾವುದೇ ಕಾರಣಗಳು ಗೋಚರಿಸುವುದಿಲ್ಲ. ಆದರೆ, ಪೂರ್ವಾಭಾಸಗಳಿಗೆ ಯಾವುದೇ ಕಾರಣಗಳಿರುವುದಿಲ್ಲವೆಂಬುದೂ ಸತ್ಯವೆಂದು ಯೋಚಿಸುತ್ತೇನೆ.

ಅಂದು, ನಾನು ಗೇಟಿನ ಬಳಿ ನನ್ನ ಕಾಂಪ್ಲಿಮೆಂಟರಿ ಪಾಸನ್ನು ಕೊಟ್ಟಾಗ ಅದರೊಂದಿಗೆ ಲಗತ್ತಿಸಿದ ಒಂದು ಸಣ್ಣ ಚೀಟಿ ನನ್ನ ಬೆರಳುಗಳಿಗೆ ಸಿಕ್ಕಿಕೊಂಡಿತು. ಚೀಟಿಯಲ್ಲಿ ಬರೆದಿತ್ತು

೧೪ ಆಗಸ್ಟ್, ೨೦೦೫

ಪ್ರಿಯಜಾನ್,

ನನ್ನದೊಂದು ಹಾರ್ದಿಕ ಅನುರೋಧ; ನನ್ನ ಆಟವನ್ನು ನೋಡಲು ನೀನು ಖಂಡಿತವಾಗಿಯೂ ಬರಬೇಕು. ಬಹುಶಃ, ಟೆಸ್ಟ್ ಮ್ಯಾಚ್‌ಗಳಲ್ಲಿ ಇದು ನನ್ನ ಕೊನೆಯ ಆಟವಾಗಬಹುದು. ನೀನು ಬಿಡುವು ಮಾಡಿಕೊಂಡು ಬರುತ್ತೀಯಾ ಎಂದು ಆಶಿಸುವೆ.

ಶುಭಾಕಾಂಕ್ಷೆಗಳೊಂದಿಗೆ,

ನಿನ್ನ

ಪ್ರಮೋದ ರಾಂಗಣೇಕರ

ಸನ್ ೮೯ರಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ಮ್ಯಾಚ್ ಗೆದ್ದಿದ್ದ ಕ್ರಿಕೆಟ್ ಟೀಮಿಗೆ ನಾನು ಮತ್ತು ಪ್ರಮೋದ ಸದಸ್ಯರಾಗಿದ್ದೆವು. ಕಡೆಗೆ ಪ್ರಮೋದ ಓರ್ವ ಪ್ರಸಿದ್ಧ ಕ್ರೀಡಾಪಟುವಾದ; ಸಾಕಷ್ಟು ಎತ್ತರಕ್ಕೆ ಹಾರಿದ. ವೆಸ್ಟ್ ಇಂಡೀಸ್, ಆಸ್ಟ್ರೇಲಿಯಾ ಮತ್ತು ಎಂ. ಸಿ. ಸಿ.ಗೆ ವಿರುದ್ಧವಾಗಿ ಆಡಿದ ಅವರ ಆಟಗಳೇ ಇದಕ್ಕೆ ಸಾಕ್ಷಿಯಾಗಿವೆ. ದುರ್ಭಾಗ್ಯ ವಶದಿಂದ, ನಾನು ಕ್ರಿಕೆಟ್

೧೯೮೩ರ ನವೆಂಬರ್ ತಿಂಗಳ ಹಿಂದಿ ಕಾದಂಬರಿಯಲ್ಲಿ ಪ್ರಕಟಗೊಂಡಿದ ಡಾ|| ಜೆ.ವಿ. ನಾರಲೀಕರ್‌ರವರ “ಸ್ಮೃತಿ ಲುಪ್ತ ವೈಜ್ಞಾನಿಕ್” ಕತೆಯ ಕನ್ನಡಾನುವಾದ.

ಆಡುವುದನ್ನು ಬಿಟ್ಟೇಬಿಟ್ಟೆ. ಕಾರಣ, ಈಗ ಸಂಗ್ರಹಾಲಯದ ಕ್ಯೂರೇಟರ್ ಆಗಿದ್ದರಿಂದ ನನ್ನ ಬಳಿ ಸಮಯಕ್ಕೆ ಕೊರತೆಯಿತ್ತು. ಹೀಗಾಗಿ, ನಾನು ಹದಿನೈದು ವರ್ಷಗಳ ನಂತರ ಕ್ರಿಕೆಟ್ ಮೈದಾನಕ್ಕೆ ಹೋಗುತ್ತಿದ್ದೇನೆಂದು ನನಗೆ ಕಸಿವಿಸಿಯಾಯಿತು.

ಆಟದ ಎರಡನೇ ದಿನವಾಗಿತ್ತು. ಈ ದಿನವನ್ನೇ ನಾನೇಕೆ ಚುನಾಯಿಸಿಕೊಂಡಿದ್ದೆಂದರೆ, ಭಾರತ ಕ್ಷೇತ್ರರಕ್ಷಣೆ ಮಾಡಲು ಹೋಗುತ್ತಿತ್ತು. ಮೊದಲ ದಿನ, ಬಿಸಿಲಿನ ವಾತಾವರಣದಲ್ಲಿ ಒಂದು 'ಪರ್ಫೆಕ್ಟ್ ವಿಕೇಟ್'ನಿಂದಾಗ ಭಾರತದವರಿಂದ ಸಾಕಷ್ಟು ರನ್ ಗಳಿಸುವ ಭರವಸೆಯಿತ್ತು. ಆದರೆ ಭಾರತದ ಬ್ಯಾಟ್ಸ್‌ಮನ್‌ಗಳು ಈ ಅಭಿಲಾಷೆಗೆ ಪೂರ್ಣವಾಗಿ ಇಳಿದಿರಲಿಲ್ಲ. ಈಗ ಇಂಗ್ಲೆಂಡಿಗೆ ೩೦೮ ರನ್‌ಗಳ ಒಂದು ಮಧ್ಯಮ ರನ್ ಸಂಖ್ಯೆಯನ್ನಷ್ಟೇ ಎದುರಿಸಬೇಕಿತ್ತು.

ಮೂರನೇ ದಿನದ ಆಟ ಮೌನದ ನಡುವೆ ಪ್ರಾರಂಭವಾಯಿತು. ಮುಂದೆ ಘಟಿಸುವ ಘಟನೆಗಳ ಯಾವುದೇ ಸೂಚನೆಗಳೂ ಇರಲಿಲ್ಲ. 'ಡ್ರಿಂಕ್ಸ್' ಆದ ಮೇಲೆ ಭಾರತದ ಕ್ಯಾಪ್ಟನ್ ಭಂಡಾರಿಯು ರಾಂಗಣೇಕರನಿಗೆ 'ಚೆಂಡೆಸೆಯಲು' ಕರೆದ; ಇದಾದ ನಂತರವೇ ಆ ವಿಚಿತ್ರ ಘಟನಾ ಕ್ರಮಗಳು ಪ್ರಾರಂಭವಾದವು.

ಪ್ರಮೋದ ಚೆಂಡನ್ನು ಹಿಡಿಯುತ್ತಲೇ ಚಪ್ಪಾಳೆಗಳ ಭಾರೀ ಧ್ವನಿಗಳಿಂದ ಅವನನ್ನು ಸ್ವಾಗತಿಸಲಾಯಿತು. ಆ ಧ್ವನಿಗಳಲ್ಲಿ ಸಹಾನುಭೂತಿಯೂ ಇತ್ತು. ಯಾಕೆಂದರೆ, ಕ್ರೀಡಾಪ್ರೇಮಿಗಳಿಗೆ ಇದು ಅವನ ಕೊನೆ ಟೆಸ್ಟ್ ಮ್ಯಾಚ್ ಆಗುವುದೆಂಬ ವಿಷಯ ತಿಳಿದಿತ್ತು. ಅವನ ಆಟದ ಪ್ರದರ್ಶನ ಸಪ್ಪೆಯಾಗಿತ್ತು. ಅವನ ಚೆಂಡೆಸೆತದಲ್ಲಿ ಹಳೆಯ ಬಿರುಸು ಹಳೆಯ ಮಾಂತ್ರಿಕತೆ ಮಾಯವಾದಂತಿತ್ತು. ಇಂಗ್ಲೆಂಡಿನ ಬ್ಯಾಟ್ಸ್‌ಮನ್‌ಗಳು ಅವನ ಚೆಂಡೆಸೆತವನ್ನು ಸುಲಭವಾಗಿ ಗ್ರಹಿಸುತ್ತಿದ್ದರು. ಪ್ರಮೋದನನ್ನು ಟೀಮಿನಿಂದ ಹೊರ ಹಾಕಿ ಎಂಬ ಬೇಡಿಕೆ ಹೆಚ್ಚಾಗುತ್ತಿತ್ತು.

ಏನೋ ಅದ್ಭುತ ಘಟಿಸುವುದಿದೆ—ಇವರ ಸೂಚನೆ ಪ್ರಮೋದ 'ಬೋಲಿಂಗ್'ಗೆ ಸಿದ್ಧನಾದಾಗ ತಿಳಿಯಿತು. ಅಂಪಾಯರ್ ಕೋಟ್ಸ್ ಅವನನ್ನು ಪ್ರಶ್ನಿಸಿದ, "ರೈಟ್ ಆರ್ಮ್, ಓವರ್ ದಿ ವಿಕೇಟ್?" ಅಂಪಾಯರ್ ಕೋಟ್ಸ್ ಪ್ರಮೋದನ ಚೆಂಡೆಸೆತದಿಂದ ಪರಿಚಿತನಾಗಿದ್ದ.

"ಇಲ್ಲ" ಅಂಪಾಯರ್‌ಗೆ ಆಶ್ಚರ್ಯಗೊಳಿಸುತ್ತ ಪ್ರಮೋದ ಉತ್ತರಿಸಿದ,

"ಲೆಫ್ಟ್ ಆರ್ಮ್ ಓವರ್ ದ ವಿಕೇಟ್!"

ಪ್ರಮೋದ ಎಂದೂ ಎಡಗೈಯಿಂದ ಬೋಲಿಂಗ್ ಮಾಡಿರಲಿಲ್ಲ. ಕ್ಯಾಪ್ಟನ್ ಭಂಡಾರಿಯೂ ಸ್ವಲ್ಪ ವ್ಯಗ್ರನಾದ. ಅವನು ಪ್ರಮೋದನನ್ನು ಹತೋತ್ಸಾಹಗೊಳಿಸಲು ಬಯಸಿದ, ಆದರೆ ಪ್ರಮೋದ ಹಿಂಜರಿಯಲಿಲ್ಲ.

ಭಂಡಾರಿ ತನಗೆ ತಾನೇ, "ಸರಿ, ನಾನು ಈ ಹಳೆ ಕ್ರೀಡಾಪಟುವಿಗೆ ಕೇವಲ ಒಂದು ಮೂರ್ಖತನದ 'ಓವರ್' ಎಸೆಯಲು ಬಿಡುವೆ" ಎಂದು ಹೇಳಿಕೊಂಡ.

ಈ ನಡುವೆ ರೇಡಿಯೋ ಮತ್ತು ಟಿ. ವಿ.ಯ ಕಾಮೆಂಟೇಟರ್ ಪ್ರಮೋದನ ಇಚ್ಛೆಯನ್ನರಿತ್ತಿದ್ದರು. ಅವರು ತಮ್ಮ ವ್ಯಾಖ್ಯೆಯನ್ನು ಹೇಳಲೂ ಪ್ರಾರಂಭಿಸಿದ್ದರು. ಬಲಗೈಯಿಂದ ಚೆಂಡೆಸೆಯುವವ, ಎಡಗೈಯಿಂದ ಚೆಂಡೆಯಸಲು ಹೇಗೆ ಸಾಧ್ಯ? ಅದೂ ಅವನ ಟೀಮಿಗೆ ವಿಕೇಟಿನ ಅತ್ಯಗತ್ಯವಿರುವಾಗ? ಇವೆಲ್ಲವೂ ಪೂರ್ವ–ಪರಂಪರೆಗೆ ವಿರುದ್ಧವಾಗಿತ್ತು.

ಆದರೂ ಕಡೆಗೆ ಏನು ಘಟಿಸುವುದಿತ್ತೋ ಅವೆಲ್ಲವೂ ಹಿಂದಿನ ಪರಂಪರೆಗಳಿಗೆ ವಿರುದ್ಧವಾಗಿಯೇ ಜರುಗುವುದಿತ್ತು.

ತನ್ನ ಮೊದಲ ಚೆಂಡಿನಲ್ಲಿಯೇ ಇದು ಒಮ್ಮೆಲೆ ನಿಯಮದ ಪ್ರಕಾರವೇ ಎಸೆಯಲ್ಪಟ್ಟಿತ್ತು. ಪ್ರಮೋದ ಪ್ರಾರಂಭದ ಬ್ಯಾಟ್ಸ್‌ಮನ್ ವಿಲಿಸ್‌ನ ಲೆಗ್ ಸ್ಟಂಪನ್ನು ಕಿತ್ತೆಸೆದ. ಪೆವಿಲಿಯನ್ ಕಡೆಗೆ ಮರಳಿ ಹೋದ ವಿಲಿಸ್ ಹೊಸ ಬ್ಯಾಟ್ಸ್‌ಮನ್‌ಗೆ ಎಚ್ಚರಿಸುತ್ತಾ" ಎಚ್ಚರದಿಂದಿರು ಆ 'ಜೋಕರ್' ನನಗೆ ವಿಚಿತ್ರವಾಗಿ ಚೆಂಡೆಸೆದಿದ್ದ ಎಂದ.

ಆದರೆ ಈ ಎಚ್ಚರಿಕೆಯಿಂದ ಯಾವುದೇ ಲಾಭವಾಗಲಿಲ್ಲ. ಪ್ರಮೋದನ ಎಡಗೈ ಚೆಂಡೆಸೆತ ಮೂರನೇ ಬ್ಯಾಟ್ಸ್‌ಮನ್ ಮತ್ತು ಅನಂತರ ಬಂದ ಬ್ಯಾಟ್ಸ್‌ಮನ್‌ಗಳಿಗೆ ಅರ್ಥವಾಗಲೇ ಇಲ್ಲ. ಕೇವಲ ೭೮ ರನ್‌ಗಳಿಂದ ಇಂಗ್ಲೆಂಡ್ ತನ್ನ ಇನ್ನಿಂಗ್ಸ್‌ಗಳನ್ನು ಪೂರೈಸಿತು.

ಲಂಚ್ ವೇಳೆಯಲ್ಲಿ ನಾನು ಸ್ಯಾಂಡ್‌ವಿಚ್ ಚಪ್ಪರಿಸುತ್ತಾ ಅಲ್ಪ ಅವಧಿಯಲ್ಲಿ ಆಟದಲ್ಲಾದ ಈ ಅದ್ಭುತ ಪರಿವರ್ತನೆ ಬಗ್ಗೆ ವಿಚಾರ ಮಾಡುತ್ತಿದ್ದೆ. ಈ ರೀತಿಯ ಅದ್ಭುತ ಪರಿವರ್ತನೆಗಳು ಕ್ರಿಕೆಟನ್ನು ಇತರ ಆಟಗಳಿಂದ ಬೇರ್ಪಡಿಸುತ್ತವೆ. ಮೊದಲ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್ ಭಾರತಕ್ಕಿಂತ ೨೩೦ ರನ್ ಹಿಂದಿತ್ತು. ಎರಡನೇ ಇನ್ನಿಂಗ್ಸ್‌ನಲ್ಲಿ ಅದು ಸುಧಾರಿಸಿಕೊಳ್ಳುವುದೇ? ನನ್ನ ಬಳಿ ಕೂತ ಓರ್ವ ಹಿರಿಯ ಕ್ರೀಡಾಪ್ರೇಮಿಗಳು 'ರಾಂಗಣೇಕರ ಒಂದೇ ಟೆಸ್ಟ್‌ಮ್ಯಾಚ್‌ನಲ್ಲಿ ಹತ್ತೊಂಬತ್ತು ವಿಕೆಟ್ ಪಡೆದ ಜಿಮ್ ಲೇಕರ್‌ನ ದಾಖಲೆ

ಯನ್ನೂ ದಾಟಿ ಹೋಗುವನೇ? ಎಂದು ಯೋಚಿಸುತ್ತಿದ್ದರು.

ಎರಡನೇ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್ ಒಟ್ಟು ೪೫ ರನ್‌ಗಳನ್ನು ಮಾಡಿ ತಡಬಡಿಸಿತು. ಭಾರತಕ್ಕೆ ವಿರುದ್ಧವಾಗಿ ಇದು ಅದರ ಅತ್ಯಂತ ಕಡಿಮೆ 'ಸ್ಕೋರ್' ಆಗಿತ್ತು. ಪ್ರಮೋದ ಇಪ್ಪತ್ತು ವಿಕೇಟ್‌ಗಳನ್ನು ತೆಗೆದುಕೊಂಡಿದ್ದ.

ಕಡೆಗೆ ಈ ಅಸಾಧಾರಣ ಮ್ಯಾಚ್‌ನ ನಂತರ ಮತ್ತೊಂದು ಅಸಾಧಾರಣ ಘಟನೆ ಘಟಿಸಿತು. ಕಡೆಯ ವಿಕೇಟ್ ಬಿದ್ದೊಡನೆಯೇ ಪ್ರಮೋದ ಪೆವಿಲಿಯನ್ ಕಡೆಗೆ ಓಡಿದ; ಹರ್ಷಚಿತ್ತರಾದ ಭಾರತದ ಪ್ರೇಕ್ಷಕರು ಉತ್ತೇಜಿತರಾದ ಪತ್ರ ಕರ್ತರು ಮತ್ತು ಟಿ. ವಿ ಯವರು ಅವನ ಬಳಿಗೆ ತಲುಪುವುದಕ್ಕೂ ಮುಂಚೆಯೇ ಅವನನ್ನು ನಿರೀಕ್ಷಿಸುತ್ತಿದ್ದ ಕಾರಿನಲ್ಲಿ ಕೂರಿಸಿಕೊಂಡು ಹೋಗಲಾಯಿತು!

ಪ್ರಮೋದ ಎಲ್ಲಿ? ಭಾರತದ ಟೀಮಿನ ಮ್ಯಾನೇಜರ್, ಪೋಲೀಸಿನವರು ಮತ್ತು ಪತ್ರಕರ್ತರು ವಿಕ್ಷುಬ್ಧರಾಗಿ ಅವನನ್ನು ಹುಡುಕಲಾರಂಭಿಸಿದರು. ಮಾರನೇದಿನ ಭಾರತದ ಕಂಠವುಳ್ಳ ಓರ್ವ ಅಜ್ಞಾತ ವ್ಯಕ್ತಿ ಫ್ಲೀಟ್-ಸ್ಟ್ರೀಟ್ ನಲ್ಲಿರುವ ಸಮಾಚಾರ ಪತ್ರವೊಂದರ ಕಾರ್ಯಾಲಯದಲ್ಲಿ ಕಣ್ಮರೆಯಾದ ಕ್ರೀಡಾಪಟು ಪ್ರಮೋದನ ಕಡೆಯಿಂದ ಈ ಸಂದೇಶ ಕೊಟ್ಟ-

"ನಾನು ಸುರಕ್ಷಿತನಾಗಿರುವೆ. ಚಿಂತಿಸಬೇಡಿ, ಇಪ್ಪತ್ತನಾಲ್ಕು ಗಂಟೆಯೊಳಗೆ ನಾನು ಮರಳಿ ಬರುವೆ"

ಇದು ಕಪಟನಾಟಕವ್ರೋ ಅಥವಾ ವಾಸ್ತವಿಕ ಸಂದೇಶವ್ರೋ! ತನ್ನ ಸಂದೇಶದ ವಾಸ್ತವಿಕತೆಯನ್ನು ಪರೀಕ್ಷಿಸಲು ಆ ಅಜ್ಞಾತ ವ್ಯಕ್ತಿಯು, ಕ್ರೋಯಡನ್ ಇಲಾಖೆಯ ಯಾವ ಸ್ಥಳದಲ್ಲಿ ರಂಗನೇಕರನ ಅಂಗಿ ಸಿಗುವುದೆಂದು ಪೋಲೀಸ ರಿಗೆ ಹೇಳಿದ. ಪೋಲೀಸರಿಗೆ, ವಾಸ್ತವವಾಗಿಯೂ ಪ್ರಮೋದನ ಅಂಗಿ ಸಿಕ್ಕಿತು.

ಮಾರನೇದಿನ ಪ್ರಮೋದ ಬೋ ಸ್ಟ್ರೀಟ್ ಪೋಲೀಸ್ ಸ್ಟೇಷನ್‌ನಲ್ಲಿ ಕಂಡು ಬಂದ. ಆದರೆ ಆಶ್ಚರ್ಯ! ಎಲ್ಲವೂ ಪರಿವರ್ತನೆಗೊಂಡಿತ್ತು. ಅವನಿಗೆ ಟೆಸ್ಟ್ ಮ್ಯಾಚಿನ ಬಗ್ಗೆ ಒಂದು ಚೂರೂ ನೆನಪಿರಲಿಲ್ಲ. ಇಷ್ಟೇ ಅಲ್ಲದೆ, ಮ್ಯಾಚ್ ಆದ ಮೇಲೆ ಏನಾಯಿತೆಂಬ ಸ್ಮರಣೆಯೂ ಇರಲಿಲ್ಲ. ಅಲ್ಲದೆ, ಮಾನಸಿಕವಾಗಿ ಅವನು ಸ್ವಸ್ಥನಾಗಿಯೇ ಇದ್ದ. ತಾನು ಟೆಸ್ಟ್ ಮ್ಯಾಚಿನಲ್ಲಿ ಪ್ರದರ್ಶಿಸಿದ ಕರಾಮತ್ತನ್ನೂ ಅವನು ಅಪಹಾಸ್ಯ ಮಾಡಿದ. ಅವನು ತುಂಬಾ ನಮ್ರನಾಗಿ, "ಎಡಗೈಯಿಂದ ಚೆಂಡೆಸೆದು ನಾನು ಒಬ್ಬ ಶಾಲಾ ಬಾಲಕನ ವಿಕೇಟನ್ನು ಬೀಳಿಸಲಾರೆ" ಎಂದ. ಅವನ ಈ ಮಾತಿನಲ್ಲಿ ವಾಸ್ತವಿಕತೆ ಎದ್ದು ಕಾಣುತ್ತಿತ್ತು.

೧೩ ಡಿಸೆಂಬರ್, ೨೧೦೫-ಈ ದಿನಾಂಕವನ್ನು ನಾನೆಂದೂ ಮರೆಯಲಾರೆ.

ನಾನು ತಿಂಡಿ ಮುಗಿಸಿ ಒಂದು ಮಹತ್ವಪೂರ್ಣ ಭೇಟಿಗೆ ಇನ್ನೇನು ಹೋಗುವವನಿದ್ದೆ, ಆಗಲೇ ಫೋನಿನ ಗಂಟೆ ಬಾರಿಸಿತು.

"ಜಾನ್, ಇದು ನಿಮಗಾಗಿ. ಫೋನ್ ಮಾಡುತ್ತಿರುವವನು ತನ್ನ ಪರಿಚಯ ಹೇಳುತ್ತಿಲ್ಲ. ಆದರೆ, ಏನೋ ಮಹತ್ವವಾದ ವಿಚಾರವಿದೆ ಎಂದು ಹೇಳುತ್ತಿದ್ದಾನೆ" ನನ್ನ ಹೆಂಡತಿ ಎನೆ ಹೇಳಿದಳು.

"ಹೇಳಿ! ಜಾನ್ ಆರ್ಮ್‌ಸ್ಟ್ರಾಂಗ್ ಮಾತಾಡುತ್ತಿದ್ದೇನೆ" ನಾನು ಸಾಧ್ಯವಾದಷ್ಟು ನಮ್ರತೆ ತರಲು ಪ್ರಯತ್ನಿಸಿದೆ.

"ಗುಡ್ ಮಾರ್ನಿಂಗ್ ಜಾನ್! ನನ್ನ ಧ್ವನಿ ಕೇಳಿ ನಿನಗಾಶ್ಚರ್ಯವಾಗಬಹುದು. ನಾನು ಅಜೀತ್ ಮಾತಾಡ್ತಿದ್ದೀನಿ-ಅಜೀತ್ ಸಿಂಹ!"

ಅಜೀತ್‌ಸಿಂಹ! ಇಷ್ಟು ವರ್ಷಗಳಾದ ಮೇಲೆ? ಸಿಟ್ಟಿನ ಜಾಗದಲ್ಲಿ ಆಶ್ಚರ್ಯ ಆಕ್ರಮಿಸಿಕೊಂಡಿತು. "ಇಂದು ರಾತ್ರಿ ನಾನು ನಿನ್ನನ್ನು ಭೇಟಿಯಾಗಬಹುದೇ? ಒಂದು ಮಹತ್ವಪೂರ್ಣ ವಿಷಯವಿದೆ. ಸುಮಾರು ಎಂಟೂವರೆಗೆ ಬರಲೇ?" ಎಂದು ಅವನು ವಿಚಾರಿಸಿದ. ಅವನು ಭೇಟಿಯ ವ್ಯವಸ್ಥೆಗೆ ನಿರ್ದೇಶಿಸುತ್ತಿದ್ದಾನೆಂದು ನನಗನ್ನಿಸಿತು. ನಾನು ಅಧಿಕಾರದ ವಾಣಿಯಲ್ಲಿ, "ಡಿನ್ನರ್‌ಗೆ ಬಾ.... ನಾವಿಬ್ಬರೂ ಅವಳ ಡಿನ್ನರ್‌ಗೆ ಬಲಿಯಾಗೋಣ" ಎಂದೆ.

"ಖಂಡಿತಾ-ಖಂಡಿತಾ! ಧನ್ಯವಾದಗಳು!" ಎಂದು ಅಜಿತ್ ಫೋನನ್ನಿಡಬೇಕೆಂಬುವಾಗ ಒಮ್ಮೆಲೆ ಅವನಿಗೆ ಒಂದು ವಿಷಯ ನೆನಪಾಯಿತು. ಅವನು ಮುಂದುವರಿದು," ಜಾನ್, ನಾನು ಫೋರ್ಕ್ ಮತ್ತು ಫಾರ್‌ಸೆಪ್ಸ್ ಉಪಯೋಗಿಸದೇ ತಿಂದರೆ ನೀನು ಮತ್ತು ಎನೆ ಬೇಜಾರು ಮಾಡಿಕೊಳ್ಳುವುದಿಲ್ಲವೇ?"

ಫೋರ್ಕ್-ಫಾರ್‌ಸೆಪ್ಸ್ ಬಗ್ಗೆ ಚರ್ಚೆ ಯಾಕೆ? ನಾನು ಅಜೀತ್‌ಗೆ ಹೇಳಬೇಕೆಂದಿರುವಾಗ ಅವನು ಫೋನನ್ನು ಕೆಳಗಿಟ್ಟ.

ಪಳದ್ಯ ಮಾಡುವ ಅವಕಾಶ ದೊರೆತಿದ್ದರಿಂದ ಎನೆಗೆ ತುಂಬಾ ಖುಷಿಯಾಗಿತ್ತು. ಕೆಲವು ಭಾರತೀಯ ಸಿಹಿ-ತಿನಿಸುಗಳನ್ನು ಮಾಡಲು ಅವಳು ನಿಶ್ಚಯಿಸಿದಳು. ಪಾಕ-ಶಾಸ್ತ್ರದ ಪುಸ್ತಕದಲ್ಲಿ ಅವಳನ್ನು ತೊಡಗಿಸಿ ನಾನು ರೈಲು ಹಿಡಿಯಲು ಹೊರಟೆ ನನ್ನ ತಲೆಯಲ್ಲಿ, ಅಜೀತ್ ಮತ್ತು ರಾತ್ರಿ ಅವನೊಂದಿಗಾಗುವ ಭೇಟಿಯ ಬಗ್ಗೆ ಅನೇಕ ವಿಚಾರಗಳು ಮೂಡುತ್ತಿದ್ದವು.

ಕ್ಯಾಂಬ್ರಿಜ್‌ನಲ್ಲಿ ಪ್ರಮೋದ ಮತ್ತು ಅಜೀತ್ ನನ್ನ ಸಹಪಾಠಿಗಳಾಗಿದ್ದರು. ಕಾಲೇಜಿನ ಒಂದೇ ಮೆಟ್ಟಿಲಲ್ಲಿ ನಮ್ಮ ಕೋಣೆಗಳಿದ್ದವು. ಕ್ರಿಕೇಟ್ ಬಗ್ಗೆ

ನನಗೂ ಮತ್ತು ಪ್ರಮೋದನಿಗೂ ಸಮಾನವಾದ ಆಸಕ್ತಿಯಿತ್ತು. ಮೊದಲ ಗ್ರೀಷ್ಮದವರೆಗೂ ನಾವಿಬ್ಬರೂ 'ಯೂನಿವರ್ಸಿಟಿ ಎಲೆವೆನ್'ಗಾಗಿ ಚುನಾಯಿಸಲ್ಪಟ್ಟಿದ್ದೆವು. ಅಜೀತನೊಂದಿಗೆ ನನ್ನ ಸಂಬಂಧ ಇನ್ನೊಂದು ವಿಧದಲ್ಲಿತ್ತು. ನಾವಿಬ್ಬರೂ ಭಾರತೀಯ ದರ್ಶನಶಾಸ್ತ್ರದ ಬಗ್ಗೆ ಉದ್ದುದ್ದ ಚರ್ಚೆಗಳಲ್ಲಿ ತೊಡಗುತ್ತಿದ್ದೆವು–ಒಂದೊಂದು ವೇಳೆ ಈ ಚರ್ಚೆಯಲ್ಲಿ ಬೆಳಗಾಗಿ ಬಿಡುತ್ತಿತ್ತು. ಈ ಚರ್ಚೆಯೇ ನನ್ನನ್ನು ಭಾರತದ ದರ್ಶನ ಶಾಸ್ತ್ರದೆಡೆಗೊಯ್ಯಿತು. ಅಜೀತ್ ಭೌತಿಕ ಶಾಸ್ತ್ರದ ವಿದ್ಯಾರ್ಥಿಯಾಗಿದ್ದ. ಅವನು "ಮ್ಯಾಥಮೆಟಿಕಲ್ ಟ್ರಿಪೋಸ್'ನ ಮೂರನೇ ಪಾರ್ಟ್‌ನಲ್ಲಿ ಭಾಗವಹಿಸಿದ್ದ ಅಲ್ಲದೆ, 'ಮೆಹ್ಯೂ ಪುರಸ್ಕಾರ'ವನ್ನೂ ಪಡೆದಿದ್ದ. ಆಮೇಲೆ ಅವನು ಭೌತಶಾಸ್ತ್ರವನ್ನು ಚುನಾಯಿಸಿದ್ದ. ಇಲ್ಲೂ ಅವನೊಂದು ವಿಶಿಷ್ಟ ಸ್ಥಾನವನ್ನು ಮಾಡಿಕೊಂಡ. ಮೂರು ವರ್ಷಗಳಾದ ಮೇಲೆ ನಾನಂತೂ ಕ್ಯಾಂಬ್ರಿಜ್ ಬಿಟ್ಟುಬಿಟ್ಟೆ ಆದರೆ, ಅಜೀತ್ ಕ್ಯಾವೆನ್‌ಡಿಶ್‌ನಲ್ಲಿ ಸಂಶೋಧನೆಯಲ್ಲಿ ಮಗ್ನನಾದ. ಒಂದೊಂದು ಸಲ ನಾವು ಭೇಟಿಯಾಗುತ್ತಿದ್ದೆವು. ಪತ್ರವ್ಯವಹಾರವನ್ನೂ ಮಾಡುತ್ತಿದ್ದೆವು. ಅವನಿಗೆ ಸ್ಮಿಥ್ ಪುರಸ್ಕಾರ ಸಿಕ್ಕಾಗ ನಾನು ಅವನಿಗೆ ಪತ್ರ ಬರೆದಿದ್ದು ನನಗಿನ್ನೂ ನೆನಪಿದೆ. ಆಮೇಲೆ ನಾವು ಭೇಟಿಯಾಗುವುದು ಕಡಿಮೆಯಾಯಿತು. ಲಂಡನ್ನಿನ ಸಂಗ್ರಹಾಲಯದಲ್ಲಿ ಕ್ಯೂರೇಟರ್‌ನ ಈಗಿನ ಪದವಿಯನ್ನು ನೋಡಿಕೊಳ್ಳುವುದಕ್ಕೂ ಮೊದಲು ಪುರಾತತ್ವ ಶೋಧನೆಗಳ ಸಂಬಂಧದಲ್ಲಿ ನಾನು ಭಾರತೀಯ ಉಪಮಹಾದ್ವೀಪಕ್ಕೂ ಹೋದೆ.

ಅಜೀತ್ ಸದಾ ಏಕಾಂಗಿಯಾಗಿರುತ್ತಿದ್ದ. ನನ್ನ ಹೊರತು ಬೇರ್ಯಾರೂ ಅವನಿಗೆ ಮಿತ್ರರಿರಲಿಲ್ಲ. ಅಜೀತ್ ಕಾಲೇಜಿನ ಫೆಲೋಶಿಪ್ ಬಿಟ್ಟುಬಿಟ್ಟಿದ್ದ. ಈಗ ಇಂಗ್ಲೆಂಡಿನಲ್ಲಿ ಒಂದು ಅನುಸಂಧಾನ ಕೇಂದ್ರದಲ್ಲಿ ಕಾರ್ಯಮಗ್ನನಾಗಿದ್ದ. ಅವನೆಂದೂ ನನಗೆ ಹೇಳದಿದ್ದಾಗ್ಯೂ ಅವನ ಕೆಲಸ ತುಂಬಾ ಗೋಪನೀಯವಾಗಿತ್ತೆಂದು ನನಗೆ ವಿಶ್ವಾಸವಿದೆ.

ಇಂದು, ಅವನು ಅದರ ಬಗ್ಗೆಯೇ ನನಗೆ ಹೇಳುವನೇ?

ಎಂಟೂವರೆಗೆ ಸರಿಯಾಗಿ ಗಂಟೆ ಬಾರಿಸಿತು. ಅಜೀತ್‌ನನ್ನು ಗುರುತು ಹಿಡಿಯುವಲ್ಲಿ ನನಗೇನೂ ಕಷ್ಟವಾಗಲಿಲ್ಲ. ಅವನು ಸ್ವಲ್ಪ ಕೃಶನಾಗಿದ್ದ, ತಲೆ ಕೂದಲುಗಳೂ ಅಲ್ಲಲ್ಲಿ ಶ್ವೇತ ಬಣ್ಣಕ್ಕೆ ತಿರುಗಿದ್ದುವು. ಆದರೆ, ಅವನಲ್ಲಿ ಇನ್ನೂ ಸೂಕ್ಷ್ಮ ಪರಿವರ್ತನೆಯಾಗಿತ್ತು. ಈ ಎಲ್ಲಾ ಘಟನೆಗಳು ಜರುಗಿದ ಮೇಲೆ, ಇಂದಿಗೂ ನಾನು ಅದನ್ನು ಪುಷ್ಟೀಕರಿಸಬಲ್ಲೆ. ಆದರೂ ಆಗ ಅವನಲ್ಲಿ ಏನು

ಪರಿವರ್ತನೆಯಾಗಿತ್ತೆಂದು ಸರಿಯಾಗಿ, ಪ್ರಾಮಾಣಿಕವಾಗಿ ಹೇಳಲಾರೆ.

ಎನೆ ನಮಗೆ ತಟ್ಟೆಗಳಲ್ಲಿ ಊಟ ಬಡಿಸಿದಳು. ಭೋಜನದ ಮಧ್ಯೆ ಅಜೀತ್ ಸ್ವಲ್ಪ ಮೌನಿಯಾಗಿಯೇ ಇದ್ದ. ನನಗೆ ಆಶ್ಚರ್ಯವಾಗಲಿಲ್ಲ. ಅಜೀತ್ ಎಂದೂ ವಾಚಾಳಿಯಾಗಿರಲಿಲ್ಲ. ಆದರೆ ಅವನ ಊಟ ಮಾಡುವ ವಿಧಾನದಿಂದ ನನಗಂತೂ ಆಶ್ಚರ್ಯವಾಯಿತು. ಅಜೀತ್ ತನ್ನ ಬೆರಳುಗಳಿಂದ ಯೂರೋಪಿಯನ್ನರಂತೆ ಊಟ ಮಾಡುತ್ತಿದ್ದ. ನಾನು ಮತ್ತು ಎನೆ ಈ ಬಗ್ಗೆ ಟೀಕೆಯನ್ನೂ ಮಾಡಿದೆವು. ಆಗ ಅಜೀತ, "ಪಶ್ಚಿಮದಲ್ಲಿ ವರ್ಷಾನುಗಟ್ಲೆ ಇದ್ದಿದ್ದರಿಂದಾಗಿ ನಾನು ಭಾರತೀಯ ಪದ್ಧತಿ ಪ್ರಕಾರ ಊಟ ಮಾಡುವುದನ್ನು ಸುಮಾರಾಗಿ ಮರೆತುಬಿಟ್ಟಿದ್ದೇನೆ" ಎಂದ.

ಊಟವಾದ ಮೇಲೆ ನನ್ನ ಮಗ ಕೆನ್ ಪುಸ್ತಕವೊಂದನ್ನು ಹಿಡಿದು ತಂದ. ಅವನು ಅಜೀತ್‌ಗೆ, "ಅಂಕಲ್, ನೀವು ನನ್ನ ಕಳೆದ ಹುಟ್ಟುಹಬ್ಬದಂದು ಈ ಪುಸ್ತಕವನ್ನು ಉಡುಗೊರೆಯಾಗಿ ಕಳುಹಿಸಿದ್ದಿರಿ, ಆದರೆ, ನೀವು ಅದರ ಮೇಲೆ ಹಸ್ತಾಕ್ಷರ ಮಾಡುವುದನ್ನು ಮರೆತುಬಿಟ್ಟಿದ್ದಿರಿ" ಎಂದ.

ನನಗೂ ಅದು ನೆನಪಾಯಿತು. ಪುಸ್ತಕದ ಮೇಲೆ 'ಕೆನ್‌ಗೆ-ಏಳನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ' ಎಂದು ಬರೆಯಲಾಗಿತ್ತು. ಅಜೀತ್ ಹಸ್ತಾಕ್ಷರವನ್ನು ಮಾಡಿರಲಿಲ್ಲ.

ಅಜೀತ್ ಪುಸ್ತಕ ತೆಗೆದುಕೊಂಡು ಅದನ್ನು ನೋಡಿ, "ಕೆನ್ ! ನನ್ನ ಕಣ್ಣುಗಳಲ್ಲಿ ನೋವಿದೆ. ಈಗ್ಲೆ ನಾನು ಸಹಿ ಮಾಡಲಾರೆ" ಎಂದ.

"ಅಲ್ಲಿ ನಿನ್ನ ಸಹಿ ಮಾಡೋದ್ರಲ್ಲಿ ನಿನ್ನ ಕಣ್ಣಿಗೇನೂ ಪೆಟ್ಟಾಗಲ್ಲ" ಎಂದೆ ನಾನು.

"ಇಲ್ಲ, ಡಾಕ್ಟರ್ ಮಾಡಲೇಬಾರದೆಂದು ಹೇಳಿದ್ದಾರೆ" ಎಂದ. ಅವನ ಮಾತಿನಲ್ಲಿ ದೃಢತೆಯಿತ್ತು. ನಾನು ಒತ್ತಾಯಿಸಲಿಲ್ಲ.

ಸ್ವಲ್ಪ ಹೊತ್ತಾದ ಮೇಲೆ ನಾನು ಅವನಿಗೆ "ಸರಿ, ಅಜೀತ್, ಇವತ್ತು ರಾತ್ರಿ ಯಾಕೆ ಬಂದೆ, ಹೇಳು ? ಎಂದಾಗ ಅವನು ಮುಗುಳ್ನಗುತ್ತಾ ಬ್ರೀಫ್‌ಕೇಸಿನಿಂದ ಒಂದು ಪ್ಯಾಕೇಟ್ ತೆಗೆದು ಅದನ್ನು ಬಿಚ್ಚಿದ.

ಪ್ಯಾಕೇಟ್‌ನಲ್ಲಿ ನೃತ್ಯ ಮಾಡುತ್ತಿರುವ ಒಂದು ಸುಂದರ ಗಣೇಶನ ವಿಗ್ರಹ ವಿತ್ತು (ಸಾಮಾನ್ಯವಾಗಿ ಗಣೇಶನ ವಿಗ್ರಹಗಳು ಕುಳಿತಿರುವ ಭಂಗಿಯಲ್ಲಿರುತ್ತವೆ). ನಾನು ಆ ವಿಗ್ರಹವನ್ನು ತಕ್ಷಣ ಗುರುತಿಸಿದೆ. ಇಂಥಹುದೇ ಒಂದು ವಿಗ್ರಹ ನನ್ನ ಸಂಗ್ರಹಾಲಯದಲ್ಲೂ ಇತ್ತು. ಆ ವಿಗ್ರಹ ಪೇಶ್ವೆಗಳ ಕಾಲದ್ದಾ

ಗಿದ್ದು ಶನಿವಾರ ವಾಡಾ (ಪೂನಾ) ದಿಂದ ಸಿಕ್ಕಿತ್ತು. ನನ್ನ ಸಂಗ್ರಹಾಲಯಕ್ಕೆ ಹೇಗೆ ಬಂತು ಎಂಬುವುದಕ್ಕೆ ಒಂದು ಉದ್ದ ಇತಿಹಾಸವೇ ಇತ್ತು. ಆದರೆ, ಈ ದುರ್ಲಭ ವಿಗ್ರಹದ ನಕಲು ಅವನಿಗೆ ಹೇಗೆ ಸಿಕ್ಕಿತೆಂದು ನನಗಾಶ್ಚರ್ಯ ವಾಗುತ್ತಿತ್ತು !

"ಎಚ್ಚರಿಕೆಯಿಂದ ಗಮನಿಸು. ಇದು ಆ ವಿಗ್ರಹದ ನಕಲೇ? ಅಜೀತನ ಮುಖದಲ್ಲಿ ಆಹ್ವಾನಿಸುವವರಂತೆ ಮುಗುಳ್ನಗೆಯಿತ್ತು.

ನಾನು ವಿಗ್ರಹವನ್ನು ಗಮನವಿಟ್ಟು ನೋಡಿದೆ–ಹೌದು, ಈ ವಿಗ್ರಹವನ್ನು ಅದೇ ಶಿಲ್ಪಿ ಕೆತ್ತಿರಬಹುದು. ಒಮ್ಮೆಲೆ, ನನಗೆ ಎರಡು ವಿಗ್ರಹಗಳಲ್ಲೂ ಒಂದು ಸ್ಪಷ್ಟ ಅಂತರ ಗೋಚರಿಸಿತು. ಈ ಅಂತರವನ್ನು ಮೊದಲ ನೋಟಕ್ಕೇ ಗುರುತಿಸ ಬೇಕಾಗಿತ್ತು. ನಾನು ಹೇಗೆ ವಂಚಿತನಾದೆ ?

ಗಣೇಶನ ಸೊಂಡಿಲು ಎಡಗಡೆಯಿರುವುದಕ್ಕೆ ಬದಲಾಗಿ ಬಲಗಡೆಯಿತ್ತು !

ಈ ಅಂತರ ವಿಗ್ರಹವನ್ನು ಅತ್ಯಮೂಲ್ಯಗೊಳಿಸಿತ್ತು. ನಾನು ಅಜೀತನಿಗೆ ಈ ವ್ಯತ್ಯಾಸದ ಬಗ್ಗೆ ಹೇಳಿದೆ.

ಅಜೀತನಿಗೆ ಆಶ್ಚರ್ಯಕ್ಕೆ ಬದಲಾಗಿ ತಮಾಶೆಯ ನಗು ಬರುತ್ತಿದೆಯೆಂದು ನನಗನ್ನಿಸಿತು. ಅವನು "ನೀನು ಇದನ್ನು ಬೆಲೆಯುಳ್ಳದ್ದೆಂದು ತಿಳಿಯುತ್ತಿದ್ದೀ ಯಲ್ಲ. ನಾನಿದನ್ನು ನಿಮ್ಮ ಸಂಗ್ರಹಾಲಯಕ್ಕೆ ಉಡುಗೊರೆಯಾಗಿ ಕೊಡ ಬಹುದೇ ?" ಎಂದು ಪ್ರಶ್ನಿಸಿದ.

ಅವನ ಉದಾರ ಉಡುಗೊರೆಗಾಗಿ ಅವನಿಗೆ ಧನ್ಯವಾದಗಳನ್ನರ್ಪಿಸಿದೆ. ವಿಗ್ರಹದ ಚರಿತ್ರೆಯನ್ನು ತಿಳಿಯಲು ಬಯಸಿದೆ.

"ಆ ಸಮಯ ಬಂದಾಗ ಹೇಳುವೆ. ಆದರೆ ಜಾನ್, ನಿನಗಂತೂ ಚೆನ್ನಾಗಿಯೇ ಗೊತ್ತಿದೆ. ನನ್ನ ಶರೀರದಲ್ಲಿ ಗುರುತಿನ ಯಾವ ಚಿಹ್ನೆಯಿದೆ ?"

ಆಕಸ್ಮಿಕ ವಿಷಯ ಪರಿವರ್ತನೆಯಿಂದ ನನಗಾಶ್ಚರ್ಯವಾಯಿತು. ಆದರೆ, ನನಗೆ ಅವನ ಪ್ರಶ್ನೆಗೆ ಉತ್ತರ ಗೊತ್ತಿತ್ತು.

"ನಿನ್ನ ಎಡಗೈ ಉಂಗುರ, ಬಲಗೈಗಿಂತ ಅರ್ಧ ಇಂಚು ಚಿಕ್ಕದು" ಎಂದೆ.

"ನಿನಗೆ ದೃಢವಾಗಿ ನಂಬಿಕೆಯಿದೆಯಾ ?"

"ಹೌದು"

ಅಜೀತ್ ತನ್ನೆರಡೂ ಕೈಗಳನ್ನು ನನ್ನೆಡೆಗೆ ಚಾಚಿದ.

ಅವನ ಬಲಗೈ ಉಂಗುರ ಎಡಗೈನ ಉಂಗುರಕ್ಕಿಂತ ಚಿಕ್ಕದಾಗಿದ್ದನ್ನು ಕಂಡು ನನಗಾಶ್ಚರ್ಯವಾಯಿತು.

"ನೀನು ಆರೋಗ್ಯವಾಗಿದ್ದೀಯಲ್ಲ?" ಅವನು ಪ್ರಶ್ನಿಸಿದ.

"ನೀನ್ಯಾರು?" ನಾನು ಆವೇಶದಲ್ಲಿ ಕೇಳಿದೆ.

"ನೋಡು. ನಾನು ಅಜೀತ. ಸ್ವಲ್ಪ ಬದಲಾಯಿಸಿದ್ದೇನೆ."

ನನ್ನ ಮೆದುಳಲ್ಲಿ ಒಂದು ವಿಚಿತ್ರ, ಆದರೆ ಸುಸ್ಪಷ್ಟವಾದ ಚಿತ್ರ ಮೂಡಲಾರಂಭಿಸಿತು. ನಾನು ಅಜೀತನನ್ನು ಕನ್ನಡಿಯೆದುರಿಗೆ ನಿಲ್ಲಿಸಿದೆ. ನನಗುತ್ತರ ಸಿಕ್ಕಿತು. ಕನ್ನಡಿಯಲ್ಲಿ ನನಗೆ ಅಜೀತ್‌ನ ಚಿರಪರಿಚಿತ ರೂಪ ಕಂಡಿತು. ಅಜೀತ ಹೇಗೋ ತನ್ನನ್ನು ಕನ್ನಡಿಯಲ್ಲಿ ಬೀಳುವ ಪ್ರತಿಬಿಂಬದಂತೆ ಮಾಡಿಕೊಂಡನೇ?

ನನಗೆ ಪ್ರಮೋದನ ಎಡಗೈಯ ವಿಲಕ್ಷಣ ಆಟದ ನೆನಪಾಯಿತು. ಅವನು ವಾಸ್ತವವಾಗಿಯೂ ಪ್ರಮೋದನಾಗಿದ್ದನೋ ಅಥವಾ ಅವನ ಪ್ರತಿಬಿಂಬವೋ?"

"ಕ್ಷಮಿಸು, ನನ್ನ ಮಾತುಗಳಿಂದ ನಿನಗೆ ಆಘಾತವಾಗಿರಬಹುದು, ಆದರೆ ಈ ಕಲ್ಪನಾತೀತ ಶೋಧದ ಬಗ್ಗೆ ನಿನಗೆ ಮನವಟ್ಟು ಮಾಡಲು ಬೇರೇನೂ ಉಪಾಯವೂ ಇರಲಿಲ್ಲ. ಈಗ ನಿನಗೆ ವಿವರವಾಗಿ ಹೇಳುವೆ—"

"ಆದರೆ, ಮೊದಲು ಒಂದು ವಿಷಯ ಹೇಳು. ಪ್ರಮೋದನ ರಹಸ್ಯಭರಿತ ಆಟ-ಪ್ರದರ್ಶನದ ಹಿಂದೆಯೂ ನಿನ್ನ ಕೈವಾಡವಿತ್ತೆ?"

"ಹೌದು" ಎಂದ ಅಜೀತ್.

ಅವನು ಹೇಳಿದ ಕಥೆ ಅವನ ಮಾತುಗಳಲ್ಲಿ ಈ ರೀತಿ ಇದೆ—ನಾನು, ಕ್ಯಾಂಬ್ರಿಜ್‌ನಲ್ಲಿ ಐನ್‌ಸ್ಟೈನಿನ ಸಾಪೇಕ್ಷತಾವಾದದ ಸಿದ್ಧಾಂತಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದಾಗ ನನ್ನ ಮನಸ್ಸಿನಲ್ಲಿ ಒಂದು ವಿಚಿತ್ರ ಭಾವನೆಯು ಜನ್ಮತಾಳಿತು. ಬಹುಶಃ, ನೀನು ಐನ್‌ಸ್ಟೈನಿನ ಈ ಸಿದ್ಧಾಂತಗಳ ಬಗ್ಗೆ ತಿಳಿದಿಲ್ಲ.

ಗುರುತ್ವಾಕರ್ಷಣ ಮತ್ತು ಸಮಯದ ಜ್ಯಾಮಿತಿಯಲ್ಲಿ ಪರಿವರ್ತನೆ ತರುವುದೆಂದು ಐನ್‌ಸ್ಟೈನಿನ ವಿಚಾರವಾಗಿತ್ತು. ಯೂಕ್ಲಿಡ್‌ನ ಜ್ಯಾಮಿತಿ ನಮಗೆ ಗೊತ್ತಿದೆ. ಸುಮಾರು ನೂರಾಐವತ್ತು ವರ್ಷಗಳ ಹಿಂದೆ ಗಣಿತ ಶಾಸ್ತ್ರಜ್ಞರು, ಯೂಕ್ಲಿಡ್‌ನ ಜ್ಯಾಮಿತಿಯೊಂದೇ ತರ್ಕಯುಕ್ತವಾದದ್ದೆಂದು ಭಾವಿಸಲಾರಂಭಿಸಿದರು. ಆದರೆ, ಹೀಗಲ್ಲ. ಯೂಕ್ಲಿಡ್‌ನ ಸ್ಥಿರ ಸಿದ್ಧಾಂತಗಳಿಗೂ ಹೊರತುಪಡಿಸಿ ಇತರ ಜ್ಯಾಮಿತಿಗಳ ಬಗ್ಗೆಯೂ ವಿಚಾರ ಮಾಡಬಹುದು. ಸನ್ ೧೯೧೫ ರಲ್ಲಿ ಐನ್‌ಸ್ಟೈನನು, ಪ್ರಪ್ರಥಮವಾಗಿ ಈ ವಿಚಾರಗಳಿಗೆ ಒಂದು ಗಟ್ಟಿಯಾದ ರೂಪ ಕೊಟ್ಟ. ಗುರುತ್ವಾಕರ್ಷಣೆಯನ್ನುಂಟು

ಮಾಡುವ ವಿಶಾಲ ವಸ್ತುಗಳ ಸುತ್ತಮುತ್ತ ಯೂಕ್ಲಿಡ್‌ನ ಜ್ಯಾಮಿತಿಗಿಂತಲೂ ಭಿನ್ನ ಜ್ಯಾಮಿತಿಗಳಿವೆಯೆಂಬುದು ಅವನ ತರ್ಕವಾಗಿತ್ತು. ಅವರು ಕೆಲವು ಸಮೀಕರಣಗಳನ್ನೂ ಕೊಟ್ಟರು. ಕಳೆದ ಶತಮಾನದ ಉತ್ತರಾರ್ಧದಲ್ಲಿ ಅವನ ಕೆಲವು ಅನುಮಾನಗಳನ್ನು ಪರೀಕ್ಷಿಸಲಾಯಿತು.

ಉದಾಹರಣೆಗಾಗಿ, ನಾವು ಪ್ರಕಾಶ-ಕಿರಣಗಳು ನೇರವಾಗಿ ಚಲಿಸುತ್ತವೆಯೆಂಬುದಾಗಿ ತಿಳಿಯುತ್ತೇವೆ. ಆದರೆ ವಿಭಿನ್ನ ಜ್ಯಾಮಿತಿಗಳಲ್ಲಿ ನೇರ ರೇಖೆಯೆಂಬುದರ ಅರ್ಥ ಮತ್ತು ಮಾನದಂಡ ವಿಭಿನ್ನವಾಗಿರುತ್ತದೆ. ಸೂರ್ಯನ ಬಳಿ ಅದರ ತೀವ್ರಗುರುತ್ವಾಕರ್ಷಣೆ ಜ್ಯಾಮಿತಿಯಲ್ಲಿ ಮಹತ್ವಪೂರ್ಣ ಪರಿವರ್ತನೆ ಉಂಟುಮಾಡುತ್ತದೆ. ಪರಿಣಾಮಸ್ವರೂಪವಾಗಿ ಸೌರ-ಮಂಡಲದ ಬಳಿಯಿಂದ ಹಾಯ್ದು ಹೋಗುವ ಪ್ರಕಾಶಕಿರಣದ ಮಾರ್ಗ, ಸೂರ್ಯನ ಅನುಪಸ್ಥಿತಿಯಲ್ಲಿರುವ ಮಾರ್ಗಕ್ಕಿಂತ ಭಿನ್ನವಾಗಿರುವುದು.

ಅಂತರಿಕ್ಷ-ಸಮಯದ ಜ್ಯಾಮಿತಿ 'ಸಮತಲ'ಕ್ಕೆ ಬದಲಾಗಿ 'ಬಳಸಾಗಿರು'ತ್ತದೆಂದು ಸಾಪೇಕ್ಷವಾದದ ಭಾಷೆಯಲ್ಲಿ ನಾವು ಹೇಳಬಹುದು. ಗೋಳಾಕಾರ ಪಿಂಡದಲ್ಲಿ ಚಲಿಸುವ ಒಂದು ದ್ವಿಆಯಾಮ ಸಮತಲ ಜೀವಿ ಧರೆಯ 'ಬಳಸಿನ' ಬಗ್ಗೆ ಎಚ್ಚರಿಕೆಯಿಂದಿರುತ್ತದೆ. ಈಗ ಇಂತಹ ಒಂದು ಹೆಚ್ಚು ಆಯಾಮಗಳ ಬಳಸಿನ ಕಲ್ಪನೆಯನ್ನೂ ಮಾಡಬಹುದು. ವಿಚಾರದಲ್ಲಿ ಇದು ಕಷ್ಟವಾದರೂ ಗಣಿತದಲ್ಲಿ ಇದು ಸಹಜ!

ನಾನು ಈಗ ಇನ್ನೊಂದು ಅಭಿಪ್ರಾಯದ ಬಗ್ಗೆ ಹೇಳುವೆ. ಇದು 'ಮೋಡ್' ಬಗ್ಗೆಯಿದೆ. ನೀನು 'ಮೋಬಿಯಸ್-ಮೋಡ್' ಬಗ್ಗೆ ಕೇಳಿರುವೆಯಾ? ಬೆಲ್ಟ್‌ಗೆ ಒಂದು ತಿರುವುಕೊಟ್ಟು ಇದನ್ನು ಪಡೆಯಬಹುದು. ಇದರಲ್ಲಿ ಅನೇಕ ವಿಚಿತ್ರತೆಗಳಿವೆ. ಉದಾಹರಣೆಗೆ ಸಾಮಾನ್ಯ ಬೆಲ್ಟ್‌ನಂತೆ ಅದರಲ್ಲಿ ಎರಡು ಮೇಲ್ಮೈಗಳಿರುವುದಕ್ಕೆ ಬದಲು ಒಂದೇ ಮೇಲ್ಮೈಯಿರುತ್ತದೆ. ಸಾಮಾನ್ಯ ಬೆಲ್ಟನ್ನು ನಡುವಿನಿಂದ ಕತ್ತರಿಸಿದಾಗ ಎರಡು ಬೆಲ್ಟ್‌ಗಳು ಸಿಗುತ್ತವೆ. 'ಆದರೆ ಮೋಬಿಯಸ್' ಇರುವ ಬೆಲ್ಟ್‌ನ್ನು ಕತ್ತರಿಸಿದಾಗ ನಿನಗಾಶ್ಚರ್ಯವಾಗುವುದು.

ಈಗ, ಒಂದು ಮೇಲ್ಮೈಯಿರುವ 'ಮೋಬಿಯಸ್-ತಿರುವು' (ಮೋಡ್ = ತಿರುವು) ಮೇಲೆ ಸಣ್ಣದೊಂದು ಸಮತಲ ಜೀವಿ ಚಲಿಸುತ್ತಿದೆಯೆಂದು ಕಲ್ಪಿಸಿಕೋ. ಅದಕ್ಕೆ ಒಂದೇ ಒಂದು ಕೈಯಿದೆ ಎಂದು ತಿಳಿದುಕೋ—ಎಡಗೈ. ಯಾವಾಗ ಅದು ಈ ಪಟ್ಟಿ ಮೇಲೆ ಒಂದು ಸುತ್ತು ಪೂರ್ಣ ಹಾಕುವುದೋ ಆಗ ಅದಕ್ಕೆ ಎಡಗೈಯಲ್ಲಿ, ಬಲಗೈಯಿದೆಯೆಂಬುದನ್ನು ನೀನು ನೋಡುವೆ.

ನಿನಗೆ ನಂಬಿಕೆ ಬರದಿದ್ದರೆ ಒಂದು ಕಾಗದದ ಪಟ್ಟಿಯಲ್ಲಿ ಪ್ರಯೋಗ ಮಾಡಿ ನೋಡು. ಕ್ರಿಯಾಮಿ ಅಂತರಿಕ್ಷದಲ್ಲಿ ನಾವು ಎತ್ತರದಿಂದ ಅದನ್ನು ನೋಡಿದರೆ ಆ ಜೀವಿ ತನ್ನ ತಲೆಯಿಂದ ಕಾಲಿನವರೆಗೂ ಹಾಯ್ದುಹೋಗುವ ಅಚ್ಚುಮರದಲ್ಲಿ ಅರ್ಧ ಸುತ್ತಿದೆಯೆಂದು ಅನ್ನಿಸುವುದು, ಆದರೆ, ಇದು ಆ ಜೀವಿಗೆ ತಿಳಿಯುವುದಿಲ್ಲ.

ಈಗ ನಾವು ನಮ್ಮ ನಾಲ್ಕು ಆಯಾಮಗಳ ಅಂತರಿಕ್ಷ–ಸಮಯದಲ್ಲಿ ಇಂತಹ ತಿರುವಿನ ಬಗ್ಗೆ ಕಲ್ಪಿಸಿಕೊಳ್ಳೋಣ. ಆ ಜೀವಿಯಂತೆಯೇ ನಮಗೂ ಇಂಥಹ ಪರಿವರ್ತನೆಗಳ ಸುಳಿವು ಸಿಗುವುದಿಲ್ಲ. ಇಂತಹ ತಿರುವಿನ ಮಧ್ಯೆ ಹಾಯ್ದಾಗ ನಾವು ಕನ್ನಡಿಯಲ್ಲಿ ಬೀಳುವ ನಮ್ಮ ಪ್ರತಿಬಿಂಬದಂತೆಯೇ ಕಾಣಿಸುತ್ತೇವೆ; ಆದರೆ ವಾಸ್ತವವಾಗಿ ನಾವು ಹೆಚ್ಚು ಆಯಾಮಗಳಲ್ಲಿ ಸುತ್ತಿ ನಮ್ಮ ಪಾರ್ಶ್ವವನ್ನಷ್ಟೇ ತೋರಿಸುತ್ತೇವೆ.

ಅಂತರಿಕ್ಷ–ಸಮಯದಲ್ಲಿ ನಾವು ಇಂತಹ ತಿರುವನ್ನು ಸೃಷ್ಟಿಸಬಲ್ಲೆವೆ? ಇದನ್ನೇ ನಾನು ಐನ್‌ಸ್ಟೀನನ ಸಿದ್ಧಾಂತದಿಂದ ಜೊತೆಯಾಗಿ ನನ್ನ ಸಿದ್ಧಾಂತವನ್ನು ರೂಪಿಸಿದೆ. ಅಣುವಿನ ಚಿಕ್ಕ ಭಾಗಗಳಲ್ಲಿ ಕಂಡುಬರುವ ಅವುಗಳ ಬಳಸುವಿಕೆಯ ಗುಣಗಳಿಂದ ಅಂತರಿಕ್ಷದಲ್ಲೂ ಇಂತಹ ತಿರುವನ್ನು ಸೃಷ್ಟಿಸಬಹುದೆಂದು ನನಗೆ ಆಸೆಯಿತ್ತು. ಈ ರೀತಿಯ ತಿರುವನ್ನು ಸೃಷ್ಟಿಸಲು ನಾನು ಅಣುಗಳ ಮೂಲದ ಧಾರೆಯೊಂದನ್ನು ಸಿದ್ಧಪಡಿಸುವ ಅಗತ್ಯವಿತ್ತು. ಈ ಧಾರೆಯಲ್ಲಿ ಈ ಕಣಗಳು ವ್ಯವಸ್ಥಿತವಾಗಿ ಸುತ್ತುತ್ತವೆ.

ಆರು ತಿಂಗಳ ಪೂರ್ವದಲ್ಲಿ ನಾನು ನನ್ನ ಪ್ರಯೋಗದಲ್ಲಿ ಯಶಸ್ಸನ್ನು ಸಾಧಿಸಿದೆ. ಪ್ರಪ್ರಥಮವಾಗಿ ನಾನು ಮಣಿಕಟ್ಟಿಗೆ ಕಟ್ಟಿದ್ದ ನನ್ನ ವಾಚಿನ ಮೇಲೆ ಪ್ರಯೋಗ ಮಾಡಿದೆ. ಕಡೆಗೆ ಹುಳುಗಳು ಮತ್ತು ಚಿಟ್ಟೆಗಳ ಮೇಲೂ ಪ್ರಯೋಗಮಾಡಿದೆ. ಪ್ರಯೋಗದ ನಂತರ ಜೀವಿತ ಪ್ರಾಣಿಗಳು ಬದುಕಿರುತ್ತವೆ ಎಂಬುದನ್ನು ತಿಳಿದ ನಾನು ಅಂತಿಮ ಪ್ರಯೋಗ ಮಾಡಲು ನಿರ್ಧರಿಸಿದೆ.

ಈ ಪ್ರಯೋಗದ ಅನೇಕ ಪರಿಣಾಮಗಳು ಬರಬಹುದೆಂದು ತಿಳಿದ ನಾನು ಪ್ರಯೋಗದ ಎಲ್ಲಾ ವಿವರಗಳನ್ನೂ ವಿಸ್ತಾರವಾಗಿ ಬರೆದು ಅವನ್ನು ಸುರಕ್ಷಿತವಾಗಿಟ್ಟೆ. ವೀಡಿಯೋ ಮತ್ತು ಟೇಪ್‌ರೆಕಾರ್ಡರ್‌ನ ವ್ಯವಸ್ಥೆಯನ್ನೂ ಮಾಡಿದೆ. ಕಡೆಗೆ ನಾನು ಪರಾವರ್ತನಕಾರಿ ಯಂತ್ರದೆದುರು ಹೋದೆ.

ಆಶ್ಚರ್ಯ! ಯಂತ್ರ ಅಳವಡಿಸಿದ ಧಾರೆಯೆದುರು ಹೋದಾಗ್ಯೂ ನಾನು ಸಾಮಾನ್ಯವಾಗಿಯೇ ಇದ್ದೆ. ನಾನು ಹೇಳಿದ್ದೆಲ್ಲವೂ 'ಟೇಪ್' ಆದರೂ ನನ್ನಲ್ಲಿ

ಪರಿವರ್ತನೆಯಾಗಿತ್ತು. ನನ್ನ ಒಟ್ಟಿಗಳು, ಪೆನ್ನು, ವಾಚು ಎಲ್ಲದರಲ್ಲೂ ಪರಿವರ್ತನೆಯಾಗಿತ್ತು. ನನ್ನ ಮಿದುಳಲ್ಲೂ ಪರಿವರ್ತನೆಯಾಗಿದ್ದರಿಂದ ಸಾಮಾನ್ಯ ಬರಹವನ್ನು ಓದುವುದಕ್ಕೂ ನನಗೆ ಕಷ್ಟವಾಗಲಾರಂಭಿಸಿತು. ಎಡ-ಬಲಗಳ ದಿಕ್ಕಿನಲ್ಲಿ ಭ್ರಮೆಯಾಗಲಾರಂಭಿಸಿತು. ಆದರೆ ಶಾರೀರಿಕ ದೃಷ್ಟಿಯಿಂದ ನಾನು ಆರೋಗ್ಯದಿಂದಿದ್ದೆ. ಹೌದು, ನಾನು ನನ್ನ ಎಡಗೈಯನ್ನು ಬಲಗೈಗಿಂತ ಹೆಚ್ಚು ಬಲಿಷ್ಠವಾಗಿದೆಯೆಂಬುದನ್ನರಿತೆ.

ನನ್ನ ಪ್ರಯೋಗವನ್ನು ಪೂರ್ಣಗೊಳಿಸಲು ಮತ್ತೆ ನಾನು ವಿಕಿರಣ-ಧಾರೆಯ ಮುಂದಿನಿಂದ ಹಾಯ್ದೆ. ನನ್ನ ನಂಬಿಕೆಯಂತೆಯೇ ನಾನು ಮತ್ತೆ ಸಾಮಾನ್ಯನಾದೆ. ಆದರೆ ಮಹತ್ವಪೂರ್ಣವಾದ ವಿಚಾರವೊಂದು ಘಟಿಸಿತು. ಇದರ ಅರಿವೆ ನನಗಿರಲಿಲ್ಲ. ಪ್ರಯೋಗದ ಮಧ್ಯೆ ಘಟಿಸಿದ ಯಾವ ಘಟನೆಯ ಸ್ಮೃತಿಯೂ ನನಗಿರಲಿಲ್ಲ. ನನ್ನ ಪ್ರಯೋಗದಲ್ಲಿ ಇದೊಂದು ದೊಡ್ಡ ದೋಷವೇ ಆಗಿತ್ತು. ಅದನ್ನು ಇದುವರೆಗೂ ನನ್ನಿಂದ ದೂರ ಮಾಡಲು ಸಾಧ್ಯವಾಗಿಲ್ಲ. ಇಂದು, ನಾನು ಮತ್ತೆ ನನ್ನ ಸಾಮಾನ್ಯ ಸ್ವರೂಪಕ್ಕೆ ಬಂದಾಗ ನನಗೆ ಈ ಭೇಟಿಯ ಯಾವ ನೆನಪೂ ಇರುವುದಿಲ್ಲ.

ಅಜೀತ್‌ನ ಮಾತುಗಳನ್ನು ಕೇಳುವಾಗ, ಅವೆಲ್ಲವೂ ಮಾಯಾಜಾಲ, ಮಿಥ್ಯೆಯಿಂದ ಕೂಡಿದ್ದು ಎಂಬ ಅನುಭವವಾಗುತ್ತಿತ್ತು. ನನ್ನ ಸಂದೇಹಗಳ ನಿವಾರಣೆಗಾಗಿ ನಾನೊಂದು ಪ್ರಶ್ನೆ ಮಾಡಿದೆ—

“ಗಣೇಶನ ವಿಗ್ರಹವೂ ಪ್ರತಿಬಿಂಬವೇ ?”

“ನೀನೇ ಯಾಕೆ ಪರೀಕ್ಷಿಸಬಾರದು ? ನೀನಂತೂ ಸಂಗ್ರಹಾಲಯದ ಕಾಂಪೌಂಡಿನೊಳಗೇ ಇದ್ದೀಯಾ” ಅಜೀತ್ ವ್ಯಾವಹಾರಿಕವಾಗಿ ಸಲಹೆಯಿತ್ತ.

ನಾನು ಅಜೀತ್‌ನೊಂದಿಗೆ ಸಂಗ್ರಹಾಲಯದ ಬ್ರಿಟಿಷ್-ಭಾರತ ಖಂಡದಲ್ಲಿ ಹೋದೆ.

ಗಣೇಶನ ವಿಗ್ರಹ ಅದೃಶ್ಯವಾಗಿತ್ತು !

ಅಜೀತ್‌ನೇ ಅದನ್ನು ಹೇಗೋ ಅದೃಶ್ಯಗೊಳಿಸಿ ಅದರ ಮೇಲೆ ಪ್ರಯೋಗ ಮಾಡಿದ್ದ.

“ಮತ್ತೆ ಪ್ರಮೋದನ ಕ್ರೀಡಾ ಪ್ರದರ್ಶನ ಬಗ್ಗೆ ?” ನಾನು ಪ್ರಶ್ನಿಸಿದೆ.

ಟೆಸ್ಟ್ ಮ್ಯಾಚಿಗೆ ಪೂರ್ವದಲ್ಲಿ ಪ್ರಮೋದ ಅವನನ್ನು ‘ಭೇಟಿಯಾಗಿದ್ದ ಸಾರಾಂಶವನ್ನು’ ಅಜೀತ್ ನನಗೆ ಹೇಳಿದ್ದ. ತನ್ನ ಕ್ರೀಡಾ ಪ್ರದರ್ಶನದ ಬಗ್ಗೆ ಅವನು ತುಂಬಾ ಚಿಂತಿತನಾಗಿದ್ದ. ಅವನ ಮಾತು ಕೇಳಿ ಅಜೀತ್‌ನಿಗೆ ಒಂದು

ವಿಚಾರ ಹೊಳೆಯಿತು—'ಒಂದು ವೇಳೆ ಪ್ರಮೋದನಿಗೆ ಅವನ ಪ್ರತಿಬಿಂಬದಲ್ಲಿ ಪರಿವರ್ತಿಸಿದರೆ; ಸರಿ, ಅವನು ಪ್ರಮೋದನ ಕಾಫಿಯಲ್ಲಿ ಮಾದಕ ವಸ್ತುವನ್ನು ಬೆರಸಿ ಅವನನ್ನು ಪ್ರಜ್ಞೆ ತಪ್ಪಿಸಿ ಅವನ ಮೇಲೆ ಪ್ರಯೋಗವನ್ನು ಪರೀಕ್ಷಿಸಿದ.

ಮಾರನೇ ದಿನ ಅಜೀತ್‌ಗೆ ಚಿಂತಿತನಾದ ಪ್ರಮೋದನ ಫೋನು ಸಿಕ್ಕಿತು. ಅವನು ಅವನಿದ್ದ ಹೋಟೆಲ್‌ಗೆ ಹೋದ. ತನ್ನ ಬಲಗೈ ಸಂಪೂರ್ಣ ಶಕ್ತಿಯನ್ನು ಕಳೆದುಕೊಂಡಿದೆ, ಆದರೆ ಎಡಗೈ ಸಾಕಷ್ಟು ಶಕ್ತಿಯನ್ನು ಹೊಂದಿದೆ ಎಂದು ಪ್ರಮೋದ ಹೇಳಿದ. ಅಜೀತ್ ಅವನಿಗೆ ಎಡಗೈಯಿಂದ 'ಬೋಲಿಂಗ್' ಮಾಡಲು ಸೂಚಿಸಿದ. ಅಲ್ಲದೆ, ಅವನಿಗೆ 'ನೆಟ್ ಪ್ರಾಕ್ಟೀಸ್' ಸಹ ಮಾಡಿಸಿದ.

ಕಡೆಗೆ ಅಜೀತ್ ಹೇಳಿದ, "ಉಳಿದ ವಿಚಾರಗಳೆಲ್ಲವೂ ನಿನಗೆ ಗೊತ್ತಿದೆ."

"ಅಜೀತ್, ನೀನು ನಿನ್ನ ಸಂಶೋಧನೆಯ ನಿಷ್ಕರ್ಷೆಗಳನ್ನು ತಕ್ಷಣ ಬಹಿರಂಗಪಡಿಸು. ನಿನಗೆ ನೊಬೆಲ್ ಬಹುಮಾನ ಸಿಗುತ್ತೆ" ಎಂದೆ ನಾನು.

"ಇಲ್ಲ, ಈಗ್ಲೇ ಬೇಡ! ಇದರಲ್ಲಿ ಇನ್ನೂ ದೋಷವಿದೆ. ದೋಷ ದೂರವಾಗುವವರೆಗೂ ನಾನು ಬಹಿರಂಗಪಡಿಸುವುದಿಲ್ಲ."

ನಾನು ಎಚ್ಚರಿಕೆ ಕೊಟ್ಟೆ, 'ಅಜೀತ್, ಒಂದು ವ್ಯವಹಾರಿಕ ಸಲಹೆ. ನೀನು ಪ್ರಕೃತಿಯ ಅಜ್ಞಾತ ನಿಯಮಗಳೊಡನೆ ಆಡುತ್ತಿರುವೆ. ಇಲ್ಲಿಯವರೆಗೆ ನಿನಗೆ ಯಶಸ್ಸು ಸಿಕ್ಕಿದೆ. ಆದರೆ, ಮುಂದೆಯೂ ಹೀಗೆಯೇ ಆಗುವುದೆಂಬ ಗ್ಯಾರಂಟಿ ಏನಿದೆ! ಈ ಎಲ್ಲಾ ವಿಷಯಗಳನ್ನು ರೆಕಾರ್ಡ್‌ನಲ್ಲಿ ಸುರಕ್ಷಿತವಾಗಿಡುವುದೇ ಬುದ್ಧಿವಂತಿಕೆ."

"ಹೌದು, ನಾನು ಹೇಗೆ ಮಾಡಿರುವೆ. ಯಾವ ವಿಜ್ಞಾನಿಯೇ ಆದರೂ ನನ್ನ ಪ್ರಯೋಗದ ವಿವರವನ್ನು ಓದಿ ಅದನ್ನು ಪುನರ್‌ಪ್ರಯೋಗಿಸಬಲ್ಲ."

ನಾನು ಅಜೀತ್‌ಗೆ ಹೇಳಲು ಬಯಸಿದೆ, ಆದರೆ ಅದು ವ್ಯರ್ಥವಾಗಿತ್ತು. ಅಜೀತ್‌ನಿಗೆ ಅವನ ನಿರ್ಣಯದಿಂದ ಕದಲಿಸುವುದು ಅಸಾಧ್ಯವಾಗಿತ್ತು. ಇದು ಅವನ ಅಭ್ಯಾಸವಾಗಿಬಿಟ್ಟಿತ್ತು.

ಕೆಲವು ತಿಂಗಳಾದ ಮೇಲೆ ನನಗೆ ಅಜೀತ್‌ನ ಪ್ರಯೋಗಶಾಲೆಯಿಂದ ಫೋನ್ ಬಂತು. ನಾನು ತಕ್ಷಣ ಅವನ ನಿರ್ದೇಶಕನ ಬಳಿಗೆ ಹೋದೆ ಯಾವುದೋ ಅನಿಷ್ಟದಿಂದ ಭಯಭೀತನಾಗಿ ನಾನು, ಬಾಗಿಲನ್ನು ತಟ್ಟಿದೆ. ಒಳಗೆ ನಿರ್ದೇಶಕನ ಜೊತೆ ಅಜೀತ್ ಕೂತಿರುವುದನ್ನು ಕಂಡು ನಾನು ನೆಮ್ಮದಿಯಿಂದ ಉಸಿರಾಡಿದೆ.

ಆದರೆ, ಇದು ಕ್ಷಣಮಾತ್ರಕ್ಕಾಗಿತ್ತು.

ಅಜೀತ್ ನನ್ನನ್ನು ಗುರುತಿಸಲೇ ಇಲ್ಲ. ಅವನ ಸ್ಮೃತಿ ಶಾಶ್ವತವಾಗಿ ಲುಪ್ತ ಗೊಂಡಿತ್ತು.

ನಾನು ಎಚ್ಚರವಹಿಸುತ್ತಾ "ಅಜೀತ್, ತನ್ನ ಪ್ರಯೋಗಗಳ ಲಿಖಿತ ವಿವರಣೆ ಯನ್ನು ಬಿಟ್ಟಿರುವನೇ ?" ಎಂದು ಕೇಳಿದೆ.

"ಹೀಗೇನಾದರೂ ಅವನು ಮಾಡಿದ್ದರೆ ಅದು ನಮಗೆ ಗೊತ್ತಿಲ್ಲ. ಅವನು ಯಾವ ಪ್ರಯೋಗದಲ್ಲಿ ಮಗ್ನನಾಗಿದ್ದನೋ ಅವೆಲ್ಲವೂ ಸ್ಫೋಟದಲ್ಲಿ ನಾಶ ವಾಗಿವೆ. ಕೋಣೆಯ ಪ್ರತಿಯೊಂದು ವಸ್ತುವೂ ಮುರಿದು ಚೂರು ಚೂರಾಗಿವೆ. ಆದರೆ, ಅವನು ಬದುಕಿದ್ದು ಅದೃಷ್ಟವೇ ಸರಿ."

ಎಷ್ಟೊಂದು ವಿಡಂಬನೆಯಾಗಿತ್ತು. ಅಜೀತ್‌ನಂತಹ ವಿಲಕ್ಷಣ ಪ್ರತಿಭಾ ಶಾಲಿಯಾದ ವಿಜ್ಞಾನಿಯು ಸ್ಮೃತಿ ಕಳೆದುಕೊಳ್ಳುವುದು ಸಾವಿನಂತೆಯೇ ಇತ್ತು.

ಇಂದು, ನಾನು ಈ ಎಲ್ಲಾ ಘಟನೆಗಳನ್ನು ವಿಚಿತ್ರವೆಂದು ತಿಳಿಯುತ್ತೇನೆ. ಆದರೆ ನಂಬದಂತಹ ಘಟನೆಯಲ್ಲವೆಂದೂ ತಿಳಿಯುವೆ. ಸಂಗ್ರಹಾಲಯದಲ್ಲಿ ನನ್ನ ಬಳಿ ಇದಕ್ಕಾಗಿ ಗಟ್ಟಿಯಾದ ಆಧಾರವಿದೆ—ಅದೇ ಗಣೇಶನ ಆ ದುರ್ಲಭ ವಿಗ್ರಹ.

ಡಿ. ಎನ್. ಶ್ರೀನಾಥ್



ದೇವರು ಎಷ್ಟು ದೊಡ್ಡ ಪ್ರಜಾಪ್ರಭುತ್ವವಾದಿ! ನಮ್ಮ ಎಷ್ಟು ತಪ್ಪು ಗಳನ್ನು, ಎಂಥೆಂಥ ಮೋಸಗಳನ್ನು ಸಹಿಸುತ್ತಾನೆ.

—ಗಾಂಧೀಜಿ

ಪುಸ್ತಕ ವಿಮರ್ಶೆ

ಬಾಹುಬಲಿ : (ಬಾನುಲಿ ರೂಪಕ) ಪ್ರಥಮ ಮುದ್ರಣ. ೧೯೮೨ ಪುಟಗಳು ೧೭+೮. ಬೆಲೆ ರೂ. ೨-೦೦

ವರಶಾಪ : ನಾಟಕ (ದ್ವಿತೀಯ ಮುದ್ರಣ) ೧೯೭೨- ಪುಟಗಳು ೪೧+೪. ಬೆಲೆ ರೂ. ೪-೦೦ ಎರಡೂ ಗ್ರಂಥಗಳ ಲೇಖಕರು : ಶ್ರೀ ಹೆಚ್. ಬಿ. ರಮೇಶ್. ಪ್ರಕಾಶಕರು ಲಕ್ಷ್ಮಿ ರಮೇಶ್, 'ಶ್ರೀಭೀಮು' ತೆಲುಗರ ಬೀದಿ ಹಾಸನ.

ಶ್ರವಣಬೆಳಗೊಳದ ಭಗವಾನ್ ಬಾಹುಬಲಿಯು ಸಾವಿರ ವರ್ಷದ ಮಹಾ ಮಸ್ತಕಾಭಿಷೇಕದ ೨೨, ಫೆಬ್ರವರಿ ೧೯೮೧ ರಂದು ಈ ಬಾಹುಬಲಿ ರೂಪಕ ವನ್ನು ಬೆಂಗಳೂರು ಬಾನುಲಿ ಬಿತ್ತರಿಸಿದೆ. ಗೊಮ್ಮಟೇಶನನ್ನು ಕುರಿತು ಲೇಖಕರು ರಚಿಸಿರುವ ಈ ರೂಪಕವನ್ನು ಹೆಣ್ಣು ಗಂಡುಗಳ ಧ್ವನಿಯಿಂದ ಹೇಳಿ ಸಿದ್ದಾರೆ. ಮಹಾನ್ ಕವಿಗಳು ಬರೆದ ಕವನಗಳಿಂದ ಆಯ್ದ ಭಾಗಗಳನ್ನು ಗಾಯಕರಿಂದ ಹಾಡಿಸಿದ್ದಾರೆ. ಕೇಳುಗರಿಗೆ ಗೊಮ್ಮಟನ ದಿವ್ಯ ದರ್ಶನವನ್ನು ಶ್ರವಣದ ಮೂಲಕ ಮಾಡಿಸಿದ್ದಾರೆ. ಲೇಖಕರು ವಂದನೆ, ಸ್ಮರಣೆಯೊಂದಿಗೆ ರೂಪಕ ಪ್ರಾರಂಭಿಸಿ ಕನ್ನಡದಲ್ಲಿ ಮೊದಲ ಬಾರಿಗೆ ಬಾಹುಬಲಿಯ ಕಥೆಯನ್ನು ಬರೆದ ಆದಿಕವಿ ಪಂಪನಿಗೆ, ಕನ್ನಡ ನಾಡಿನ ಪವಿತ್ರ ಭೂಮಿಯಲ್ಲಿ ಬಾಹುಬಲಿ ವಿಗ್ರಹವನ್ನು ಕೆತ್ತಿಸಿದ ಚಾವುಂಡರಾಯನಿಗೆ ತಮ್ಮ ಭಕ್ತಿ ತೋರಿದ್ದಾರೆ, ನೆನೆದಿದ್ದಾರೆ, ನಮಸ್ಕರಿಸಿದ್ದಾರೆ. ಭೋಗದ ಅಂತ್ಯ, ತ್ಯಾಗ, ವೈಭವದ ಅಂತ್ಯ ವೈರಾಗ್ಯವೆಂಬುದನ್ನು ತೋರಿ ರಸ, ಗಂಧ, ರೂಪ, ಸ್ಪರ್ಶ, ಶಬ್ದಗಳನ್ನೆಲ್ಲ ಮೆಟ್ಟಿ ಉಗ್ರ ತಪಸ್ಸನ್ನು ಆಚರಿಸಿ ನಿರ್ವಿಕಲ್ಪ ಸಮಾಧಿಯನ್ನು ಸಿದ್ಧಿಸಿಕೊಂಡು ಕೇವಲ ಜ್ಞಾನ ಪಡೆದ ಬಾಹುಬಲಿಯ ಚಿತ್ರವನ್ನು ಈ ಪುಟ್ಟ ಪುಸ್ತಕವಲ್ಲಿ ಚಿತ್ರಿಸಿದ್ದಾರೆ. ಹೆಚ್ಚು ಹೇಳಲು ಹೋಗದೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಚಿಕ್ಕದಾಗಿ ಚೊಕ್ಕದಾಗಿ ನುಡಿಸಿದ್ದಾರೆ. ಜೊತೆಗೆ ಇವರು ಪಂಪ, ನೇಮಿಚಂದ್ರ, ಅನಂತಕವಿ, ಚಿದಾನಂದಕವಿ, ಮತ್ತು ರಾಷ್ಟ್ರಕವಿ ಕುವೆಂಪು ಇವರುಗಳ ಕವನ ಗಳನ್ನು ಅಲ್ಲಲ್ಲೇ ಬಳಸಿದ್ದಾರೆ. ಅವು ಸೂಕ್ತವೂ ಗಮನಾರ್ಹವಾದವೂ ಆಗಿವೆ. ಪುಸ್ತಕದ ಕೊನೆಯಲ್ಲಿ ಗೊಮ್ಮಟ ವಿಗ್ರಹದ ಅಡಿಯಿಂದ–ಮುಡಿಯವರೆಗಿನ ಅಗಲ, ಎತ್ತರಗಳ ಪಟ್ಟಿ ಕೊಟ್ಟಿದ್ದಾರೆ. ಒಟ್ಟಿನಲ್ಲಿ ಲೇಖಕರು ಈ ಪುಟ್ಟ ರೂಪಕದಲ್ಲಿ ಗೊಮ್ಮಟಗಿರಿಕ್ಷೇತ್ರ ಮತ್ತು ಆಕರ್ಷಕ ವರ್ಣನೆಯೊಡನೆ ಗೊಮ್ಮಟ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ :: ಮೈಸೂರು-೪

Reg. No. KRNN. 29 / WPP 6 | LICENSE No. 21 LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyengar Manager Karnataka State Adult Education Council Press and Published by Karnataka State Adult Education Counc Mysore city (India)